ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ :
ಎಸ್.ಡಿ.ಎಮ್.ಸಿ. ಒಂದು ಅಧ್ಯಯನ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕರು :

ಶ್ರೀ ಸುಭಾಸ ರಾಮು ಜಾಧವ

ಮಾರ್ಗದರ್ಶಕರು :

ಡಾ|| ಎಸ್. ಓ. ಹಲಸಗಿ

ಶಿವಾನಂದ ಮಹಾವಿದ್ಯಾಲಯ,

ಕಾಗವಾಡ - ೫೯೧ ೨೨೩

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ,

ಹಾರೂಗೇರಿ - ೫೯೧೨೨೦

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೦೦೯

ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

ಎಸ್.ಡಿ.ಎಮ್.ಸಿ. ಒಂದು ಅಧ್ಯಯನ

ಸಂಶೋಧಕರು
ಶ್ರೀ ಸುಭಾಸ ರಾಮು ಜಾಧವ

ಮಾರ್ಗದರ್ಶಕರು
ಡಾ. ಎಸ್. ಓ. ಹಲಸಗಿ
ಶಿವಾನಂದ ಮಹಾವಿದ್ಯಾಲಯ, ಕಾಗವಾಡ

ಅಭಿವೃದ್ಧಿ ಅಧ್ಯಯನ ವಿಷಯದಲ್ಲಿ
ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ
೨೦೦೯

ಘೋಷಣಾ ಪತ್ರ

" ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ. ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ಎಸ್.ಓ.ಹಲಸಗಿ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ (ಸಮಾಜ ಕಾರ್ಯ) ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ. ಮತ್ತು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : ೨೫.೦೯.೨೦೦೯

ಶ್ರೀ ಸುಭಾಸ ರಾಮು ಜಾಧವ
ಎಂ.ಫಿಲ್ ವಿದ್ಯಾರ್ಥಿ,
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ

ದೃಢೀಕರಣ ಪತ್ರ

ಶ್ರೀ ಸುಭಾಸ ರಾಮು ಜಾಧವ ಇವರು " ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ. ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ (ಸಮಾಜ ಕಾರ್ಯ) ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ನಾನು ಯಾವುದೇ ಪದವಿಗಳಗಾಗಿ ಸಲ್ಲಿಸಿರುವುದಿಲ್ಲ. ಮತ್ತು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : ೨೫.೦೯.೨೦೦೯

ಡಾ.ಎಸ್.ಓ.ಹಲಸಗಿ
ಮಾರ್ಗದರ್ಶಕರು
ಶ್ರೀ ಬಿ.ಆರ್.ದರೂರ ಸಂಶೋಧನಾ ಕೇಂದ್ರ,
ಹಾರೂಗೇರಿ. ಮತ್ತು
ವಾಣಿಜ್ಯಶಾಸ್ತ್ರದ ಪ್ರಾಧ್ಯಾಪಕರು,
ಶಿವಾನಂದ ಮಹಾವಿದ್ಯಾಲಯ,
ಕಾಗವಾಡ

[illegible]

[illegible]

[illegible]

[illegible]

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಕ್ಷೇತ್ರ

ಅಧ್ಯಾಯ –೧

ಅಧ್ಯಯನದ ಉದ್ದೇಶ ಮತ್ತು ಕ್ಷೇತ್ರ

೧.೧ ಪೀಠಿಕೆ :

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟವನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಸಮುದಾಯವವನ್ನು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಮಾಡಲು ಬಹಳ ಹಿಂದಿನಿಂದಲೂ ಪ್ರಯತ್ನಗಳು ನಡೆದಿವೆ. ೧೯೬೪ರ ಕೊಠಾರಿ ಆಯೋಗದಿಂದ ಪ್ರಾರಂಭಿಸಿ, ೧೯೮೬ರ ವರೆಗಿನ ರಾಷ್ಟ್ರೀಯ ಶಿಕ್ಷಣ ನೀತಿಯವರೆಗೆ ಎಲ್ಲಾ ಆಯೋಗಗಳ ವರದಿಯಲ್ಲೂ ಶಾಲಾ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ಮಹತ್ವದ ಬಗ್ಗೆ ಉಲ್ಲೇಖವಿದೆ. ಆದರೂ ೧೯೯೦ರ ವರೆಗೂ ಶಾಲಾ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿರಲಿಲ್ಲ. ೧೯೯೦ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಜಾರಿಗೆ ಬಂದಾಗಿನಿಂದ ಶಾಲಾ ಮಟ್ಟದಲ್ಲಿದ್ದ ಶಾಲಾಭಿವೃದ್ಧಿಯಲ್ಲಿ ಸಮಿತಿಗಳು ಗ್ರಾಮೀಣ ಶಿಕ್ಷಣ ಸಮಿತಿಗಳಾಗಿ ಏರ್ಪಟ್ಟವು. ಈ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯದ ರಚನಾತ್ಮಕ ಹಾಗೂ ಕ್ರಿಯಾತ್ಮಕ ಪಾಲ್ಗೊಳ್ಳುವಿಕೆ ಪ್ರಾರಂಭವಾಯಿತು. ಪ್ರಥಮವಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿದ್ದ ಜಿಲ್ಲೆಗಳಲ್ಲಿ ಮಾತ್ರ ಗ್ರಾಮಶಿಕ್ಷಣ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಕ್ರಮೇಣ ಸರ್ವಶಿಕ್ಷಣ ಅಭಿಯಾನ ಯೋಜನೆಯಲ್ಲಿ ಸಮುದಾಯದ ಸಹಭಾಗಿತ್ವವನ್ನು ಒಂದು ಪ್ರಮುಖ ಅಂಶವನ್ನಾಗಿ ಪರಿಗಣಿಸಲಾಗಿದೆ.

ಸಮುದಾಯದ ಸಹಭಾಗಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡುವ ದೃಷ್ಟಿಯಿಂದ ೨೦೦೧ ರ ಹೊತ್ತಿಗೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಶಾಲೆಗಳಲ್ಲೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಸದರಿ ಸಮಿತಿಯು ಶಾಸನಬದ್ಧವಾಗಿ ರಚಿತವಾಗಿದ್ದು, 'ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ' ಕ್ಕೆ ನೀಡಿರುವ ಪ್ರಾಮುಖ್ಯತೆಯ ಸಂಕೇತವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಶಿಕ್ಷಣದ ವ್ಯವಸ್ಥೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಸಮುದಾಯವನ್ನು ಎಷ್ಟರ ಮಟ್ಟಿಗೆ ಶಿಕ್ಷಣದ ಪ್ರಗತಿಗಾಗಿ ಏಳ್ಗೆಗೆ ಎಷ್ಟು ಪ್ರಯತ್ನ ಮಾಡಿವೆ ಎಂದು ತಿಳಿದುಕೊಳ್ಳುವದಾಗಿದೆ.

೧.೨ ಸಂಶೋಧನೆಯ ವಿಷಯ :

"ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ. ಒಂದು ಅಧ್ಯಯನ" ಈ ಶೀರ್ಷಿಕೆಯ ಅಡಿಯಲ್ಲಿ ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೧.೩ ಸಂಶೋಧನೆಯ ಉದ್ದೇಶಗಳು :

ಸಂಶೋಧನೆ ಎಂಬುದು ಯಾವುದೇ ಕ್ಷೇತ್ರದಲ್ಲಿ ನಡೆಯುವುದಿದ್ದರೂ ಅದಕ್ಕೆ ತನ್ನದೆಯಾದ ಅಗತ್ಯತೆಗಳಿರುತ್ತವೆ. ಹಾಗೂ ಪ್ರಾಮುಖ್ಯವಿರುತ್ತದೆ. ಈ ಮಾತು ಸಾಮಾಜಿಕ ಸಂಶೋಧನೆಗಳ ಬಗೆಗೆ ನಿಜ. ಸಂಶೋಧನೆ ಎಂಬುದು ಜ್ಞಾನದ ಬಗೆಗಿನ ಒಂದು ಹೊಸ ಅನ್ವೇಷಣೆಯಾಗಿರುತ್ತದೆ. ಆದ್ದರಿಂದ ಜ್ಞಾನದಿಂದ ಲಭಿಸುವ ಅನುಕೂಲತೆಗಳು ಸಂಶೋಧನೆಯಿಂದಲೂ ಲಭ್ಯವಾಗುತ್ತವೆ. ಈಗಾಗಲೇ ತಿಳಿಸಲಾಗಿರುವಂತೆ ಜ್ಞಾನದಿಗಂತವನ್ನು ಇನ್ನಷ್ಟು ಮತ್ತಷ್ಟು ವಿಸ್ತೃತಗೊಳಿಸುವುದೇ ಸಂಶೋಧನೆಯ ಪರಮ ಗುರಿ. ಜ್ಞಾನ ಸಂಪತ್ತಿಗೆ ಎಲ್ಲೆ ಎಂಬುದೇ ಇಲ್ಲವಾಗಿರುವುದರಿಂದ ಅದನ್ನು ಬೆಂಬತ್ತಿ ಹೊರಡುವ ಸಂಶೋಧನೆಗೆ ಅಂತ್ಯವೆಂಬುದೇ ಇಲ್ಲ. ಭೌತ ವಿಜ್ಞಾನಗಳ ಕ್ಷೇತ್ರದಲ್ಲಿ ಹೇಗೆ ಹಾಗೆ ಸಾಮಾಜಿಕ ಜಗತ್ತಿನಲ್ಲಿಯೂ ಸಂಶೋಧನೆಗಳು ಅವ್ಯಾಹತವಾಗಿ ನಡೆಯುತ್ತಲೇ ಇವೆ.

ಪ್ರಸ್ತುತ ಸಂಶೋಧನೆಯ ಪ್ರಮುಖ ಉದ್ದೇಶಗಳು :

೧. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮೂಲ ಬೆಳವಣಿಗೆಯ ಬಗ್ಗೆ ತಿಳಿದುಕೊಳ್ಳುವದು.

೨. ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಪ್ರಕ್ರಿಯೆ ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸುವಲ್ಲಿ ಎಸ್.ಡಿ.ಎಮ್.ಸಿ.ಯ ಮಹತ್ವದ್ದಾಗಿದೆ ಎಂಬುದನ್ನು ತಿಳಿದುಕೊಳ್ಳುವದು.

೩. ಇಂದಿನ ಆಧುನಿಕ ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದ ಅವಶ್ಯಕತೆಯ ಬಗ್ಗೆ ತಿಳಿದುಕೊಳ್ಳುವದು.

೪. ಶಾಲಾ ಶಿಕ್ಷಣದ ಸಾರ್ವತ್ರಿಕರಣದಲ್ಲಿ ಸಮುದಾಯವನ್ನು ತೊಡಗಿಸುವಲ್ಲಿ ಎಸ್.ಡಿ.ಎಮ್.ಸಿ. ಸಹಾಯಕಾರಿಯಾಗಿದೆ ಎಂಬುದನ್ನು ತಿಳಿದುಕೊಳ್ಳುವದು.

೫. ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದಿಂದ ಉಂಟಾಗುವ ಅನುಕೂಲ ಮತ್ತು ಅನಾನುಕೂಲತೆಯ ಬಗ್ಗೆ ತಿಳಿದುಕೊಳ್ಳುವದು.

೬. ಶಾಲೆ ಮತ್ತು ಎಸ್.ಡಿ.ಎಮ್.ಸಿ.ಯು ವ್ಯವಸ್ಥಿತವಾಗಿ/ದಕ್ಷವಾಗಿ ಕಾರ್ಯನಿರ್ವಹಿಸಲು ಸಲಹೆ ಸೂಚನೆಗಳನ್ನು ನೀಡುವದು.

೧.೪ ಸಂಶೋಧನೆಯ ಪ್ರಾಕಲ್ಪನೆ :

ಸಂಶೋಧನೆ ಮಾಡಬೇಕಾದ ವಿಷಯದ ಆಯ್ಕೆಯಾದ ಮೇಲೆ ಅಥವಾ ಸಂಶೋಧನೆಯ ವಸ್ತು ಯಾವುದೆಂದು ತಿಳಿದ ಮಲೆ ಅದಕ್ಕೆ ಸಂಬಂಧಿಸಿದಂತೆ ಹಲವಾರು ಸಂಗತಿಗಳು ಅಥವಾ ಮಾಹಿತಿಗಳು ಆರಂಭದಲ್ಲಿಯೇ ಸಂಶೋಧದಕನಿಗೆ ತಿಳಿದು ಬರುವುದುಂಟು. ಈ ಆರಂಭಿಕ ಮಾಹಿತಿಯ ಮತ್ತು

ತನ್ನ ಅನುಭವ ಚಿಂತನೆ ಹಾಗೂ ಊಹಾಶಕ್ತಿಯ ಆಧಾರದ ಮೇಲೆ ಸಂಶೋದಕನು .ಸಂಶೋಧನೆ ವಿಷಯದ ಬಗ್ಗೆ ಒಂದು ಅಥವಾ ಕೆಲವು ನಿರ್ದಿಷ್ಟ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲೂಬಹುದು. ಈ ಅಭಿಪ್ರಾಯಗಳು ತಾತ್ಕಾಲಿಕ ಸ್ವರೂಪದವುಗಳಾದರೂ ಅಧ್ಯಯನದಲ್ಲಿ ಬಹಳಷ್ಟು ಸಹಾಯಕವಾಗುತ್ತವೆ. ಇಂತಹ ತಾತ್ಕಾಲಿಕ ಸ್ವರೂಪದ ಅಭಿಪ್ರಾಯಗಳನ್ನು ಆಧಾರಕಲ್ಪಿಸಿವೆ ಅಥವಾ ಪ್ರಾಕಲ್ಪನೆ ಎಂದು ಕರೆಯಲಾಗಿದೆ.

ಸಂಶೋಧನೆಯ ವಿಷಯ ಇನ್ನೂ ಪೂರ್ಣವಾದ ತನಿಖೆಗೆ ಒಳಪಡುವ ಮೊದಲು ಅದರ ಸತ್ಯಾಸತ್ಯತೆಯ ನಿಷ್ಕರ್ಷೆ ಇನ್ನೂ ಆಗದೇ ಇರುವುದರಿಂದ ಅದರ ಸತ್ಯಾಂಶವು ಹೀಗಿರಬಹುದೆಂದು ಸಂಶೋಧಕರು ಮಾಡುವ ಒಂದು ಊಹೆ ಅಥವಾ ಕಲ್ಪನೆಯೇ ಆಧಾರಕಲ್ಪನೆ ಅಥವಾ ಪ್ರಾಕಲ್ಪನೆ ಎನ್ನಿಸಿಕೊಳ್ಳುವದು. ಪ್ರಾಕಲ್ಪನೆ ಎಂಬುದು ಆಯ್ಕೆಯಾದ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಆರಂಭಿಕ ಪ್ರಸ್ತಾವನೆಯೂ ಹೌದು.

ಈ ಕಿರು ಸಂಶೋಧನೆಗೆ ಸಂಬಂಧಿಸಿದಂತೆ ಹಾಕಿಕೊಂಡ ಪ್ರಾಕಲ್ಪನೆಗಳೆಂದರೆ,

* " ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಗಳು ದಕ್ಷವಾಗಿ ಕಾರ್ಯ ನಿರ್ವಹಿಸುತ್ತವೆ".
* "ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ಪಾಲ್ಗೊಳ್ಳುವಂತೆ ಮಾಡಲು ಎಸ್.ಡಿ.ಎಮ್.ಸಿಯು ಸಹಾಯಕಾರಿಯಾಗಿದೆ".
* "ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಗಳಿಗೆ ಬೇಕಾಗಿರುವ ಭೌತಿಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಮರ್ಥವಾಗುತ್ತವೆ".

ಸಂಶೋಧನೆಯಲ್ಲಿ ಪ್ರಾಕಲ್ಪನೆಯ ಮಹತ್ವ :

ಸಂಶೋಧನೆಯು ವಾಸ್ತವಿಕವಾಗಿ ಆರಂಭಗೊಳ್ಳುವುದೆ ಪ್ರಾಕಲ್ಪನೆಯಿಂದ ಒಂದು ಅಥವಾ ಅದಕ್ಕೂ ಹೆಚ್ಚು ಪ್ರಾಕಲ್ಪನೆಗಳನ್ನು ರಚಿಸಿಕೊಳ್ಳದೇ ಯಾವುದೇ ಸಂಶೋಧಕನು ಸಂಶೋಧನ ಕೆಲಸವನ್ನು ಕೈಗೊಳ್ಳುವಂತಿಲ್ಲ. ಪ್ರಾಕಲ್ಪನೆಯನ್ನು ರಚಿಸಿಕೊಳ್ಳಲು ಆತ ಅಸಮರ್ಥವಾಗಿದ್ದಲ್ಲಿ ಸಂಶೋಧನೆ ಕಾರ್ಯಕ್ಕೆ ಆತ ಇನ್ನೂ ಸಿದ್ಧನಾಗಿಲ್ಲ ಎಂದೇ ಅರ್ಥ. ಪ್ರಾಕಲ್ಪನೆಯ ಹೊರತಾಗಿ, ದಿಕ್ಕು-ದಿಸೆಯಿಲ್ಲದೆ ಸಂಗ್ರಹಿಸುವ ಮಾಹಿತಿ ಆತನ ಅನ್ವೇಷಣೆಗೆ ಸಹಾಯಕವಾಗಲಾರದು. ಸಂಶೋಧನಾ ಕಾರ್ಯದಲ್ಲಿ ಪ್ರಾಕಲ್ಪನೆಯು ಅತ್ಯಂತ ಪ್ರಮುಖವಾದುದಾಗಿದ್ದು, ಈ ಕೆಳಗಿನ ವಿವರಣೆ ಅದರ ಪ್ರಾಮುಖ್ಯವನ್ನು ಒತ್ತಿ ಹೇಳುವುದು.

೧. ಸಂಶೋಧಕನಿಗೆ ಮಾರ್ಗದರ್ಶನ ಮಾಡಲು.

೨. ಸಂಶೋಧನೆಯ ಮೇಲೆ ಕೇಂದ್ರೀಕರಿಸಲು.

೩. ಸಂಶೋಧನ ಕಾರ್ಯಕ್ಕೊಂದು ಚೌಕಟ್ಟನ್ನು ಒದಗಿಸಲು.

೪. ಉದ್ದೇಶರಹಿತವಾದ ಪರಿಶ್ರಮದ ನಿವಾರಣೆ ಮಾಡಲು.

೫. ಪ್ರಾಕಲ್ಪನೆಯು ಸಂಶೋಧನೆಯ ಮುನ್ನೋಟವನ್ನೇ ನಿರ್ಧರಿಸುವುದು.

೧.೫ ಸಂಶೋಧನೆಯ ವಿಧಾನ :

ಸಂಶೋಧನೆಗಳನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಕೈಗೊಳ್ಳಬಹುದಾಗಿದ್ದು, ಆದರೆ ನಾನು ಕೈಕೊಂಡ ಸಂಶೋಧನೆಯಲ್ಲಿ ಎರಡು ಪ್ರಕಾರದ ಸಂಶೋಧನೆಯ ವಿಧಾನಗಳನ್ನು ಅಳವಡಿಸಿಕೊಂಡಿದ್ದೇನೆ. ಅವುಗಳೆಂದರೆ,

೧. ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕ ವಿಧಾನ

೨. ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನೆಗಳು.

ಈ ಎರಡು ವಿಧಾನವನ್ನು ಬಳಕೆ ಮಾಡಿಕೊಂಡು. 'ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದ' ವಿಷಯದ ಬಗ್ಗೆ ವಿವರವಾದ ಸಂಶೋಧನೆಯನ್ನು ಕೈಗೊಂಡಿದ್ದೇನೆ.

೧.೬ ಸಂಶೋಧನೆಯ ಕ್ಷೇತ್ರ :

ಸಂಶೋಧಕರು ಸಂಶೋದನೆಯನ್ನು ಕೈಗೊಳ್ಳಬೇಕಾದರೆ ಆತನಿಗೆ ನಿರ್ದಿಷ್ಟವಾದ ಕ್ಷೇತ್ರ ಬೇಕಾಗುತ್ತದೆ. ಕ್ಷೇತ್ರವಿಲ್ಲದೆ ಸಂಶೋಧನೆಯನ್ನು ಕೈಗೊಳ್ಳಲು ಸಾಧ್ಯವಿಲ್ಲ. ನಾನು ಸಂಶೋಧನೆ ಯನ್ನು ಕೈಗೊಳ್ಳಲು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಚಡಚಣ ವಲಯವನ್ನು ತೆಗೆದುಕೊಂಡಿದ್ದೇನೆ. ಈ ವಲಯದಲ್ಲಿ ಸಮಾರು ೫೦ ಕಿ.ಪ್ರಾ. ಶಾಲೆಗಳಿವೆ. ಈ ಶಾಲೆಗಳಲ್ಲಿ ೨೦೦೬ ರಿಂದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಗಳು ಇಲ್ಲಿರುವ ಗ್ರಾಮಗಳು ಶಾಲಾ ವಿಷಯದಲ್ಲಿ ಎಷ್ಟರ ಮಟ್ಟಿಗೆ ಸಹಭಾಗಿತ್ವಗೊಳ್ಳುತ್ತವೆ ಎಂದು ತಿಳಿದುಕೊಳ್ಳಲು ಅದಕ್ಕೆ ದಕ್ಷವಾಗಿ ಕಾರ್ಯನಿರ್ವಹಿಸಲು ಬೇಕಾಗುವ ಸಲಹೆ ಸೂಚನೆಗಳನ್ನು ನೀಡುವ ಉದ್ದೇಶದಿಂದ ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ.

೧.೭ ಮಾದರಿ ನಮೂನೆಯ ಆಯ್ಕೆ :

ನನ್ನ ಈ ಒಂದು ಸಂಶೋಧನೆಯಲ್ಲಿ ಮಾದರಿ ನಮೂನೆಯನ್ನು ಚಡಚಣ ವಲಯದಲ್ಲಿ ಬರುವ ೫೦ ಕ್ರಿರಿಯ ಪ್ರಾಥಮಿಕ ಶಾಲೆಗಳಲ್ಲಿ ೨೦ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ಶಾಲೆಗಳಲ್ಲಿರುವ ಒಬ್ಬ ಮುಖ್ಯ ಗುರುಗಳ ಮತ್ತು ಒಬ್ಬ ಸಹ ಶಿಕ್ಷಕರನ್ನು ಇದರ ಜೊತೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿರುವ ಎಲ್ಲ ಸದಸ್ಯರನ್ನು ಪ್ರತಿಸ್ಪಂದಿಗಳಾಗಿ ನಮೂನೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ೨೦ ಜನ ಶಾಲಾ ಶಿಕ್ಷಕರು. ೨೦ ಜನ ಎಸ್.ಡಿ.ಎಮ್.ಸಿ.ಯ

ಸದಸ್ಯರನ್ನು, ಸರಳವಾದ ಯಾದೃಚಿಕ ನಮೂನೆಯನ್ನು ಆಯ್ಕೆ ಮಾಡಿಕೊಂಡು ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

೧.೮ ದತ್ತಾಂಶಗಳ ಸಂಗ್ರಹಣೆಯ ವಿಧಾನಗಳು :

ಸಂಶೋಧನೆಗೆ ಬೇಕಾಗಿರುವ ದತ್ತಾಂಶಗಳನ್ನು ಸಂಗ್ರಹಣೆಯನ್ನು ಮಾಡಲು ನಾನು ಮುಖ್ಯವಾಗಿ ಎರಡು ವಿಧಾನಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಅವುಗಳೆಂದರೆ,

೧. ಪ್ರಶ್ನಾವಳಿ ವಿಧಾನ

೨. ಸಂದರ್ಶನ ವಿಧಾನ.

ಈ ಎರಡು ವಿಧಾನಗಳು ನನ್ನ ಸಂಶೋಧನೆಗೆ ಬೇಕಾಗುವ ದತ್ತಾಂಶಗಳನ್ನು ಸಂಗ್ರಹಿಸಲು ಉಪಯುಕ್ತವಾಗಿರುವುದರಿಂದ ಈ ವಿಧಾನಗಳನ್ನು ಬಳಸಿಕೊಂಡಿದ್ದು ಸಂಶೋಧನೆಗೆ ಬೇಕಾದ ದತ್ತಾಂಶಗಳನ್ನು ಸಂಗ್ರಹಣೆಯನ್ನು ಮಾಡಿಕೊಳ್ಳಲಾಗಿದೆ.

ಅಧ್ಯಾಯ ೨

ಸಮುದಾಯ ಮತ್ತು ಶಿಕ್ಷಣ

ಅಧ್ಯಾಯ ೨

ಸಮುದಾಯ ಮತ್ತು ಶಿಕ್ಷಣ

೨.೧ ಸಮುದಾಯ :

ಮಾನವ ಸಮಾಜಜೀವಿ. ಅವನು ಒಂಟಿಯಾಗಿ ಜೀವಿಸಲಾರ ಸಮಾಜದ ಸಂಪರ್ಕರಹಿತವಾದ ಮಾನವನ ಸ್ಥಿತಿ ನೀರಿನಿಂದ ಹೊರತೆಗೆದ ಮೀನಿನಷ್ಟು ಕ್ಷಣಿಕವಾಗಿದೇ ಹೋದರೂ ಅವನು ನಿಜಮಾನವಾಗಿ ಬಾಳಲಾರ. ಆದ್ದರಿಂದ ಮಾನವನು ಯಾವಾಗಲೂ ಸಾಂಘಿಕವಾಗಿ ಸಮುದಾಯದಲ್ಲಿಯೇ ಜೀವಿಸುತ್ತಾನೆ. ಅವನ ಅಪಾರ ಬೇಡಿಕೆಗಳನ್ನು ಸಮುದಾಯದ ಚೌಕಟ್ಟಿನಲ್ಲಿಯೇ ಮಾತ್ರ ಪೂರೈಸಿಕೊಳ್ಳಲು ಸಾಧ್ಯ. ಮಾನವ ಸೃಷ್ಟಿಯ ಕಿರೀಟನಾಗಿದ್ದಾನೆ, ಅವನಿಗೆ ಆಲೋಚನಾ ಶಕ್ತಿಯಿದೆ. ಬುದ್ಧಿಶಕ್ತಿ, ವಾಕ್ ಶಕ್ತಿಯಿದೆ. ಆನಂದಪಡುವ ಶಕ್ತಿಯಿದೆ. ಇವು ಬೇರಾವ ಪ್ರಾಣಿಗಳಿಗೂ ಇಲ್ಲ. ಈ ಗುಣಗಳಿಂದಾಗಿಯೇ ಅವನು ಶ್ರೇಷ್ಠ ಜೀವಿ ಎನಿಸಿಕೊಳ್ಳಲು ಸಾಧ್ಯವಾಗಿದೆ. ಅಂತೆಯೇ ಮಾನವ ಸುಖಸಂತೋಷದಿಂದ ಬಾಳಲು ಸಮುದಾಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ. ಈ ಸಮುದಾಯ ವ್ಯವಸ್ಥೆಯಲ್ಲಿ ಅನೇಕ ಸಮಸ್ಯೆ ಮತ್ತು ಸವಾಲುಗಳು ಎದುರಾಗುತ್ತಿವೆ. ಈ ಸಮಸ್ಯೆಗಳನ್ನು ತೊಡೆದು ಹಾಕಲು ಶಿಕ್ಷಣ ಎಂಬ ನಿಯೋಗವು ಬಹಳಷ್ಟು ಸಹಾಯಕಾರಿಯಾಗಿದೆ ಎಂದು ಹೇಳಬಹುದು.

೨.೨ ಸಮುದಾಯದ ಅರ್ಥ :

ಸಮುದಾಯ ಎಂಬ ಪದವು ನಮ್ಮ ದೈನಂದಿನ ಸಂಭಾಷಣೆಯಲ್ಲಿ ಬಳಕೆಯಲ್ಲಿದ್ದರೂ ಸಮಾಜ ಶಾಸ್ತ್ರದಲ್ಲಿ ಅದನ್ನೊಂದು ಮೂಲಭೂತ ಪರಿಕಲ್ಪನೆಯಾಗಿ ಬಳಸಲಾಗುತ್ತಿದೆ. ಆದಾಗ್ಯೂ ಈ ಪರಿಕಲ್ಪನೆಯ ಬಗ್ಗೆ ಸಮಾಜಶಾಸ್ತ್ರಜ್ಞರಲ್ಲಿ ಸಹಮತವಿದೆ ಎನ್ನಲಾಗದು. ಹತ್ತಾರು ಕುಟುಂಬಗಳನ್ನು ಒಳಗೊಂಡಿರುವ ಚಿಕ್ಕ ನೆರೆಹೊರೆಯನ್ನು ಒಂದು ಸೂಕ್ಷ್ಮ ಸಮುದಾಯ ಎಂದು ಸಂಭೋದಿಸಲಾಗುವಂತೆ ಲಕ್ಷಾವಧಿ ಜನರನ್ನು ಒಳಗೊಂಡಿರುವ ಬೃಹತ್ ನಗರಗಳನ್ನು ಹಾಗೂ ದೇಶಗಳನ್ನು ಸಮುದಾಯ ಎಂದು ಕರೆಯುವುದುಂಟು ಹಾಗೆಯೇ ಸಾಮಾನ್ಯ ಜನರಂತೂ ಜಾತಿ ಸಮುದಾಯ, ಜನಾಂಗೀಯ ಸಮುದಾಯ, ಧಾರ್ಮಿಕ ಸಮುದಾಯ, ಸ್ತ್ರೀ ಸಮುದಾಯ, ಯುವ ಸಮುದಾಯ, ಭಾಷಾ ಸಮುದಾಯ, ಬುಡಕಟ್ಟು ಸಮುದಾಯ, ವೃತ್ತಿ ನಿರಂತರ ಸಮುದಾಯ ಮುಂತಾದ ಬಗೆಬಗೆಯ ಮಾನವ ಸಮೂಹಗಳನ್ನು ಸಂಕೇತಿಸುವಾಗಲೂ ಸಮುದಾಯ ಎಂಬ

ಪದವನ್ನು ಬಳಸುವುದುಂಟು. ಆದರೆ ಸಮಾಜಶಾಸ್ತ್ರದಲ್ಲಿ ಸಮುದಾಯ ಎಂಬ ಪದಕ್ಕೆ ವಿಶಿಷ್ಠ ಅರ್ಥವಿದೆ. ಸಾಮಾನ್ಯವಾಗಿ ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ವಾಸಿಸುವ ಮತ್ತು ಒಂದೇ ಬಗೆಯ ಆಸಕ್ತಿಗಳನ್ನು ಹೊಂದಿರುವ ಜನಸಮೂಹಕ್ಕೆ ಸಮುದಾಯ ಎನ್ನುತ್ತೇವೆ.

೨.೩ ಸಮುದಾಯದ ವ್ಯಾಖ್ಯೆಗಳು :

೧) ಬೋಗಾರ್ಡಸ್ ರ ಪ್ರಕಾರ :

"ನಾವು ನಮ್ಮವರು ಎಂಬ ಭಾವನೆಯೊಂದಿಗೆ ಒಂದು ನಿಶ್ಚಿತ ಭೂ ಪ್ರದೇಶದಲ್ಲಿ ವಾಸಿಸುವ ಜನಸಮೂಹವನ್ನು ಸಮುದಾಯವೆನ್ನಬಹುದು."

೨) ಕಿಂಗ್ಸಲೀ ಡೇವಿಸ್ ರ ಪ್ರಕಾರ :

"ಸಾಮಾಜಿಕ ಜೀವನದ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನ ಸಮೂಹವನ್ನು ಸಮುದಾಯ ಎನ್ನಬಹುದು."

೩) ಮೆಕೈವರ್ ಮತ್ತು ಪೇಜ್ ರ ಪ್ರಕಾರ :

"ಸಾಮಾಜಿಕ ಸಾಮರಸ್ಯ ಅಥವಾ ಸಾಮಂಜಸ್ಯವನ್ನು ಹೊಂದಿರುವ ಒಂದು ಸಾಮಾಜಿಕ ನೆಲೆಯನ್ನು ಸಮುದಾಯ ಎನ್ನಬಹುದು".

ಒಟ್ಟಿನಲ್ಲಿ ಸಮುದಾಯವು ನಮ್ಮ ಸಾಮಾಜಿಕ ಜೀವನವನ್ನು ಒಳಗೊಂಡಿರುವ ಒಂದು ವಿಶಾಲ ವ್ಯವಸ್ಥೆ.

೨.೪ ಸಮುದಾಯದ ಪ್ರಮುಖ ಲಕ್ಷಣಗಳು :

ಸಮುದಾಯ ಹೊಂದಿರುವ ಪ್ರಮುಖ ಲಕ್ಷಣಗಳು ಈ ಕೆಳಗಿನಂತಿವೆ.

೧) ಸ್ಥಾನಿಯತೆ :

ಸ್ಥಾನಿಯತೆಯು ಸಮುದಾಯದ ಭೌತಿಕ ಲಕ್ಷಣವಾಗಿದೆ ಸಮುದಾಯವು ಒಂದು ಪ್ರಾದೇಶಿಕ ಸಮೂಹವಾಗಿದ್ದು, ನಿರ್ದಿಷ್ಟ ಭೌತಿಕ ಸ್ಥಳವೊಂದರಲ್ಲಿ ಅದರ ಸದಸ್ಯರುಗಳು ಶಾಶ್ವತವಾಗಿ ನೆಲೆಯೂರಿದ್ದಾರೆ. ಎಂಬಂಶವನ್ನು ಸ್ಥಾನೀಯತೆಯು ಸೂಚಿಸುವದು. ಈ ಭೌತಿಕ ಅಥವಾ ಭೌಗೋಳಿಕ

ಸ್ಥಳವು ಗ್ರಾಮ, ನಗರ, ಪಟ್ಟಣ ಗಿರಿಜನರ ವಾಸ ಪ್ರದೇಶ ಹೀಗೆ ಯಾವುದೋ ಆಗಿರಬಹುದು. ಗಾತ್ರದಲ್ಲಿ ಅದು ಚಿಕ್ಕದಿರಬಹುದು. ಇಲ್ಲವೇ ದೊಡ್ಡದಿರಬಹುದು. ಒಂದೆಡೆ ನೆಲೆಸಿರುವ ಕಾರಣ ಜನರೊಳಗೆ ನಿರಂತರವಾದ ಸಂಪರ್ಕ ಸಂಬಂಧಗಳ ಬೆಳೆದು ಬರಲು ಸಾಧ್ಯವಾಗುವುದು. ಈ ಶಾಶ್ವತ ನೆಲೆಯು ಅವರುಗಳಿಗೆ ರಕ್ಷಣೆ ಮತ್ತು ಭದ್ರತೆಯನ್ನು ಒದಗಿಸುವದು ಸಮುದಾಯದ ಭೌತಿಕ ನೆಲೆಯು ಜನರ ಸಾಮಾಜಿಕ ಜೀವನದ ಮೇಲೆ ಅವರ ಕುಟುಂಬ, ಮತ ಧರ್ಮ, ನಂಬಿಕೆ, ಶ್ರದ್ಧೆ, ಆಚಾರ ವಿಚಾರ-ವಿಹಾರ ವ್ಯವಹಾರ, ಉದ್ಯೋಗ ವ್ಯಾಪಾರೋದ್ಯಮಗಳ ಮೇಲೆ ಬಹಳ ಗಣನೀಯವಾದ ಪ್ರಭಾವ ಬೀರುವದು.

೨) ಸಾಮುದಾಯಿಕ ಭಾವನೆ :

ಸ್ಥಾನಿಯತೆಯು ಒಂದು ಅವಶ್ಯವಾದ ಅಂಶವಾಗಿದ್ದರೂ ಅದೊಂದೇ ಸಮುದಾಯವನ್ನು ನಿರ್ಮಿಸಲಾರದು. ಅದರೊಂದಿಗೆ ಒಂದು ನಿರ್ದಿಷ್ಟ ಜಾಗದಲ್ಲಿ ವಾಸಿಸುವ ಜನರು ನಾವು ನಮ್ಮವರು ಅಥವಾ ನಾವು ಪರಸ್ಪರ ಒಂದುಗೂಡಿದವರು ಎಂಬ ಭಾವನೆಗಳನ್ನು ಹೊಂದಿರುವದು ಅವಶ್ಯ. ಅಂತಹ ಭಾವನೆಯನ್ನು ಇಲ್ಲಿ ಸಾಮುದಾಯಿಕ ಭಾವನೆ ಎನ್ನಲಾಗಿದೆ. ಅಂದರೆ ನಾವು-ನಮ್ಮವರು ಎಂಬ ಭಾವನೆ ಅಥವಾ ಒಂದು ಸ್ಥಳೀಯ ಸಮೂಹದೊಂದಿಗೆ ಪೂರ್ಣ ಅರಿವಿನೊಂದಿಗೆ ಅಲ್ಲಿನ ಜನರು ತಮ್ಮನ್ನು ತಾವು ಗುರುತಿಸಿಕೊಳ್ಳುವುದು ಎಂದರ್ಥ.

೩) ಸಾಪೇಕ್ಷ ಶಾಶ್ವತತೆ :

ಸಮುದಾಯವು ಜನಮಂದೆ ಅಥವಾ ಶ್ರೋತೃ ವರ್ಗದ ಸಮೂಹದಂತೆ ಕ್ಷಣಿಕವಾದುದಲ್ಲ ಆದರೆ ಸ್ಥಿರವಾದುದು. ಜನರು ಒಂದೆಡೆ ನೆಲೆ ನಿಂತು ವಾಸಿಸಲು ಆರಂಭಿಸಿದ ಮೇಲೆ ಅದನ್ನು ಅಷ್ಟು ಬೇಗನೆ ಬಿಟ್ಟು ಇನ್ನೊಂದೆಡೆಗೆ ಪಯಣಿಸಲಾರರು ಅದರಲ್ಲೂ ಸ್ಥಿರಾಸ್ತಿಯನ್ನು ಮಾಡಿಕೊಂಡ ಮೇಲಂತೂ ಆ ಭಾಗವನ್ನು ಶಾಶ್ವತವಾಗಿ ಬಿಟ್ಟು ಹೊರಡುವುದು ದೂರವೇ ಉಳಿಯಿತು ತಾವು ಹುಟ್ಟಿ ಬೆಳೆದು ಬಂದ ಭೂಮಿಯೊಂದಿಗೆ ಭಾವನಾತ್ಮಕ ಸಂಬಂಧವೂ ಕೂಡ ಅದನ್ನು ಬಿಟ್ಟು ಹೋಗದಂತೆ ಒತ್ತಡ ಹೇರಿ ಅವರನ್ನು ಶಾಶ್ವತವಾಗಿ ಒಂದೆಡೆ ನಿಲ್ಲುವಂತೆ ಮಾಡುವದು.

೪) ಸ್ವಾಭಾವಿಕತೆ :

ಸಮುದಾಯವು ಮಾನವನ ಉದ್ದೇಶಪೂರ್ವಕ ಪ್ರಯತ್ನದಿಂದ ಸೃಷ್ಟಿಯಾದುದಲ್ಲ. ಸಾಮಾನ್ಯವಾಗಿ ಅದು ಸಹಜವಾಗಿ ತನ್ನಿಂದ ತಾನೇ ವಿಕಾಸಹೊಂದಿ ಅಸ್ತಿತ್ವಕ್ಕೆ ಬರುವಂತಹುದು. ಜನರು ಸಮುದಾಯದ ಸದಸ್ಯರಾಗುವುದೂ ಕೂಡ ತಮ್ಮ ಹುಟ್ಟಿನಿಂದಲೇ ಆದ್ದರಿಂದ ಅದರ ಸದಸ್ಯತ್ವವು ಅನೈಚ್ಛಿಕವಾದುದು. ಸಮುದಾಯವು ಆಕಸ್ಮಿಕವಾದುದಾಗಲೀ ಕೃತ್ರಿಮವಾದುದಾಗಲೀ ಅಲ್ಲ

ಇದ್ದಕ್ಕಿದ್ದಂತೆ ದಿಢೀರನೇ ಸಮುದಾಯವೆಂದಿಗೂ ಉದಯಿಸದು ಅದು ಕ್ರಮೇಣವಾಗಿ ಮಂದಗತಿಯಿಂದ ವಿಕಾಸ ಹೊಂದಿ ಬರುವುದು.

೫) ಸಮುದಾಯದ ಗಾತ್ರ :

ಸಮುದಾಯವು ಗಾತ್ರದಲ್ಲಿ ಚಿಕ್ಕದಾಗಿರಬಹುದು ಇಲ್ಲವೆ ದೊಡ್ಡದಾಗಿರಬಹುದು ಹಳ್ಳಿ ಪಟ್ಟಣಗಳಂತಹ ಚಿಕ್ಕ ಸಮುದಾಯಗಳಿರುವಂತೆ ನಗರ ರಾಷ್ಟ್ರಗಳಂತಹ ಬೃಹತ್ ಸಮುದಾಯಗಳೂ ಇವೆ.

೬) ಸಾಮಾಜಿಕ ನಿಯಂತ್ರಣ :

ಪ್ರತಿಯೊಂದು ಸಮುದಾಯವು ಕಾಲಾನುಕ್ರಮದಲ್ಲಿ ತನ್ನದೇ ಆದ ಸಾಮಾಜಿಕ ನಿಯಮಗಳನ್ನು ಬೆಳೆಸಿಕೊಂಡು ತನ್ನ ಸದಸ್ಯರುಗಳ ವರ್ತನೆಯನ್ನು ನಿಯಂತ್ರಿಸುವದು. ಸಮುದಾಯದ ಸ್ವರೂಪಕ್ಕನುಸರಿಸಿ ಅದರ ನಿಯಮಗಳಿರುತ್ತವೆ.

ಉದಾ : ಗ್ರಾಮೀಣ ಹಾಗೂ ಆದಿವಾಸಿ ಸಮುದಾಯವನ್ನು ನಿಯಂತ್ರಣ ಸಾಧನಗಳಾದ, ರೂಢಿಗಳು, ಲೋಕಾಚಾರಗಳು, ನೈತಿಕ ನಿಯಮಗಳು. ಔಪಚಾರಿಕ ನಿಯಂತ್ರಣ ಸಾಧನಗಳಾದ ನ್ಯಾಯಾಲಯ, ಕಾನೂನು, ಪೋಲೀಸ್ ವ್ಯವಸ್ಥೆ ಮುಂತಾದವುಗಳು.

೨.೫ ಸಮುದಾಯದ ಸಮಸ್ಯೆಗಳು :

ಪ್ರತಿಯೊಂದು ಸಮಾಜವು ತನ್ನದೇಯಾದ ರೀತಿಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತವೆ ಅಂತಹ ಸಮಸ್ಯೆಗಳೆಂದರೆ

೧) ಬಡತನ

೨) ಅನಕ್ಷರತೆ

೩) ಬಾಲಕಾರ್ಮಿಕತೆ

೪) ವಸತಿಯ ಸಮಸ್ಯೆ

೫) ಆರೋಗ್ಯ ಸಮಸ್ಯೆ

೬) ಕೌಟುಂಬಿಕ ಸಮಸ್ಯೆ

೭) ಮೂಢನಂಬಿಕೆ

೮) ಧರ್ಮದಲ್ಲಿ ಅತಿಯಾದ ನಂಬಿಕೆ ಮುಂತಾದವುಗಳು.

೨.೩ ಸಮುದಾಯದಲ್ಲಿರುವ ಶಿಕ್ಷಣದ ನಿಯೋಗಗಳು :

ಸಮುದಾಯದ ಅಭಿವೃದ್ಧಿಗೆ ಮತ್ತು ಪರಿವರ್ತನೆಗೆ ಶಿಕ್ಷಣ ಒಮದು ಮಹತ್ವದ ಸಾಧನವಾಗಿದ್ದು ಇದರ ನಿಯೋಗಳನ್ನು ಈ ಕೆಳಗಿನಂತೆ ಚರ್ಚಿಸಲಾಗಿದೆ.

೧) ಶಾಲೆ :

ಔಪಚಾರಿಕ ಶಿಕ್ಷಣ ನಿಯೋಗಗಳಲ್ಲಿ ಶಾಲೆಯು ಮುಖ್ಯವಾದುದು. ಶಾಲೆಯು ಮಗುವನ್ನು ವಿಶಾಲ ಜಗತ್ತಿಗೆ ಒಯ್ಯುವ ಒಂದು ವಾಹಕ ಮುಂಬರುವ ಜನಾಂಗಕ್ಕಾಗಿ ವಿಶೇಷವಾಗಿ ರಚಿಸಿರುವ ಶಿಕ್ಷಣದ ಮುಖ ನಿಯೋಗ ಶಲೆ. ಆದ್ದರಿಂದ ಇದರ ಸ್ಥಾನ ಗೌರವಗಳನ್ನು ಕಾಯ್ದುಕೊಳ್ಳುವ ಜವಾಬ್ದಾರಿಯು ಶಿಕ್ಷಕರದು. ಶಿಕ್ಷಕರು ಶಾಲೆಯ ಪಾವಿತ್ರ್ಯವನ್ನು ರಕ್ಷಿಸಿಕೊಳ್ಳಬೇಕು. ಆದರ್ಶ ಶಿಕ್ಷಕನು ಶಾಲೆಯನ್ನು ಸಮಾಜ ಹಾಗೂ ಸರ್ಕಾರದ ನೆರವಿನಿಂದ ಉತ್ತಮ ಹಾದಿಯಲ್ಲಿ ಒಯ್ಯುತ್ತಿರಬೇಕು. ಆಗ ಮಾತ್ರ ಜಗತ್ತನ್ನೇ ವ್ಯತ್ಯಸ್ತವನ್ನಾಗಿ ಮಾಡುವ ಪ್ರಯೋಗ ಶಾಲೆಯನ್ನಾಗಿ ಶಾಲೆಯನ್ನು ಮಾರ್ಪಡಿಸಬಹುದು. ಮಕ್ಕಳ ಮಾನಸಿಕ ಶಕ್ತಿಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಹದಗೊಳಿಸಲು ಶಾಲೆ ನೆರವಾಗಬೇಕು. ಮಕ್ಕಳು ಮುಂದಿನ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲಯೂ ಭಾಗವಹಿಸುವ ಯೋಗ್ಯತೆಯನ್ನು ಪಡೆಯಲು ಶಾಲೆಗಳು ನೆರವಾಗಬೇಕು. ಮಕ್ಕಳು ಉದ್ಯೋಗಶೀಲರಾಗಿ ಉತ್ತಮ ಜೀವನ ನಡೆಸುವದಕ್ಕೆ ಸಿದ್ಧರನ್ನಾಗಿ ಮಾಡುವ ಕರ್ತವ್ಯ ಶಾಲೆಗಳದ್ದು ಶಾಲೆಗಳು ಮಕ್ಕಳ ದೇಹ ಮತ್ತು ಮನಸ್ಸು ಏಕತ್ರವಾಗಿ ವೃದ್ಧಿಯಾಗಲು ಸಹಾಯಕವಾಗಬೇಕು. ಸಮಾಜದ ಕಟ್ಟುನಿಟ್ಟುಗಳು ಆಚಾರ-ವ್ಯವಹಾರಗಳು, ರೀತಿ-ನೀತಿಗಳು ಸಂಪ್ರದಾಯಗಳು, ಕಲೆ, ಸಾಹಿತ್ಯ ಸಂಸ್ಕೃತಿಗಳು ಶಾಲೆಯ ಸಂಘ ಸಂಸ್ಥೆಗಳ ಮೂಲಕವಾಗಬೇಕು. ಸಮಾಜದ ಹಳೆಯ ಕಂದಾಚಾರಗಳನ್ನು ಕಿತ್ತು ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವ ಮನೋಭಾವ ಮಕ್ಕಳಲ್ಲಿ ಶಾಲೆಗಳು ಉಂಟುಮಾಡಬೇಕು.

೨) ಮನೆ ಅಥವಾ ಕುಟುಂಬ :

ಮಕ್ಕಳ ಪ್ರಪ್ರಥಮ ಶಿಕ್ಷಣ ಕ್ಷೇತ್ರ ಮನೆ ಮನೆಯಲ್ಲಿಯೇ ವಿಶ್ವಕ್ಕೆ ಅಗತ್ಯವೆನಿಸುವ ಅನೇಕ ಹಿರಿಯರ ಗುಣಗಳನ್ನು ಮಕ್ಕಳಲ್ಲಿ ಮೂಡಿಸಲು ಪ್ರಯತ್ನಿಸಬಹುದು. ಮಕ್ಕಳ ಶಿಕ್ಷಣ ತಾಯಿ ತಂದೆಗಳಿಂದಲೇ ಪ್ರಾರಂಭವಾಗುತ್ತದೆ. ಗುರುಹಿರಿಯರಲ್ಲಿ ಭಕ್ತಿ, ವಾತ್ಸಲ್ಯ, ಅನುಕಂಪ, ಗೌರವ, ವಿಧೇಯತೆ, ಮಾನವಪ್ರೇಮವು ಮೊದಲಾದ ಹಿರಿಯ ಗುಣಗಳು ಮನೆಯಲ್ಲಿಯೇ ಬೆಳೆಯುತ್ತವೆ ದೇಶದ ಉತ್ತಮ ನಾಯಕರನ್ನು ಕುಟುಂಬ ಜೀವನದಿಂದಲೇ ತಯಾರಿಸಬಹುದೆಂಬ ಅಭಿಪ್ರಾಯವನ್ನು ರಾಜಾಜಿಯವರು ವ್ಯಕ್ತಪಡಿಸಿದ್ದಾರೆ ಸುಸಂಸ್ಕೃತರು ಉತ್ತಮ ನಾಯಕರೂ ಆಗಬಲ್ಲರೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಒಬ್ಬ ಮಗುವಿನ ಭವಿಷ್ಯವನ್ನು ರೂಪಿಸುವ ಜವಾಬ್ದಾರಿಯು ಒಂದು ಕುಟುಂಬಕ್ಕೆ ಅನ್ವಯಿಸುತ್ತದೆಂದು ಹೇಳಬಹುದು. ಈಗಿನ ಬದಲಾದ ಪರಿಸ್ಥಿತಿಯಲ್ಲಿ ದುಡಿಯುವ

ತಂದೆ ತಾಯಿಗಳು ಮಕ್ಕಳ ಜವಾಬ್ದಾರಿಯನ್ನು ಪೂರ್ಣವಾಗಿ ಶಾಲೆಗಳ ಮೇಲೆ ವಹಿಸುತ್ತಾರೆ. ಇದು ಸಲ್ಲದು. ಮಕ್ಕಳ ಜವಾಬ್ದಾರಿಯನ್ನು ತಂದೆ ತಾಯಿಗಳು ವಹಿಸಿಕೊಂಡು ತಮ್ಮ ಪಾಲಿನ ಕರ್ತವ್ಯ ನಿರ್ವಹಿಸುವದು. ಅವಶ್ಯವಿದೆ.

೩) ಸಮಾಜ :

ಒಂದು ಪ್ರದೇಶದ ಜನತೆ ಸಮಾಜ ಎನಿಸಿಕೊಳ್ಳುವದು. ಕುಟುಂಬ ಅಥವಾ ಶಾಲೆಯಂತೆ ಸಮಾಜವು ಪ್ರತಿ ವ್ಯಕ್ತಿಯ ಶಿಕ್ಷಣಕ್ಕಾಗಿ ಪ್ರತ್ಯಕ್ಷ ಕಾರ್ಯ ಮಾಡುವದಿಲ್ಲ ವಿವಿಧ ಔಪಚಾರಿಕ ಹಾಗೂ ಅನೌಪಚಾರಿಕ ಸಂಸ್ಥೆಗಳನ್ನು ಪ್ರಾರಂಭಿಸಿ ಪ್ರೋತ್ಸಾಹಿಸುವದರ ಮೂಲಕ ಸಮಾಜವು ಶೈಕ್ಷಣಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುವದು. ಪ್ರಾಚೀನ ಭಾರತದಲ್ಲಿ ಶಿಕ್ಷಣವು ದೇವಸ್ಥಾನ ಹಾಗೂ ಮಠಗಳಲ್ಲಿ ಕೊಡಲ್ಪಡುತ್ತಿತ್ತು. ಇವುಗಳನ್ನು ಸಮಾಜವು ಪೋಷಿಸುತ್ತಿತ್ತು.

ಶಿಕ್ಷಣದ ಸಾಧನವಾಗಿ ಸಮಾಜಕ್ಕೆ ತನ್ನದೇ ಆದ ಸ್ಥಾನವಿದೆ. ವಿಶಾಲವಾದ ಅರ್ಥದಲ್ಲಿ ಕುಟುಂಬ ಕೂಡ ಸಮಾಜದ ಒಂದು ಅಂಗವೆಂದು ಭಾವಿಸಲ್ಪಡುತ್ತದೆ. ಶಿಕ್ಷಣವು ವೈಯಕ್ತಿಕ ಕ್ರಿಯೆಯಲ್ಲಿ ಅದೊಂದು ಸಾಮಾಜಿಕ ಕ್ರಿಯೆ ಶಿಕ್ಷಣ ಸಂಸ್ಥೆಯಾಗಿ ಸಮಾಜದ ಕಾರ್ಯಗಳೆಂದರೆ,

೧) ತನ್ನ ಸಂಸ್ಕೃತಿಯ ಸಾಧನವಾಗಿ ಶಾಲೆಗಳನ್ನು ಸ್ಥಾಪಿಸುವದು ಮತ್ತು ಅದನ್ನು ಮುಂದಿನ ಪೀಳಿಗೆಗೆ ಸಾಗಿಸುವದು

೨) ವ್ಯಕ್ತಿ ಮತ್ತು ಸಮಾಜದ ಸಂಬಂಧದ ತಿಳುವಳಿಕೆಯನ್ನು ಮಾಡಿ ಕೊಡುವದು.

೩) ಸಮಾಜದ ಸದಸ್ಯರಿಗೆ ಸಾಮಾಜಿಕ ಸಂಪ್ರದಾಯಗಳ ಮೌಲ್ಯಗಳ ಆದರ್ಶಗಳ & ನಂಬಿಕೆಗಳ ಪರಿಜ್ಞಾನವನ್ನು ಮಾಡಿಕೊಡುವದು.

೪) ಸಮಾಜ ಸೇವೆಗೆ ಒಳ್ಳೆಯ ಅವಕಾಶಗಳನ್ನು ಒದಗಿಸುವದು.

೫) ಬಾಲವಾಡಿಗಳ ಸ್ಥಾಪನೆ, ವಿದ್ಯಾರ್ಥಿ ವೇತನ ಹಾಗೂ ಶಾಗಳಲ್ಲಿ ಮಧ್ಯಾಹ್ನದ ಉಪಹಾರವನ್ನು ನೀಡುವದರ ಮೂಲಕ ಪೋಷಕರಿಗಾಗಿರುವ ಕೊರತೆಯನ್ನು ನೀಗಿಸಿ ಕುಟುಂಬ ಜೀವನವನ್ನು ಉತ್ತಮಗೊಳಿಸುವದು.

೬) ಮಾನವ ಶಿಕ್ಷಣಕ್ಕೆ ಸಹಕಾರಿಯಾಗುವ ಲಲಿತಕಲಾ ಸಂಘ, ಕ್ರೀಡಾ ಸಂಘ, ಸಮಾಜ ಸೇವಾ ಸಂಘ ಪುಸ್ತಕ ಭಂಡಾರ ವಸ್ತು ಸಂಗ್ರಹಾಲಯ, ಚಿತ್ರಮಂದಿರ ಮುಂತಾದವುಗಳನ್ನು ಸ್ಥಾಪಿಸಿ ಪ್ರೋತ್ಸಾಹಿಸುವದು.

೭) ವಯಸ್ಕರ ಶಿಕ್ಷಣ , ಪೌರತ್ವ ಹಾಗೂ ಆರೋಗ್ಯಕ್ಕಾಗಿ ಕಾರ್ಯಕ್ರಮಗಳನ್ನು ಏರ್ಪಡಿಸುವದು.

೮) ಪಠ್ಯಕ್ರಮ ಹಾಗೂ ಬೋಧನಾ ವಿಧಾನಗಳಲ್ಲಿ ಹೊಸ ಪ್ರಯೋಗ ಹಾಗೂ ಸಂಶೋಧನೆಯನ್ನು ಪ್ರೋತ್ಸಾಹಿಸುವುದು.

೪) ಧಾರ್ಮಿಕ ಸಂಸ್ಥೆಗಳು :

ಧಾರ್ಮಿಕ ಸಂಸ್ಥೆಗಳೆಂದರೆ ಎಲ್ಲಾ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಮತೀಯ ಸಂಘಗಳು ಜಾತ್ರೆಗಳು, ಸಮಾರಂಭಗಳು, ಸಭೆಗಳು ಚರ್ಚಾಕೂಟಗಳು ಇತ್ಯಾದಿಗಳೆಲ್ಲ ಇವುಗಳಲ್ಲಿ ಬರುತ್ತವೆ.

ಈ ಸಂಸ್ಥೆಗಳು ಎರಡು ವಿಧದಲ್ಲಿ ಶಿಕ್ಷಣವನ್ನು ಕೊಡುತ್ತವೆ.

೧) ಪ್ರತ್ಯಕ್ಷ ಕ್ರಮ

೨) ಅಪ್ರತ್ಯಕ್ಷ ಕ್ರಮ

ಪ್ರತ್ಯಕ್ಷ ಕ್ರಮ : ಪ್ರತ್ಯಕ್ಷ ಕ್ರಮದಲ್ಲಿ ಜನತೆಗೆ ತಾವು ಪಡೆಯುವ ಶಿಕ್ಷಣದ ಬಗ್ಗೆ ತಿಳುವಳಿಕೆ ಇರುತ್ತದೆ. ಧರ್ಮ ,ಧರ್ಮದ ತತ್ವಗಳು ಕಾಯಕ ಮೊದಲಾದವುಗಳ ಬಗ್ಗೆ ಇವು ಶಿಕ್ಷಣ ಕೊಡುತ್ತವೆ. ಜನರ ಕರ್ತವ್ಯ ದೇವರ ಬಗ್ಗೆ ತಿಳುವಳಿಕೆ ನೀತಿ ನಿಯಮಗಳ ಬಗ್ಗೆ ಇವು ಜನತೆಯನ್ನು ಜಾಗ್ರತಗೊಳಿಸುತ್ತವೆ. ಪರೋಪಕಾರ, ಬಡವರ ಬಗ್ಗೆ ಕರುಣೆ ಸಮಾಜಸೇವೆ ಇವುಗಳ ಬಗ್ಗೆಯೂ ತಿಳುವಳಿಕೆ ಕೊಡುತ್ತವೆ.

ಅಪ್ರತ್ಯಕ್ರಮ : ಪ್ರತ್ಯಕ್ಷವಾಗಿ ಇವು ಜನತೆಯಲ್ಲಿ ಐಕ್ಯ ಭಾವನೆ ಶಿಸ್ತು ಸ್ವಚ್ಛತೆ ಆರೋಗ್ಯದ ನಿಯಮಗಳು ಪಾಲನೆ ಮೊದಲಾದವುಗಳು ಬಗ್ಗೆ ಶಿಕ್ಷಣ ಕೊಡುತ್ತವೆ ಮಕ್ಕಳು ಮೇಲಿನ ಎಲ್ಲ ಗುಣಗಳನ್ನು ಈ ಸಂಘ ಸಂಸ್ಥೆಗಳಿಂದ ಗ್ರಹಿಸುತ್ತವೆ ಮತ್ತು ತಮ್ಮ ವರ್ತನೆಯನ್ನು ತಿದ್ದಿಕೊಳ್ಳುವದಲ್ಲಿ ಇವು ಸಹಾಯ ಮಾಡುತ್ತವೆ.

೫) ಸಮೂಹ ಮಾಧ್ಯಮಗಳು :

ಚಲನಚಿತ್ರ : ಚಲನಚಿತ್ರಗಳು ಈಗಿನ ಕಾಲದ ಪ್ರಭಾವಿ ಶಿಕ್ಷಣ ಮಾಧ್ಯಮಗಳಾಗಿವೆ. ಸಿನೆಮಾಗಳ್ಲಲಿ ಒಳ್ಳೆಯ ಹಾಗೂ ಕೆಟ್ಟ ಸಿನೆಮಾಗಳು ಇವೆ ಒಳ್ಳೆಯ ಸಿನೆಮಾಗಳಿಂದ ಕಲೆ ಸಾಹಿತ್ಯ ದೇಶಪ್ರೇಮ, ಸಮಾಜ ಸೇವೆ ಮೊದಲಾದ ಗುಣಗಳು ಮಕ್ಕಳಲ್ಲಿ ಬೆಳೆಯಲು ಸಹಾಯಕವಾಗುತ್ತವೆ ಅದೇ ಕಾಲಕ್ಕೆ ಕೆಟ್ಟ ಸಿನೆಮಾಗಳಿಂದ ದುಶ್ಚಟಗಳು ಕಳವು ಮೊದಲಾದ ಗುಣಗಳು ಬೆಳೆಯುತ್ತವೆ ಆದ್ದರಿಂದ ಮಕ್ಕಳು ಉತ್ತಮ ಸಿನೇಮಾಗಳನ್ನು ಮಾತ್ರ ನೋಡುವಂತೆ ಮಾಡಬೇಕು.

ವೃತ್ತ ಪತ್ರಿಕೆಗಳು : ಈಗಿನ ಕಾಲದಲ್ಲಿ ವೃತ್ತ ಪತ್ರಿಕೆಗಳು ಬಹಳ ಜನಪ್ರಿಯ ಶಿಕ್ಷಣದ ಸಾಧನಗಳಾಗಿವೆ ಇವುಗಳ್ಲಲಿ ಅನೇಕ ವಿಧಗಳಿವೆ. ದಿನಪತ್ರಿಕೆ, ವಾರಪತ್ರಿಕೆ, ಮಾಸ ಪತ್ರಿಕೆ, ಅರ್ಧವಾರ್ಷಿಕ ಪತ್ರಿಕೆ, ವಾರ್ಷಿಕ ಪತ್ರಿಕೆಗಳಿವೆ. ಇವುಗಳಲ್ಲಿ ವಿವಿಧ ಲೇಖನಗಳನ್ನು ನಾವು ಕಾಣುತ್ತೇವೆ. ಸುದ್ದಿಗಳು, ಚಿತ್ರಗಳು, ವಿವಿಧ ಮಾಹಿತಿಯನ್ನು ನೀಡುವ ಲೇಖನಗಳು, ಕಲೆ, ಸಾಹಿತ್ಯ, ಇತಿಹಾಸ, ರಾಜಕೀಯ, ಪ್ರಚಲಿತ ಸಮಸ್ಯೆಗಳು, ವಿವಿಧ ದೇಶಗಳ ವ್ಯವಸಾಯ, ಶಿಕ್ಷಣ ಪದ್ಧತಿಗಳು, ತೋಟಗಾರಿಕೆ, ಪ್ರವಾಸ ಇವೇ ಮೊದಲಾದವುಗಳ ಬಗ್ಗೆ ಚಿಕ್ಕ ಹಾಗೂ ದೊಡ್ಡ ಲೇಖನಗಳನ್ನು ಈ ಪತ್ರಿಕೆಗಳು ಪ್ರಕಟಿಸುತ್ತವೆ. ಈ ಎಲ್ಲ ಸಂಗತಿಗಳು ಮಕ್ಕಳಿಗೆ ಶಿಕ್ಷಣ ನೀಡುತ್ತವೆ.

ರೇಡಿಯೋ : ರೇಡಿಯೋ ಮಾಧ್ಯಮ ಒಂದು ಪ್ರಮುಖ ಪ್ರಸಾರ ಮಾದ್ಯಮ ಇವುಗಳಲ್ಲಿ ಸಂಗೀತ, ಚಿತ್ರಗೀತೆಗಳು, ಹಾಸ್ಯ ಮೊದಲಾದ ಮನರಂಜನೆಯ ಕಾರ್ಯಕ್ರಮಗಳು, ಕಲೆ, ವಿಜ್ಞಾನ, ಕೃಷಿ ಸಾಹಿತ್ಯ, ರಾಜಕೀಯ, ಇತಿಹಾಸ, ಪ್ರವಾಸ ಮೊದಲಾದವುಗಳ ಬಗ್ಗೆ ಭಾಷಣಗಳು, ವಾರ್ತೆಗಳು, ಕ್ರೀಡಾ ವಿವರಣೆಗಳು ಬಿತ್ತರಿಸಲ್ಪಡುತ್ತವೆ. ಇವುಗಳಿಂದ ಜನರು/ಮಕ್ಕಳು ಮನರಂಜನೆಯ ಜೊತೆಗೆ ವಿಷಯ ಜ್ಞಾನವನ್ನು ಪಡೆಯುತ್ತಾರೆ. ಇದಲ್ಲದೆ ಸಂಗೀತ ಪಾಠಗಳು, ಹಿಂದಿಪಾಠ, ಸಂಸ್ಕೃತಪಾಠ ಮೊದಲಾದವುಗಳು ಬಿತ್ತರಿಸಲ್ಪಡುತ್ತವೆ.

ಈ ಮೇಲಿನ ಎಲ್ಲ ಅಂಶಗಳು ಮಹತ್ವ ಶಿಕ್ಷಣ ಪ್ರಸಾರ ಮಾಡುವ ನಿಯೋಗಳಾಗಿವೆ ಎಂದು ಹೇಳಬಹುದು.

೨.೭ ಶಿಕ್ಷಣ :

ಸಮಾಜ ಜೀವನದ ಅತ್ಯಂತ ಮಹತ್ವದ ವ್ಯವಸ್ಥೆಯಾಗಿ ಶಿಕ್ಷಣವು ಪ್ರಾಚೀನ ಕಾಲದಿಂದಲೂ ನಮ್ಮೊಂದಿಗೆ ಬೆಳೆದು ಬಂದ ವ್ಯವಸ್ಥೆಯಾಗಿದೆ. ಕುಟುಂಬ ಮತ್ತು ಧರ್ಮಗಳಷ್ಟು ಪ್ರಾಚೀನತೆ ಹೊಂದಿದ ಸಂಸ್ಥೆಯಾಗಿ ಬೆಳೆದು ಬಂದಿರಬಹುದೆಂದು ಊಹಿಸಲಾಗುತ್ತದೆ. ಶಿಕ್ಷಣವೆಂದರೆ ಕೇವಲ ಅಕ್ಷರಜ್ಞಾನವೆಂದು ತಿಳಿದರೆ ಅದರ ವ್ಯಾಪ್ತಿಯನ್ನು ನಾವು ಪರಿಮಿತಗೊಳಿಸಿದಂತಾಗುತ್ತದೆ. ಗ್ರಾಮೀಣ ಮತ್ತು ಆದಿವಾಸಿ ನೆಲೆಗಳಲ್ಲಿರುವ ಕೆಲವೊಂದು ಹಳೆಯ ತಲೆಮಾರಿನ ಜನರು ಶಿಕ್ಷಣ ಸಂಸ್ಥೆಗಳಿಗೆ ಹೋಗಿ ಶಿಕ್ಷಣವನ್ನು ಪಡೆಯದಿದ್ದರೂ ಹಲವಾರು ಕಥೆ ಕವನಗಳನ್ನು ಬರೆದಂಥ ನಿದರ್ಶನಗಳು ನಮ್ಮಲ್ಲಿವೆ.

ಶಿಕ್ಷಣ ಎಂಬ ಪದದಲ್ಲಿ ಹೆಚ್ಚು ವ್ಯಾಪಕವಾದ ಮತ್ತು ವಿಶಾಲವಾದ ಅರ್ಥವಿದೆ. ಆತ್ಮ ವಿಕಸನಕ್ಕೂ, ತಾನು ವಾಸಿಸುತ್ತಿರುವ ಸಮಾಜದ ಏಳ್ಗೆಗೂ ಸಹಾಯ ಮಾಡುವದೇ ನಿಜವಾದ ಶಿಕ್ಷಣ. ವಿದ್ಯಾಭ್ಯಾಸವೆಂದರೆ ಕೇವಲ ಪುಸ್ತಕೀಯ ಜ್ಞಾನವಲ್ಲ ಬದುಕಿನ ಭಿನ್ನ ಭಿನ್ನ ಸ್ಥಿತಿಗತಿಗಳೊಂದಿಗೆ ಹೊಂದಿಕೊಂಡು ಹೋಗುವ ಶಕ್ತಿ ಹಾಗೂ ಜಾಣ್ಮೆಯನ್ನು ಪಡೆಯುವದು ಎಂದರ್ಥ.

ಸಾಮಾಜಿಕ ವ್ಯವಸ್ಥೆಯಾಗಿ ಶಿಕ್ಷಣವು ಸಮಾಜದಲ್ಲಿಯ ಎಡರು ತೊಡರುಗಳನ್ನೆದುರಿಸಲು ವ್ಯಕ್ತಿಗೆ ಮನೋಧೈರ್ಯವು ಕೊಡುತ್ತದೆ. ಶಿಕ್ಷಣದಿಂದ ವ್ಯಕ್ತಿಯಲ್ಲಿ ಅಡಗಿರುವ ಸೂಪ್ತ ಚೇತನಗಳು ಜಾಗೃತವಾಗಿ ಆತನ ವ್ಯಕ್ತಿತ್ವವು ಅರಳುವಂತಾಗಬೇಕು. ಸಾಮಾಜಿಕ ಪ್ರಗತಿಯನ್ನು ಸಾಧಿಸುವಲ್ಲಿ ಶಿಕ್ಷಣವು ಮಹತ್ವದ ಸಾಧನವಾಗಿ ಕಾರ್ಯ ಮಾಡುತ್ತದೆ. ಸುಶಿಕ್ಷಿತ ಜನರನ್ನು ಸಮಾಜ ಜೀವಂತ ಸಂಪತ್ತು ಎಂದು ಪರಿಗಣಿಸುತದೆ. ಒಬ್ಬ ವ್ಯಕ್ತಿಯನ್ನು ಸುಸಂಸ್ಕೃತ ನಾಗರಿಕ ಮತ್ತು ಗಣ್ಯ ವ್ಯಕ್ತಿಯನ್ನಾಗಿ ರೂಪಿಸುವ ಕಾರ್ಯವನ್ನು ಶಿಕ್ಷಣವು ಮಾಡುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಸ್ವತಂತ್ರವಾದ ವಿಚಾರಶಕ್ತಿ, ಗ್ರಹಣಶಕ್ತಿ ಹಾಗೂ ಕತೃತ್ವ ಶಕ್ತಿಗಳಿರುತ್ತವೆ. ಅವುಗಳಿಗೆ ಸರಿಯಾದ ಮಾರ್ಗದರ್ಶನ ನೀಡುವುದೇ ಶಿಕ್ಷಣದ ಪ್ರಮುಖ ಗುರಿಯಾಗಿದೆ. ಮಗುವಿನ ನರನಾಡಿಗಳಲ್ಲಿ ಉತ್ಸಾಹ ಮತ್ತು ಚೈತನ್ಯಗಳು ಉಕ್ಕಿ ಹರಿಯುತ್ತಲಿರುತ್ತವೆ. ಅದಕ್ಕೆ ಅನುಕೂಲಕರವಾದ ವಾತಾವರಣವನ್ನು ಕಲ್ಪಿಸಿಕೊಡುವದು ಕುಟುಂಬದ, ಸಮಾಜದ ಮತ್ತು ಸರಕಾರದ ಆದ್ಯ ಕರ್ತವ್ಯ.

ಬಾಲ್ಯಾವಸ್ಥೆಯು ವ್ಯಕ್ತಿಯ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗಳ ಉಗಮದ ಹಂತವಿದ್ದಂತೆ ಈ ಅವಸ್ಥೆಯಲ್ಲಿ ಮಕ್ಕಳನ್ನು ಪ್ರಗತಿಪರ ಚಟುವಟಿಕೆಗಳಲ್ಲಿ ತೊಡಗಿಸಿದರೆ, ಆದರ್ಶ ಸಂಸ್ಕೃತಿಯ ಬೆಳವಣಿಗೆಗೆ ನಾಂದಿಯನ್ನು ಹಾಡಿದಂತೆ. ಮನೆಯು ಮೊದಲ ಪಾಠಶಾಲೆ ಎನ್ನುವಂತೆ ಮಕ್ಕಳಿಗೆ ಕೊಡುವ ಯೋಗ್ಯ ಸಂಸ್ಕಾರವು ಅವರ ಭವಿಷ್ಯನವನ್ನು ಉಜ್ವಲಗೊಳಿಸಬಲ್ಲದು. ಶಿಕ್ಷಣ ಸಂಸ್ಥೆಗಳ ಬಗೆಗೆ ಆಸಕ್ತಿಯನ್ನು ಹುಟ್ಟಿಸುವದು, ತಪ್ಪದೇ ಶಾಲೆಗೆ ಹೋಗುವಂತೆ ಮಾಡುವದು, ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವದು, ಶಿಕ್ಷಕರ ಬಗೆಗೆ ಒಳ್ಳೆಯ ಅಭಿಪ್ರಾಯಗಳನ್ನು ಬೆಳೆಸಿಕೊಂಡು ಬರುವಂತೆ ಉಪದೇಶಿಸುವದು ಕುಟುಂಬದ ಹಿರಿಯ ಸದಸ್ಯರ ಕರ್ತವ್ಯವಾಗಿರುತ್ತದೆ.

೨.೮ ಶಿಕ್ಷಣದ ಅರ್ಥ:

ಶಿಕ್ಷಣದ ಬಗ್ಗೆ ಹಲವಾರು ಶಿಕ್ಷಣ ತಜ್ಞರು ಹಾಗೂ ಸಮಾಜ ವಿಜ್ಞಾನಿಗಳು ವ್ಯಾಖ್ಯೆಗಳನ್ನು ಕೊಟ್ಟಿರುತ್ತಾರೆ. ಆಂಗ್ಲ ಭಾಷೆಯಲ್ಲಿಯ ಎಜ್ಯುಕೇಶನ್ (Education) ಎನ್ನುವ ಪದವನ್ನು ಲ್ಯಾಟಿನ್ ಭಾಷೆಯ ಎಜ್ಯುಕೇಟಮ್ (Educatum) ಎಂಬ ಪದದಿಂದ ತೆಗೆದುಕೊಳ್ಳಲಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಎಜ್ಯುಕೇಟಮ್ ಎಂದರೆ ಕಲಿಸುವ ಅಥವಾ ತರಬೇತಿ ನೀಡುವ ಕ್ರಿಯೆ ಎಂದು ಅರ್ಥವಾಗುತ್ತದೆ. ಶಿಕ್ಷಣದ ಮೂಲ ಅರ್ಥವು ಮುಂದೆ ಸಾಗಿಸು ಅಥವಾ ಮಾರ್ಗದರ್ಶನ ಮಾಡು ಎಂದಾಗುತ್ತದೆ.

೨.೮ ಶಿಕ್ಷಣದ ವ್ಯಾಖ್ಯೆಗಳು :

೧) ಪ್ಲೇಟೋ :

ಪ್ರಸಿದ್ಧ ತತ್ವಜ್ಞಾನಿಯಾದ ಪ್ಲೇಟೋನ ಪ್ರಕಾರ "ಶಿಕ್ಷಣವೆಂದರೆ ವ್ಯಕ್ತಿಯ ದೇಹ ಮತ್ತು ಆತ್ಮದಲ್ಲಿ ಆತನ ಅರ್ಹತೆಗೆ ತಕ್ಕಂತೆ ಸೌಂದರ್ಯವನ್ನು ಪರಿಪೂರ್ಣತೆಯನ್ನು ತುಂಬುವದು."

೨) ಜಾನ್ ಡೇವಿ :

"ತನ್ನ ಪರಿಸರವನ್ನು ನಿಯಂತ್ರಿಸುವ ಹಾಗೂ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಶಕ್ತಿಯನ್ನು ವ್ಯಕ್ತಿಯಲ್ಲಿ ಬೆಳೆಸುವದೇ ಶಿಕ್ಷಣ"

೩) ಮಹಾತ್ಮಾ ಗಾಂಧೀಜಿ :

"ಶಿಕ್ಷಣವೆಂದರೆ ಮಕ್ಕಳ ಹಾಗೂ ಜನರ ದೇಹ, ಮನಸ್ಸು ಹಾಗೂ ಶಕ್ತಿಯಿಂದ ಒಳ್ಳೆಯದನ್ನು ಹೊರಗೆಡುಹುದೇ ಆಗಿದೆ".

ಮೇಲಿನ ಹಲವಾರು ವ್ಯಾಖ್ಯೆಗಳಿಂದ ಶಿಕ್ಷಣದ ಬಗೆಗೆ ಕೆಲವೊಂದು ಸ್ಪಷ್ಟ ಅಭಿಪ್ರಾಯಗಳು ನಮ್ಮಲ್ಲಿ ಒಡಮೂಡಿ ಬರುತ್ತವೆ.

೧) ಶಿಕ್ಷಣವು ಮಾನವನಲ್ಲಿ ಅಡಗಿರುವ ಸೂಪ್ತವಾದ ಚೇತನಗಳನ್ನು ಜಾಗೃತಗೊಳಿಸುವಂಥ ಪ್ರಕ್ರಿಯೆಯಾಗಿದೆ.

೨) ಶಿಕ್ಷಣವು ಪರಿಪೂರ್ಣವಾದ ವ್ಯಕ್ತಿತ್ವವನ್ನೇ ನಿರ್ಮಿಸುವ ಒಂದು ಸಾಧನವಾಗಿದೆ.

೩) ಶಿಕ್ಷಣವು ಮಗುವಿನ ಸಾಮಾಜೀಕರಣದ ದೀಕ್ಷೆಯನ್ನು ಕೊಡುವ ಪ್ರಕ್ರಿಯೆಯಾಗಿದೆ.

೪) ವ್ಯಕ್ತಿಯ ವರ್ತನೆ ವಿಚಾರ ಹಾಗೂ ಮನೋಭಾವನೆಗಳಲ್ಲಿ ಶಿಕ್ಷಣವು ಶಾಶ್ವತವಾದ ಪರಿವರ್ತನೆಯನ್ನು ತರುತ್ತದೆ.

ಶಿಕ್ಷಣದ ಬಗೆಗೆ ಭಾರತೀಯರು ಬೆಳೆಸಿಕೊಂಡು ಬಂದ ಮನೋಭಾವನೆಗಳು ವೈಶಿಷ್ಟ್ಯಪೂರ್ಣವಾಗಿರುತ್ತವೆ. ಋಗ್ವೇದ ಪ್ರಕಾರ ಶಿಕ್ಷಣ ಎಂದರೆ, "ವ್ಯಕ್ತಿಯಲ್ಲಿಯ ಆತ್ಮಜ್ಞಾನವನ್ನು ಹಾಗೂ ನಿಸ್ವಾರ್ಥತೆಯನ್ನು ಹೆಚ್ಚಿಸುವದು." ಉಪನಿಷತುಗ್ಗಳ ಉಲ್ಲೇಖದಂತೆ ಶಿಕ್ಷಣದ ಅಂತಿಮ ಗುರಿಯು ಮೋಕ್ಷಾನಂದವನ್ನು ಪಡೆಯುವದಾಗಿರುವದು. ಪಾಣಿನಿಯ "ಪ್ರಕಾರ ನಿಸರ್ಗದಿಂದ ಒಬ್ಬ ವ್ಯಕ್ತಿಯು ಪಡೆಯುವ ತರಬೇತಿಯೇ ಶಿಕ್ಷಣ" ಯಾಜ್ಞವಲ್ಕ್ಯನ ಅಭಿಪ್ರಾಯದಂತೆ "ವ್ಯಕ್ತಿಗಳಲ್ಲಿ ಚಾರಿತ್ರ್ಯ ಹಾಗೂ ಕಾರ್ಯತತ್ಪರತೆಯ ಚಟುವಟಿಕೆಗಳನ್ನು ಹೆಚ್ಚಿಸುವದು ಶಿಕ್ಷಣದ ಪರಮ ಗುರಿಯಾಗಿರುವದು."

ಸ್ವಾಮಿ ವಿವೇಕಾನಂದರ ಪ್ರಕಾರ "ವ್ಯಕ್ತಿಯಲ್ಲಿ ಅಡಗಿರುವ ದೈವೀ ಶಕ್ತಿಯನ್ನು ಜಾಗೃತಗೊಳಿಸುವದೇ ಶಿಕ್ಷಣ."

೨.೧೦ ಶಿಕ್ಷಣದ ಕಾರ್ಯಗಳು :

ಶಿಕ್ಷಣದ ಕಾರ್ಯಗಳು ಈ ಕೆಳಗಿನಂತಿವೆ.

೧) ಸಾಮಾಜಿಕ ಸಮಸ್ಯೆಗಳ ನಿವಾರಣೆ :

ಒಬ್ಬ ವ್ಯಕ್ತಿಯು ಸಾಮಾಜಿಕ ಸಮಸ್ಯೆಗಳನ್ನು ಬುದ್ಧಿಮತ್ತೆಯಿಂದ ಎದುರಿಸಲು ಸಮರ್ಥನನ್ನಾಗಿ ಮಾಡುವದೇ ನಿಜವಾದ ಶಿಕ್ಷಣವಾಗಿದೆ. ಆಧುನಿಕ ಸಮಾಜವು ಜಾತಿಯ ದುರಭಿಮಾನದ ಕಾರ್ಮಿಕರ ಬಂಡಾಯ, ವಿದ್ಯಾರ್ಥಿಗಳಲ್ಲಿ ಅಶಾಂತಿ, ಅಶಿಸ್ತು ರೈತರ ಗಲಭೆಗಳು, ಭಾಷಾ ಸಮಸ್ಯೆ, ಅಪರಾಧ ಮತ್ತು ಬಾಲಾಪರಾಧಗಳಲ್ಲಿ ಹೆಚ್ಚಳ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ವರದಕ್ಷಿಣೆ, ಲಂಚ, ಭ್ರಷ್ಟಾಚಾರ ಮುಂತಾದ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಲಿದೆ. ಮೇಲಿನ ವಿವಿಧ ಸಮಸ್ಯೆಗಳ ಉಗಮಕ್ಕೆ ಅಜ್ಞಾನ ಹಾಗೂ ವಿಮರ್ಶಾತ್ಮಕ ದೃಷ್ಟಿಕೋನದ ಕೊರತೆ ಎಂದೇ ಹೇಳಬೇಕಾಗುತ್ತದೆ. ಅಶಿಕ್ಷಿತರು, ಅಜ್ಞಾನಿಗಳು ಹಾಗೂ ಸಂಪ್ರದಾಯಪ್ರಿಯರಿಂದ ಕೂಡಿದ ಯಾವುದೇ ದೇಶದಲ್ಲಿ ಮೇಲಿನ ಸಮಸ್ಯೆಗಳು ಇನ್ನಷ್ಟು ಉಲ್ಬಣಗೊಳ್ಳುತ್ತ ವಿಕಾರ ಸ್ವರೂಪವನ್ನು ತಾಳುತ್ತಲೇ ಹೋಗುತ್ತವೆ.

ಆಧುನಿಕ ಸಮಾಜದಲ್ಲಿ ಬೇಕನರ "ಜ್ಞಾನವೇ ಶಕ್ತಿ" ಎಂಬ ಮಾತು ಬಹಳೇ ಅರ್ಥಪೂರ್ಣವಾಗಿರುತ್ತದೆ. ವಿವಿಧ ರೀತಿಯ ಸಮಸ್ಯೆಗಳ ಪರಿಹಾರವಾಗಬೇಕಾದರೆ ಮೊದಲು ಜನರ ಮನೋಭಾವನೆ ಹಾಗೂ ವಿಚಾರಗಳಲ್ಲಿ ಪರಿವರ್ತನೆಯಾಗಲೇಬೇಕು. ಇದೊಂದು ಜ್ವಲಂತ ಸಮಸ್ಯೆ. ಇದರ ನಿವಾರಣೆಯಾಗದೇ ನಮ್ಮ ಪ್ರಗತಿ ಅಸಾಧ್ಯ ಎಂಬ ಪ್ರಶ್ನೆ ಜನಸಾಮಾನ್ಯರಲ್ಲಿ ಮೂಡಿಬರಬೇಕು. ಈ ದಿಶೆಯಲ್ಲಿ ಶಿಕ್ಷಣವು ದಾರಿದೀಪವಾಗಿ ಕಾರ್ಯ ಮಾಡುತ್ತದೆ. ಒಂದು ದೇಶದ ಆರ್ಥಿಕ, ಸಾಮಾಜಿಕ, ಔದ್ಯೋಗಿಕ ಸಮಸ್ಯೆಗಳು ಅಲ್ಲಿಯ ಪ್ರಜೆಗಳ ಶಿಕ್ಷಣಮಟ್ಟವನ್ನು ಅವಲಂಬಿಸಿರುತ್ತವೆ. ಅಂತೆಯೇ ಶಿಕ್ಷಣವು ಸಾಮಾಜಿಕರಣದ ಒಂದು ಘಟಕವಾಗಿದೆ.

ಒಬ್ಬ ವ್ಯಕ್ತಿಯನ್ನು ಉತ್ತಮ ಸಮಾಜ ಜೀವಿಯನ್ನಾಗಿ ಮಾಡುವ ಕಾರ್ಯವನ್ನೇ ಶಿಕ್ಷಣವು ಸಂಸ್ಥೆ ಹಾಗೂ ಜಾತಿ ಸಂಘಟನೆಗಳಲ್ಲಿಯೇ ವ್ಯಕ್ತಿಗಳಿಗೆ ಶಿಕ್ಷಣವನ್ನು ನೀಡಲಾಗುತ್ತಿತ್ತು. ಕುಟುಂಬದಲ್ಲಿ ಮಕ್ಕಳಿಗೆ ನೈತಿಕ, ಶಾರೀರಿಕ, ಸಾಮಾಜಿಕ ಹಾಗೂ ಜಾತಿ ಸಂಘಟನೆಗಳಲ್ಲಿಯೇ ಶಿಕ್ಷಣವನ್ನು ನೀಡಲಾಗುತ್ತಿತ್ತು. ಕುಟುಂಬದಲ್ಲಿ ಮಕ್ಕಳಿಗೆ ನೈತಿಕ, ಶಾರೀರಿಕ ಸಾಮಾಜಿಕ ಹಾಗೂ ವ್ಯವಹಾರಿಕ ಶಿಕ್ಷಣವನ್ನು ಕೊಡಲಾಗುತ್ತಿತ್ತು. ಬದುಕಿನ ಮೂಲಭೂತ ಶಿಕ್ಷಣವು ಇಂದಿಗೂ ಕುಟುಂಬದಲ್ಲಿಯೇ ದೊರೆಯುತ್ತದೆ.

ಸಾಮಾಜೀಕರಣದಲ್ಲಿ ಶಿಕ್ಷಣದ ಪಾತ್ರವು ಬಹಳೇ ಮಹತ್ವದ್ದಾಗಿದೆ ಒಬ್ಬ ವ್ಯಕ್ತಿಯು ಸಾಮಾಜಿಕ ಪರಿಸರಕ್ಕೆ ಹೊಂದಿಕೊಂಡು ಸಹಕಾರ ಹಾಗೂ ದಕ್ಷ ವ್ಯಕ್ತಿಯೆಂದು ಮನ್ನಣೆಯನ್ನು ಪಡೆಯುವ ಪ್ರಕ್ರಿಯೆಯೇ ಸಾಮಾಜೀಕರಣ. ಸಾಮಾಜಿಕ ಸ್ಥಿತಿಗತಿಗಳೊಂದಿಗೆ ವ್ಯಕ್ತಿಯು ವಿವಿಧ ರೀತಿಯ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಪ್ರತಿಯೊಬ್ಬನ ವಯಸ್ಸು, ಉದ್ಯೋಗ, ಲಿಂಗ ಹಾಗೂ ಅಂತಸ್ತುಗಳಿಗೆ ತಕ್ಕಂತೆ ಭಿನ್ನ ಭಿನ್ನವಾದ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ ಶಿಕ್ಷಣವು ಕೇವಲ ಅಕ್ಷರಜ್ಞಾನ ಮಾತ್ರವಾಗಿರದೇ ವ್ಯವಹಾರ ಚತುರತೆಯನ್ನು ಬೆಳೆಸುವ ಸಾಧನವಾಗಿರುತ್ತವೆ. ಅದು ವ್ಯಕ್ತಿಯ ವರ್ತನೆಗಳಲ್ಲಿ ಪರಿವರ್ತನೆಯನ್ನು ತಂದು ಸಾಮಾಜಿಕ ಚೌಕಟ್ಟಿನಲ್ಲಿಯೇ ಆತ ಬೆಳೆಯುವಂತೆ ತರಭೇತಿಯನ್ನು ನೀಡುತ್ತವೆ. ಅನ್ಯ ಸಂಘ ಸಂಸ್ಥೆಗಳು ಕಲಿಸದೇ ಇದ್ದ ಹಲವಾರು ಸಾಮಾಜಿಕ ಸದ್ಗುಣಗಳನ್ನು ಶಿಕ್ಷಣ ಸಂಸ್ಥೆಯು ಕಲಿಸಿಕೊಡುತ್ತದೆ. ಮಗು ಶಾಲೆಯಲ್ಲಿ ತನ್ನ ಜಾತಿ ಮತ ಪಂಥ ಧರ್ಮ ವರ್ಗ ಮುಂತಾದ ಭಾವನೆಗಳನ್ನೇ ಮರೆತು ಎಲ್ಲರೊಂದಿಗೆ ಸಹಕಾರದಿಂದ ವರ್ತಿಸುತ್ತದೆ. ಆಟ ಪಾಠ ಹಾಗೂ ಇನ್ನಿತರ ಸ್ಪರ್ಧೆಗಳಲ್ಲಿ ಅದು ಉತ್ಸಾಹದಿಂದ ಪಾಲ್ಗೊಳ್ಳುತ್ತದೆ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಮಾದರಿಯಾಗಿರುತ್ತಾರೆ. ನಿಜವಾದ ಸ್ಪರ್ಧಾತ್ಮಕ ಮನೋಭಾವನೆಗಳನ್ನು ಮಗು ಶಿಕ್ಷಣ ಸಂಸ್ಥೆಗಳಿಂದಲೇ ಬೆಳೆಸಿಕೊಂಡು ಮುಂದುವರಿಸಿಕೊಂಡು ಬಂದಿರುತ್ತದೆ. ಶಾಲೆಯು ಮಕ್ಕಳಿಗೆ ನಾಯಕತ್ವದ ತರಬೇತಿಯನ್ನು ನೀಡುತ್ತದೆ.

೨) ವ್ಯಕ್ತಿತ್ವ ಬೆಳವಣಿಗಗೆ ಸಹಾಯಕಾರಿಯಾಗಿದೆ :

ಆಧುನಿಕ ಸಂಕೀರ್ಣ ಸಮಾಜದಲ್ಲಿ ಸ್ವಯಂ ತಿಳುವಳಿಕೆ ಹಾಗೂ ಸಮಾಜದ ಇತರ ಸದಸ್ಯರೊಂದಿಗೆ ಪರಸ್ಪರ ತಿಳುವಳಿಕೆಗಳು ಅತೀ ಅವಶ್ಯವಾಗಿರುತ್ತದೆ. ಶಿಕ್ಷಣವು ವೈಯಕ್ತಿಕ ಪ್ರಗತಿಗೂ ಹಾಗೂ ಸಾಮಾಜಿಕ ಬಾಂಧವ್ಯಗಳ ಬೆಳವಣಿಗೆಗೂ ಸಹಾಯವನ್ನು ಸಲ್ಲಿಸುತ್ತದೆ. ಆದರ್ಶ ವ್ಯಕ್ತಿಗಳೇ ಆದರ್ಶ ಸಮಾಜವನ್ನು ರಚಿಸಬಲ್ಲರು. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶೈಕ್ಷಣಿಕ ಪರಿಸರವು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ ಮಗುವಿನ ದೈಹಿತ ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗಗೆ ಸಹಾಯ ಸಲ್ಲಿಸುವದು ಶಿಕ್ಷಣದ ಮೂಲ ಉದ್ದೇಶವಾಗಿರುತ್ತದೆ. ಬುದ್ಧಿ, ದೇಹ, ಮನಸ್ಸು ಇವು ಮೂರು ಸರಿಸಮಾನವಾಗಿ ಬೆಳವಣಿಗೆಯಾದಾಗ ಮಾತ್ರ ಒಬ್ಬ ವ್ಯಕ್ತಿಯನ್ನು ಪರಿಪೂರ್ಣ ವ್ಯಕ್ತಿಯೆಂದು ಕರೆಯುತ್ತೇವೆ. ಶಿಕ್ಷಣವು ಈ ಸಮತೋಲನವನ್ನು ಕಾಪಾಡಿಕೊಂಡು ಬರುತ್ತದೆ.

ಮಕ್ಕಳಲ್ಲಿ ಅಡಗಿರುವ ಹಲವಾರು ಸೂಪ್ತಚೇತನ ಅಥವಾ ಪ್ರತಿಭೆಗಳ ಪ್ರದರ್ಶನಕ್ಕೆ ಶಿಕ್ಷಣ ಸಂಸ್ಥೆಗಳು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತವೆ. ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಅನೇಕ ಸದ್ಗುಣಗಳನ್ನು ಕಲಿತುಕೊಳ್ಳುತ್ತಾರೆ. ಸಹಕಾರ, ಸತ್ಯ, ಅಹಿಂಸೆ, ಪರಸ್ಪರ ತಿಳುವಳಿಕೆ, ಜವಾಬ್ದಾರಿತನ, ಶಿಸ್ತು, ಸಂಯಮತೆ, ಸತತಾಭ್ಯಾಸ, ತ್ಯಾಗ, ಅನುಕಂಪ ಮುಂತಾದವುಗಳನ್ನು ಮಗು ಶಿಕ್ಷಣ ಸಂಸ್ಥೆಯಲ್ಲಿ ಬೆಳೆಸಿಕೊಂಡು ಬರುತ್ತದೆ. ಅಷ್ಟೇ ಅಲ್ಲದೇ ಮಗು ಸ್ವತಂತ್ರವಾಗಿ ಆಲೋಚಿಸುವ

ಹಾಗೂ ವಿಮರ್ಶೆ ಮಾಡುವ ಶಕ್ತಿಯನ್ನು ಕೂಡ ಬೆಳೆಸಿಕೊಂಡು ಬರುತ್ತದೆ. ಒಂದು ಸಮಾಜವು ಅಭಿವೃದ್ಧಿಯಾಗಬೇಕಾದರೆ ಕುಶಲಕಾರ್ಮಿಕರು, ಶ್ರಮಜೀವಿಗಳಾದ ರೈತರು, ದಕ್ಷ ಆಡಳಿತಗಾರರು, ವಿಜ್ಞಾನಿಗಳು, ವೈದ್ಯರು, ಶಿಕ್ಷಕರು ಅವಶ್ಯ. ಸಾಮಾಜಿಕ ಸುವ್ಯವಸ್ಥೆ ನೆಲೆಸಲು ಇವರೆಲ್ಲರಿಗಿಂತಲೂ ಮಿಗಿಲಾಗಿ ವ್ಯವಹಾರ ಜ್ಞಾನವುಳ್ಳ ವಿವೇಕಿಗಳಾದ ಜನರು ಅವಶ್ಯಕ. ಈ ವಿವೇಕವಂತ ಪ್ರಜ್ಞಾವಂತ ಜನರನ್ನು ಸೃಷ್ಟಿ ಮಾಡುವ ಕಾರ್ಯವನ್ನು ಶಿಕ್ಷಣ ಸಂಸ್ಥೆಗಳು ಯಶಸ್ವಿ ರೀತಿಯಿಂದ ನಿರ್ವಹಿಸುತ್ತವೆ ಎಂದು ಹೇಳಬಹುದು.

೩) ಶಿಕ್ಷಣವು ಸಾಂಸ್ಕೃತಿಕ ಮೌಲ್ಯಗಳನ್ನು ರಕ್ಷಣೆ ಮಾಡುತ್ತದೆ :

ಧರ್ಮ, ಸಾಹಿತ್ಯ ಕಲೆ, ವಿಜ್ಞಾನ, ನಂಬಿಕೆ ಮುಂತಾದವುಗಳನ್ನು ಶಿಕ್ಷಣವು ಒಂದು ಜನಾಂಗದಿಂದ ಇನ್ನೊಂದು ಜನಾಂಗಕ್ಕೆ ನಿರಂತರವಾಗಿ ಸಾಗಿಸಿಕೊಂಡು ಬರುತ್ತದೆ. ಮಹಾಭಾರತ, ಕುರಾನ, ಭಗವದ್ಗೀತೆ, ಬೈಬಲ್ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಧಾರ್ಮಿಕ ಹಾಗೂ ನೈತಿಕ ಸಂದೇಶಗಳು ಜೀವನ ಮೌಲ್ಯಗಳು ಸಾಮಾಜಿಕ ಸದ್ಗುಣಗಳು ಅಭಿವ್ಯಕ್ತಗೊಂಡಿರುತ್ತವೆ. ಶಿಕ್ಷಣವು ಇವೆಲ್ಲವುಗಳ ಪರಿಜ್ಞಾನವನ್ನು ಮಕ್ಕಳಿಗೆ ಮಾಡಿಕೊಡುವದರಿಂದ ಅವು ಮುಂದಿನ ಪೀಳಿಗೆಗೆ ಸಹಜವಾಗಿ ವರ್ಗಾಯಿಸಲ್ಪಡುತ್ತವೆ. ಶಿಕ್ಷಣವು ಪ್ರಾಚೀನ ಪದ್ಧತಿ, ಪರಂಪರೆ, ಲೋಕರೂಢಿ, ನೈತಿಕ ನಿಯಮಗಳನ್ನು ಸಾಗಿಸಿಕೊಂಡು ಬರುವ ವಾಹಕವಾಗಿ ಕಾರ್ಯ ಮಾಡುತ್ತವೆ.

೪) ಮಹಿಳೆಯರ ಸ್ಥಾನಮಾನಗಳ ಸುಧಾರಣೆ :

೧೯೨೯ ರಲ್ಲಿ ಹಾರ್ಟೋಗ್ ಕಮೀಟಿಯು ಮಹಿಳಾ ಶಿಕ್ಷಣದ ಅವಶ್ಯಕತೆಯನ್ನು ಈ ರೀತಿಯಾಗಿ ವಿವರಿಸಿರುತ್ತದೆ. ಅತೀ ಪ್ರಾಚೀನ ಕಾಲದಿಂದಲೂ ನಮ್ಮ ದೇಶದಲ್ಲಿ ಸುಶಿಕ್ಷಿತ ಪುರುಷ ಸಂತತಿ ಹಾಗೂ ಅಶಿಕ್ಷಿತ ಮಹಿಳಾ ಸಂತತಿ ಎಂಬ ಸಾಮಾಜಿಕ ಅಂತರವು ರಾಷ್ಟ್ರದ ಪ್ರಗತಿಯನ್ನೇ ಕುಂಠಿತಗೊಳಿಸಿರುತ್ತದೆ. ಈ ಅಂತರವು ವ್ಯಕ್ತಿಯ ಕುಟುಂಬದ ಹಾಗೂ ರಾಷ್ಟ್ರೀಯ ಚಾರಿತ್ರ್ಯವನ್ನೇ ದುರ್ಬಲಗೊಳಿಸದೇ ಮಹಿಳಾ ಶಿಕ್ಷಣವು ರಾಷ್ಟ್ರಕ್ಕೆ ಶಾಶ್ವತವಾದ ಸಂಪತ್ತನ್ನು ದೊರಕಿಸಿ ಕೊಡಬಲ್ಲದು. ೧೯೪೮ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಮಹಿಳಾ ಶಿಕ್ಷಣದ ಮಹತ್ವವನ್ನು ಈ ರೀತಿಯಾಗಿ ವಿವರಿಸುತ್ತದೆ. ಒಂದು ವೇಳೆ ಶಿಕ್ಷಣವು ಪುರುಷರಿಗೆ ಇಲ್ಲವೇ ಮಹಿಳೆಯರಿಗೆ ಎಂದಿದ್ದರೆ, ಶಿಕ್ಷಣವನ್ನು ಮೊದಲು ಮಹಿಳೆಯರಿಗೆ ಕೊಡಬೇಕು. ನಂತರ ಅದು ಮುಂದಿನ ಜನಾಂಗಕ್ಕೆ ನಿಶ್ಚಿತವಾಗಿ ವರ್ಗಾಯಿಸಲ್ಪಡುತ್ತದೆ.

೫) ಸ್ವಾವಲಂಬಿ ಬದುಕಿನ ಸೌಲಭ್ಯ :

ಶಿಕ್ಷಣವು ಪ್ರಮುಖವಾಗಿ ವ್ಯಕ್ತಿಯ ಬದುಕಿಗೆ ಸಂಬಂಧಪಟ್ಟಿರಬೇಕು. ಶಿಕ್ಷಣ ಸಂಸ್ಥೆಯಿಂದ ಹೊರಗೆ ಬಂದ ಮೇಲೆ ಪ್ರತಿಯೊಬ್ಬನೂ ಸ್ವತಂತ್ರ ಹಾಗೂ ಸ್ವಾವಲಂಬಿ ಬದುಕನ್ನು ಸಾಗಿಸುವಂತಾಗಬೇಕು. ಕೇವಲ ಪುಸ್ತಕೀಯ ಜ್ಞಾನವನ್ನು ನೀಡುವದಷ್ಟೇ ಶಿಕ್ಷಣದ ಗುರಿಯೆಂದು ತಿಳಿದರೆ ತಪ್ಪಾಗುವದು. ಇದಕ್ಕೆ ಪ್ರತಿಯಾಗಿ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಉಪಜೀವನದ ಮಾರ್ಗವನ್ನು ನೀಡುತ್ತದೆ. ಇನ್ನೊಬ್ಬರ ಮೇಲೆ ಅವಲಂಬಿತರಾಗಿ ಬದುಕನ್ನು ಸಾಗಿಸುವದು ಹೇಡಿತನ ಎಂಬ ಸ್ವಾಭಿಮಾನದ ಕಿಚ್ಚನ್ನು ಶಿಕ್ಷಣವು ಜಾಗೃತಗೊಳಿಸುತ್ತದೆ.

ಅನೇಕ ದೇಶಗಳು ಇತ್ತಿತ್ತಲಾಗಿ ವೃತ್ತಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಲಿವೆ. ಕೆಲವೊಂದು ಪಾಶ್ಚಿಮಾತ್ಯ ದೇಶಗಳಲ್ಲಿ ಕಲಿಯುದರೊಂದಿಗೆ ಗಳಿಕೆಯನ್ನು ಕೂಡ ಪ್ರಾರಂಭಿಸುವಂತೆ ಅನುಕೂಲವಾಗುವ ಶಿಕ್ಷಣವನ್ನು ನೀಡಲಾಗುತ್ತಿದೆ. ನಮ್ಮ ದೇಶದಲ್ಲಿ ಸ್ತ್ರೀಯರ ಆರ್ಥಿಕ ಸ್ವಾವಲಂಬನೆಗೆ ಶಿಕ್ಷಣವೇ ಪ್ರಮುಖ ಸಂಗತಿಯಾಗಿದೆ.

೬) ಶೀಲ ಸಂವರ್ಧನೆ :

ಶಿಕ್ಷಣ ತಜ್ಞನಾದ ರೇಮಂಟರ್ "ಶಿಕ್ಷಕರ ಅಂತಿಮ ಗುರಿಯು ವಿದ್ಯಾರ್ಥಿಗಳ ಶರೀರ ಬೆಳೆಸುವುದರಲ್ಲಿ ಜ್ಞಾನ ತುಂಬುವದಲ್ಲ, ಆದರೆ ಶುದ್ಧ ಶೀಲದ ಬಲವನ್ನು ಬೆಳೆಸುವದಾಗಿದೆ." ಎಂದು ಶೀಲ ಸಂವರ್ಧನೆಯ ಮಹತ್ವವನ್ನು ತಿಳಿಸಿರುತ್ತಾರೆ. ಗಾಂಧೀಜಿಯವರಂತೂ "ನೀತಿರಹಿತ ಶಿಕ್ಷಣ, ಶೀಲವಿಲ್ಲದ ಶಿಕ್ಷಣ, ಶಿಕ್ಷಣವೇ ಅಲ್ಲ" ಎಂದು ಅಭಿಪ್ರಾಯಪಟ್ಟಿರುತ್ತಾರೆ. ಮಗುವಿನಲ್ಲಿ ಸಾಮಾಜಿಕ ಸದ್ಗುಣಗಳನ್ನು ಬೆಳಸುವಲ್ಲಿ ಶಿಕ್ಷಣದ ಪಾತ್ರವು ಗಮನಾರ್ಹವಾಗಿರುತ್ತದೆ.

೭) ಸಾಮಾಜಿಕ ಪ್ರಗತಿ :

ವ್ಯಕ್ತಿಯ ಬೆಳವಣಿಗೆ ಸಮಾಜದ ಬೆಳವಣಿಗೆಗೆ ಸಹಾಯಕಾರಿಯಾಗಿರಬೇಕು. ರಾಷ್ಟ್ರದ ಪ್ರಗತಿಗೆ ಪೂರಕವಾಗಿರಬೇಕೆಂಬುದು ಪ್ರಜಾಪ್ರಭುತ್ವ ರಾಷ್ಟ್ರಗಳ ಉದ್ದೇಶವಾಗಿರುತ್ತದೆ. ಕೆಲವೊಂದು ರಾಷ್ಟ್ರ ಮತ್ತು ಸಮಾಜದ ಹಿತಕ್ಕಾಗಿ ವ್ಯಕ್ತಿ ತನ್ನ ವೈಯುಕ್ತಿಕ ಆಸೆ ಆಮಿಷಗಳನ್ನು ತ್ಯಾಗ ಮಾಡಬೇಕಾಗುತ್ತದೆ.

ಶಿಕ್ಷಣವು ವ್ಯಕ್ತಿಯಲ್ಲಿ ಪೌರ ಪ್ರಜ್ಞೆಯನ್ನು ಬೆಳೆಸುತ್ತದೆ. ಹಕ್ಕು ಮತ್ತು ಕರ್ತವ್ಯಗಳ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ರಾಷ್ಟ್ರದ ಪ್ರಗತಿಗಾಗಿ ಸಮಾಜದ (ಹಿತಕ್ಕಾಗಿ ವ್ಯಕ್ತಿ ತನ್ನ ವೈಯುಕ್ತಿಕ ಆಶೆ ಆಮಿಷಗಳನ್ನು ತ್ಯಾಗ ಮಾಡಬೇಕಾಗುತ್ತದೆ.) ಒಳಿತಿಗಾಗಿ ಯಾವ ರೀತಿ ಸೇವೆ ಸಲ್ಲಿಸಬೇಕೆನ್ನುವದನ್ನು ನಿಜವಾದ ಶಿಕ್ಷಣವು ಕಲ್ಪಿಸಿಕೊಡುತ್ತದೆ.

ದೇಶದ ಭವಿಷ್ಯವು ಶಾಲಾ ತರಗತಿಗಳಲ್ಲಿ ನಿರ್ಧರಿಸಲ್ಪಡುತ್ತದೆ ಎಂದು ಕೊಠಾರಿ ಆಯೋಗದಲ್ಲಿ ಹೇಳಲಾಗಿದೆ. ಒಂದು ರಾಷ್ಟ್ರದ ಭವಿಷ್ಯತ್ತು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

೨.೧೧ ಸಮುದಾಯ ಮತ್ತು ಶಿಕ್ಷಣ :

ಶಿಕ್ಷಣವು ಸಾಮಾಜಿಕ ಪ್ರಕ್ರಿಯೆಯಾಗಿದೆ ಎಮಬ ವಿಷಯವನ್ನು ಈಗಾಗಲೇ ಅರಿತುಕೊಂಡಿದ್ದೇವೆ. ಮಾನವನಗಿಂತಲೂ ಕೆಳದರ್ಜೆಯ ಪ್ರಾಣಿ, ಪಶು, ಪಕ್ಷಿಗಳಿಗೆ ಶಿಕ್ಷಣದ ಅಗತ್ಯತೆ ಅಷ್ಟೊಂದು ಕಂಡು ಬರುವದಿಲ್ಲ. ಉಳಿದ ಪ್ರಾಣಿಗಳೊಂದಿಗೆ ಸಂಪರ್ಕವಿಲ್ಲದೇ ಅವು ಕೆಲವೊಂದು ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಬರುತ್ತವೆ. ಮಾನವನು ಮಾತ್ರ ಪ್ರಾಣಿ ಪಕ್ಷಿಗಳಂತೆ ಕೇವಲ ಸಹಜ ಪ್ರವೃತ್ತಿಗಳ ಗುಲಾಮನಾಗಿ ಬದುಕಿನಿಂದ ಸಾಯುವ ಪರ್ಯಂತರವೂ ಹಲವಾರು ವಿಷಯಗಳನ್ನು ಆತ ಕಲಿತುಕೊಳ್ಳಬೇಕಾಗುತ್ತದೆ. ಆದುದರಿಂದಲೇ ಶಿಕ್ಷಣವು ಮಾನವ ಸಮಾಜದ ಸಾರ್ವತ್ರಿಕ ಹಾಗೂ ಮೂಲಭೂತ ಲಕ್ಷಣವಾಗಿದೆ ಎಂದು ಹೇಳುತ್ತೇವೆ. ಶೈಕ್ಷಣಿಕ ತತ್ವ ಹಾಗೂ ಶಿಕ್ಷಣದ ಉದ್ದೇಶಗಳು ಮಾತ್ರ ಎಲ್ಲ ದೇಶಗಳಲ್ಲೂ ಒಂದೇ ಇರುತ್ತವೆ. ಆಚರಣೆಯಲ್ಲಿ ತರುವಾಗ ಮಾತ್ರ ಕೆಲವೊಂದು ವ್ಯತ್ಯಾಸಗಳನ್ನು ಮಾಡಲಾಗಿರುತ್ತದೆ. ವಿದ್ಯಾಭ್ಯಾಸವು ಪ್ರಮುಖವಾಗಿ ಬದುಕಿಗೆ ಸಂಬಂಧಿಸಿರಬೇಕು. ಜೀವನವನ್ನು ಸುಲಭವಾಗಿ ನಡೆಸಲು ಅದು ಸಹಾಯಕಾರಿಯಾಗಿರಬೇಕು. ಇದು ಬಹುಸಂಖ್ಯಾತ ಶಿಕ್ಷಣತಜ್ಞರ ಅಭಿಪ್ರಾಯವಾಗಿದೆ.

ಶ್ರೇಷ್ಠ ಸಮಾಜ ವಿಜ್ಞಾನಿ ಹಾಗೂ ಸಮಾಜಶಾಸ್ತ್ರದ ಪಿತಾಮಹನಾದಂಥ ಅಗಸ್ಟಕೋಮ್ಟನು ಅನುಕಂಪ, ಪರಸ್ಪರ ತಿಳುವಳಿಕೆ ಹಾಗೂ ಪರೋಪಕಾರದ ಮನೋಭಾವನೆಗಳನ್ನು ಮಕ್ಕಳಲ್ಲಿ ಒಡಮೂಡಿಸುವದೇ ನಿಜವಾದ ಶಿಕ್ಷಣವೆಂದು, ಅದರ ಮಹತ್ವತೆಯನ್ನು ಎತ್ತಿ ತೋರಿಸಿದ್ದಾನೆ. ವಿಶ್ವವಿದ್ಯಾಲಯಗಳ ಕರ್ತವ್ಯವನ್ನು ಕುರಿತು ನ್ಯೂಮನ್ "ವಿಶ್ವವಿದ್ಯಾಲಯದ ಶಿಕ್ಷಣದ ಪ್ರಮುಖ ಗುರಿಯು ಸಮಾಜಕ್ಕೆ ಆದರ್ಶ ವ್ಯಕ್ತಿಗಳನ್ನು ಸಿದ್ಧಪಡಿಸುವದು" ಎಂದು ಹೇಳಿರುತ್ತಾನೆ. ಅಧ್ಯಕ್ಷ ಟ್ರೋಮನ್‌ರು ಅಮೇರಿಕೆಯ ಪ್ರಜಾಪ್ರಭುತ್ವದ ಶಿಕ್ಷಣದ ಬಗೆಗೆ ಈ ರೀತಿಯಾಗಿ ಹೇಳಿರುತ್ತಾರೆ. "ಆಳವಾದ ಅನುಭವ, ವ್ಯವಹಾರ ಜ್ಞಾನ ಹಾಗೂ ಸಮಯೋಚಿತ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವ ಶಕ್ತಿಯನ್ನು ಹೊಂದಿದವರು ರಾಷ್ಟ್ರದ ಯೋಜನೆಗಳನ್ನು ರೂಪಿಸಬೇಕು." ಇವರ ಮಾತುಗಳು ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಅನ್ವಯಿಸುತ್ತದೆ. ವಿಶ್ವವಿದ್ಯಾಲಯದ ಶಿಕ್ಷಣದ ಬಗೆಗೆ ತಮ್ಮ ವರದಿಯನ್ನು ಸಲ್ಲಿಸಿದ ಡಾ. ರಾಧಾಕೃಷ್ಣನ್ ಅವರ ಸಮಿತಿಯು "ಉದ್ಯೋಗದ ಸೌಲಭ್ಯ ಹಾಗೂ ಸಾಮಾಜಿಕ ಜೀವನದಲ್ಲಿ ನಾಯಕತ್ವವಹಿಸುವ ತರಬೇತಿಯನ್ನು ಕೊಡುವದೇ ವಿಶ್ವವಿದ್ಯಾಲಯಗಳ ಪ್ರಮುಖ ಉದ್ದೇಶ" ಎಂದು ಅಭಿಪ್ರಾಯಪಟ್ಟಿದೆ. ಮಹಾತ್ಮಾ ಗಾಂಧೀಜಿಯವರು ನೀತಿರಹಿತ ಶಿಕ್ಷಣ ಶಿಕ್ಷಣವೇ ಅಲ್ಲವೆಂದು ಹೇಳಿರುತ್ತಾರೆ. ಅವರ ಪ್ರಕಾರ ಚಾರಿತ್ರ್ಯವನ್ನು ಪೋಷಿಸಲಾರದ ಶಿಕ್ಷಣ ಮಹಾಪಾಪ. ವ್ಯಕ್ತಿಯ ಓದುಬರಹದ ಮೇಲೆಯೇ ವೈಯಕ್ತಿಕ ಮತ್ತು

ಸಾಮಾಜಿಕ ಪ್ರಗತಿಯು ಅವಲಂಬಿಸಿದೆ ಎಂದು ಡಾಲೆ ಅಭಿಪ್ರಾಯ ಪಟ್ಟಿರುತ್ತಾರೆ. ಅವರ ಪ್ರಕಾರ ಒಂದು ದೇಶದ ನಿಜವಾದ ಸಂಪತ್ತೆಂದರೆ ಸುಶಿಕ್ಷಿತ ಯುವಜನಾಂಗ ಆಗಿರುವದು.

೨.೧೨ ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಒಂದು ಸಾಧನ :

ಸಮಾಜದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬೇಕೆಂಬುದು ನಮ್ಮ ರಾಷ್ಟ್ರನಾಯಕರ, ಸಮಾಜ ಸುಧಾರಕರ ಹಾಗೂ ಸಾಮಾಜಿಕ ಚಿಂತನಕಾರರ ಪ್ರಮುಖ ಗುರಿಯಾಗಿದೆ. ಪರಿವರ್ತನೆ ಕೇವಲ ಬಾಯಿಮಾತಿನಿಂದ ಸಾಧ್ಯವಾಗಲಾರದು. ಅದಕ್ಕಾಗಿ ನಾವು ಪರಿಶ್ರಮಪಡಬೇಕಾಗುತ್ತದೆ. ಹಲವಾರು ತಂತ್ರ, ವಿಧಾನ, ಸಾಧನಗಳನ್ನು ಬಳಸಬೇಕಾಗುತ್ತದೆ. ಅವುಗಳಲ್ಲಿ ಅತ್ಯಂತ ಪ್ರಬಲವಾದ ಸಾಧನವೇ ಶಿಕ್ಷಣವಾಗಿದೆ. ಈ ಹಿನ್ನೆಲೆಯಲ್ಲಿ ಪರಿವರ್ತನೆ ಮೊದಲು ಶಿಕ್ಷಣ ನಂತರ ಪರಿವರ್ತನೆಯನ್ನು ತರುವ ಪ್ರಮುಖ ಅಸ್ತ್ರ ಶಿಕ್ಷಣ, ಅಜ್ಞಾನ, ಅಂಧಾನುಕರಣೆ, ಮೂಢನಂಬಿಕೆಗಳು ನಮ್ಮ ಸಾಮಾಜಿಕ ಪ್ರಗತಿಗೆ ಕಂಟಕಪ್ರಾಯವಾಗಿವೆ. ಇವುಗಳ ನಿರ್ಮೂಲನೆಯಾಗದ ಹೊರತು ಸಾಮಾಜಿಕ ಪರಿವರ್ತನೆ ಸಾಧ್ಯವಿಲ್ಲ. ಅದಕ್ಕಾಗಿ ಶಿಕ್ಷಣ ಅವಶ್ಯಕ ಸಂಗತಿಯಾಗಿದೆ.

ಮಹಾತ್ಮಾ ಗಾಂಧೀಜಿಯವರು ಅಭಿಪ್ರಾಯಪಟ್ಟಿರುವಂತೆ ಬಹುಸಂಖ್ಯಾತ ಭಾರತೀಯರ ಬಡತನ ಮತ್ತು ಹಿಂದುಳಿಯುವಿಕೆಗೆ ಅಜ್ಞಾನ ಮತ್ತು ಅನಕ್ಷರತೆಗಳೇ ಪ್ರಮುಖ ಕಾರಣಗಳಾಗಿವೆ. ಗಾಂಧೀಜಿಯವರು ತಮ್ಮ ಸೇವಾಗ್ರಾಮ ಮತ್ತು ಸಾಬರಮತಿ ಆಶ್ರಮಗಳಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಬ್ರಹ್ಮಸಮಾಜ, ಪ್ರಾರ್ಥನಾಸಮಾಜ, ಆರ್ಯಸಮಾಜ, ರಾಮಕೃಷ್ಣ ಮಿಶನರಿ ಮುಂತಾದ ಸಂಘಟನೆಗಳು ಧರ್ಮ ಪ್ರಸಾರದೊಂದಿಗೆ ಶಿಕ್ಷಣ ಪ್ರಸಾರಕ್ಕೆ ಆದ್ಯತೆ ನೀಡಿದ್ದವು.

ಸುಶಿಕ್ಷಿತ ಯುವಜನಾಂಗದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯವಾಗಬಲ್ಲದು. ಮಹಾತ್ಮಾಗಾಂಧೀಜೀಯವರು ಶಿಕ್ಷಣ ಮುಗಿಸಿದ ತಕ್ಷಣ ನಮ್ಮ ಯುವ ಜನಾಂಗ ಹಳ್ಳಿಗಳಿಗೆ ಹೋಗಬೇಕು, ಹಳ್ಳಿಗಳ ಸ್ಥಿತಿಗತಿಗಳ ಸುಧಾರಣೆಗೆ ಗಮನ ನೀಡಬೇಕು ಎಂದು ಯುವಕರಿಗೆ ನೀಡಿರುವುದು ಸಾಮಾಜಿಕ ಬದಲಾವಣೆಗಾಗಿಯೇ ಎಂಬ ಸಂಗತಿಯು ಮನದಟ್ಟಾಗುತ್ತದೆ.

ಸಮಾಜದಲ್ಲಿ ಅಪೇಕ್ಷಿತ ಮಟ್ಟದ ಗುರಿಯಾಧಾರಿತ ಮತ್ತು ಸುವ್ಯಸ್ಥಿತ ಪರಿವರ್ತನೆ ತರಬೇಕೆಂಬ (ಪ್ಲಾನಡ್ ಸೋಷಿಯಲ್ ಚೇಂಜ್) ಮಹಾತ್ವಾಕಾಂಕ್ಷೆಯ ಪರಿಣಾಮವೇ ಶೈಕ್ಷಣಿಕ ಪ್ರಗತಿಯಾಗಿದೆ. ಜನಸಾಮಾನ್ಯರ ಆಸಕ್ತಿ ಮತ್ತು ಬೇಡಿಕೆಗಳಿಗೆ ತಕ್ಕಂತೆ ಶಿಕ್ಷಣಕ್ರಮ ಮತ್ತು ವಿಧಾನಗಳಲ್ಲಿಯೂ ತೀವ್ರ ಸ್ವರೂಪದ ಬದಲಾವಣೆಗಳನ್ನು ಗಮನಿಸುತ್ತೇವೆ. ಸ್ವಾತಂತ್ರ್ಯಕ್ಕಿಂತ ಪೂರ್ವದಲ್ಲಿ ಶಿಕ್ಷಣದ ಬಗೆಗೆ ಭಾರತೀಯರಲ್ಲಿ ಅಷ್ಟೊಂದು ಆಸಕ್ತಿಯಿರಲಿಲ್ಲ. ಕಾರಣ ಸಂಸ್ಥೆಗಳ ಸಂಖ್ಯೆ ಬಹಳ ಕಡಿಮೆಯಾಗಿದ್ದಿತು. ಸ್ವಾತಂತ್ರ್ಯಾನಂತರ ಜನರ ಬೇಡಿಕೆಗಳಿಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳ ಪ್ರಮಾಣವು ಹೆಚ್ಚಿರುವುದನ್ನು ಗಮನಿಸುತ್ತೇವೆ.

ಔದ್ಯೋಗೀಕರಣ ಮತ್ತು ನಗರೀಕರಣ ತಾಂತ್ರಿಕ ಪ್ರಗತಿಯಿಂದಾಗಿ. ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ವೃತ್ತಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಗೊಂಡಿರುತ್ತವೆ. ಉನ್ನತ ವ್ಯಾಸಂಗವನ್ನು ಪಡೆಯಬೇಕೆಂಬ ಆಸಕ್ತಿ ಮಹಿಳೆಯರಲ್ಲಿಯೂ ಜಾಗೃತವಾಗಿರುವುದರಿಂದ ಪ್ರತ್ಯೇಕ ಮಹಿಳಾ ಮಹಾವಿದ್ಯಾಲಯಗಳು ಮತ್ತು ತರಬೇತಿ ಸಂಸ್ಥೆಗಳು ಜನ್ಮತಾಳಿವೆ. ಯೋಗಾಸನಗಳಿಂದ ಹಲವಾರು ರೋಗನಿವಾರಣೆಯಾಗಬಲ್ಲವು ಎಂಬ ಅರಿವು ಮೂಡಿರುವುದರಿಂದ ಅನೇಕ ಯೋಗಕೇಂದ್ರಗಳು ಜನ್ಮತಾಳಿದವು. ಅದೇರೀತಿಯಾಗಿ ಕಂಪ್ಯೂಟರ್ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿದವು.

ಔದ್ಯೋಗಿಕ ಕ್ರಾಂತಿ ನಗರೀಕರಣ ಮತ್ತು ತಾಂತ್ರಿಕ ಪ್ರಗತಿಯಿಂದಾಗಿ ಇಂದು ರಾಷ್ಟ್ರವು ದುರ್ಘಟನೆ, ದುರ್ಮರಣ, ಕೊಳಚೆ, ಅನಾರೋಗ್ಯ, ಪರಿಸರಮಾಲಿನ್ಯ ಮುಂತಾದ ಹೊಸ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಈ ದಿಶೆಯಲ್ಲಿ ಜನಜಾಗೃತಿ ಮೂಡಿಸುವ ಶಿಕ್ಷಣವನ್ನು ಸಮಾಜ ಮತ್ತು ಸರಕಾರ ನೀಡುತ್ತಲಿದೆ.

೧೯೬೨ರ ಚೀನಾಯುದ್ಧ, ೧೯೬೫ ಪಾಕಿಸ್ತಾನ ಯುದ್ಧ, ೧೯೭೧ ರ ಬಾಂಗ್ಲಾ ವಿಭಜನೆ ಮುಂತಾದ ಘಟನೆಗಳು ರಾಷ್ಟ್ರದ ಪುನರ್‌ನಿರ್ಮಾಣದ ಮಹತ್ವತೆಯನ್ನು ನಮ್ಮಲ್ಲಿ ಬಿಂಬಿಸಿರುತ್ತವೆ. ಸುಭದ್ರ ಭಾರತವನ್ನು ನಿರ್ಮಿಸಲು ಶಿಕ್ಷಣವು ಅತ್ಯಂತ ಅವಶ್ಯಕವಾಗಿದೆಯೆಂಬ ತಿಳಿವಳಿಕೆ ಭಾರತೀಯರಲ್ಲಿ ಜಾಗೃತವಾಗಿದೆ. ಈ ರೀತಿಯಾಗಿ ಸಾಮಾಜಿಕ ಬದಲಾವಣೆಗೆ ಅನುಗುಣವಾಗಿ ಶಿಕ್ಷಣಪದ್ಧತಿ ಗುಣಮಟ್ಟ ಮತ್ತು ಪ್ರಮಾಣಗಳಲ್ಲಿ ತೀವ್ರಗತಿಯ ಬದಲಾವಣೆಗಳು ಕಂಡುಬರುತ್ತಲಿವೆ. ಕಾರಣ ಶಿಕ್ಷಣವು ಸಾಮಾಜಿಕ ಬದಲಾವಣೆಯ ಫಲಶೃತಿಯೆಂದು ಹೇಳಬಹುದಾಗಿದೆ.

ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರವನ್ನು ಸುವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ಕೆಳಗಿನಂತೆ ಅಧ್ಯಯನ ಮಾಡಬಹುದಾಗಿದೆ.

೨.೧೩. ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರ :

ಪರಿವರ್ತನೆಯೆಂಬುದು ಒಂದು ನಿರಂತರ ಪ್ರಕ್ರಿಯೆ, ನಿತ್ಯನೂತನ ಮಾನವನ ಹುಟ್ಟು ಎಂದಾಯಿತೋ ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಅವನ ಜೀವನದ ಎಲ್ಲಾ ರಂಗಗಳಲ್ಲೂ ಪರಿವರ್ತನೆ ಆಗಿರುವುದು ನಿತ್ಯಸತ್ಯ. ಜೀವನದ ವಿಚಾರ, ಸಂಸ್ಕೃತಿ, ನಾಗರೀಕತೆ ಎಲ್ಲವೂ ಪರಿವರ್ತನೆ ಹೊಂದುತ್ತಲೇ ಬಂದಿವೆ. ಹಾಗೂ ಮುಂದು ಪರಿವರ್ತನೆ ಆಗುತ್ತಲೇ ಹೋಗುತವೆ.

ಮಾನವನ ಜೀವನ ಪರಿವರ್ತನಶೀಲವಾದದ್ದು, ಪರಿವರ್ತನೆಯು ಪ್ರಕೃತಿಯ ನಿಯಮವಾಗಿದೆ. ಅಂತೆಯೇ ಮಾನವ ಸಮಾಜ ಕೂಡ ಇದಕ್ಕೆ ವಿರುದ್ಧವೇನಲ್ಲ. ಮಾನವ ಸಮಾಜ ಪ್ರಾರಂಭದಿಂದಲೂ ಅವ್ಯಾಹತವಾಗಿ ಪರಿವರ್ತನೆ ಹೊಂದುತ್ತಲೇ ಬಂದಿದೆ. ಸಮಾಜ ನಿಂತ ನೀರಲ್ಲ. ಸದಾ ಬದಲಾವಣೆಯ ಲಕ್ಷಣ ಹೊಂದಿರುವ ಸಮಾಜದ ಪರಿವರ್ತನೆಯಿಂದಲೇ. ಅನಾಗರಿಕ ಮಾನವ ಸಮಾಜ ಇಂದು

ನಾಗರಿಕ ಮಾನವ ಸಮಾಜದ ವಾತಾವರಣ ಮೂಡಿಸಿದೆ. ಈ ಪರಿವರ್ತನೆ ಒಂದು ದಿನದಲ್ಲಿ ಒಂದು ವರ್ಷದಲ್ಲಿ ಆದದ್ದಲ್ಲ. ಸ್ವತಂತ್ರಪೂರ್ವಕ್ಕೂ. ಪ್ರಾಚೀನ ಕಾಲಕ್ಕೂ ವ್ಯತ್ಯಾಸವಿದ್ದಂತೆ. ಸ್ವತಂತ್ರನಂತರದ ಪರಿಸ್ಥಿತಿಗೂ ಸದ್ಯದ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಇದೆಲ್ಲಾ ಪರಿವರ್ತನೆಯ ಲಕ್ಷಣವಾಗಿದೆ. ಈ ಪರಿವರ್ತನೆಯ ಅಗಾಧತೆ ಊಹಿಸುವುದು ಮತ್ತು ಮೌಲ್ಯ ಮಾಡುವುದು ಕಷ್ಟಸಾಧ್ಯ.

ಸಮಾಜದ ಪರಿವರ್ತನೆ :

ಯಾವುದೇ ಒಂದು ವಸ್ತು ಅಥವಾ ಜೀವಿಯಲ್ಲಿ ಕಾಲಾನುಕ್ರಮದಲ್ಲಾದ ವ್ಯತ್ಯಾಸವನ್ನು ಪರಿವರ್ತನೆ ಎನ್ನಬಹುದು. ಸಾಮಾಜಿಕ ಪರಿವರ್ತನೆ ಎಂಬುದು ಮಾನವನ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಕಾಣಬರುವ ವ್ಯತ್ಯಾಸಗಳನ್ನು ಸೂಚಿಸುತ್ತದೆ. ಸಮಾಜದ ರಚನೆ ಹಾಗೂ ಕಾರ್ಯಗಳಲ್ಲಾಗುವ ಬದಲಾವಣೆಯೇ ಸಾಮಾಜಿಕ ಪರಿವರ್ತನೆ ಎನ್ನಲಾಗಿದೆ.

ಇತ್ತೀಚಿನ ಆಧುನಿಕ ದಿನಗಳಲ್ಲಿ ಶಿಕ್ಷಣ ನಿಜಕ್ಕೂ ಸಾಮಾಜಿಕ ಪರಿವರ್ತನೆ ತರುವಲ್ಲಿ ಪ್ರಮುಖ ಸಾಧನವಾಗಿದೆ. ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರಗತಿಪೂರ್ಣ ಬೆಳವಣಿಗೆ ಸಾಮಾಜಿಕ ರಂಗದಲ್ಲಿ ಗಮನಾರ್ಹ ಬದಲಾವಣೆ ತಂದಿದೆ ಎಂಬುದು ನಗ್ನಸತ್ಯ. ನವೀನ ಯಂತ್ರೋಪಕರಣಗಳ ನಿರ್ಮಾಣ ಈ ಪರಿವರ್ತನೆಗೆ ಕಾರಣವಾಗಿದೆ. ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಗೆ ಶಿಕ್ಷಣವೇ ಮುಖ್ಯ ಕಾರಣ. ಸಾಮಾಜಿಕ ಪರಿವರ್ತನೆಗೆ ಬೇಕಾಗುವ ಸೂಕ್ತ ಹಾಗೂ ಅನುಕೂಲಕರ ಪರಿಸ್ಥಿತಿಯನ್ನು ಶಿಕ್ಷಣ ಒದಗಿಸಿದೆ. ಉಚಿತ ಹಾಗೂ ಕಡ್ಡಾಯದ ಸಾರ್ವತ್ರಿಕ ಶಿಕ್ಷಣ, ಶಿಕ್ಷಣದಲ್ಲಿ ಸಮಾನ ಅವಕಾಶಗಳು, ಸ್ತ್ರೀ ಶಿಕ್ಷಣಕ್ಕೆ ಪ್ರಾಧಾನ್ಯತೆ, ವಯಸ್ಕರ ಶಿಕ್ಷಣ, ಶಿಕ್ಷಣರಂಗದಲ್ಲಿ ಸಮೂಹ ಮಾಧ್ಯಮಗಳ ಬಳಕೆ ಇವೆಲ್ಲಾ ಮಕ್ಕಳ, ಯುವಕರ, ಮಹಿಳೆಯರ ಮತ್ತು ವಯಸ್ಕರ ದೃಷ್ಟಿಕೋನಗಳನ್ನು ಬದಲಿಸುವಲ್ಲಿ ಪ್ರಭಾವ ಬೀರಿವೆ. ವರ್ತನೆಯ ಪರಿವರ್ತನೆಯೇ ಶಿಕ್ಷಣದ ಗುರಿ. ಮಗು ಮತ್ತು ವ್ಯಕ್ತಿಯ ದೈಹಿಕ ಮಾನಸಿಕ. ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ನೈತಿಕ ಸುಧಾರಣೆ ಮಾಡುವುದಾಗಿದೆ.

ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದಂತಹ ಪರಿಣಾಮಕಾರಿಯಾದ ಪರಿಸರ ಮತ್ತೊಂದಿಲ್ಲ. ಔಪಚಾರಿಕವಾದ ಶಾಲೆ-ಕಾಲೇಜುಗಳು ಸಾಮಾಜಿಕ ಪರಿವರ್ತನೆ ತರುವಲ್ಲಿ ಗಮನಾರ್ಹ ಸಾಧನೆ ಮಾಡುತ್ತಲಿವೆ. ಇವು ಮಕ್ಕಳಿಗೆ ಗ್ರಂಥಾಲಯ, ಸಹಪಠ್ಯ ಚಟುವಟಿಕೆಗಳಾದ ಆಟ, ಮೇಲಾಟಗಳು ಸಾಂಸ್ಕೃತಿಕ ಚಟುವಟಿಕೆಗಳು. ವಿಚಾರಗೋಷ್ಠಿ, ವಿಚಾರ ಸಂಕಿರಣ, ಕಾರ್ಯಗಾರ. ಪ್ರವಾಸ, ವಸ್ತುಪ್ರದರ್ಶನ ಮುಂತಾದ ಕಾರ್ಯಕ್ರಮಗಳ ಮೂಲಕ ಇವರ ವಿಚಾರಶಕ್ತಿ ಹೆಚ್ಚಿನ ವೈಜ್ಞಾನಿಕ ಮನೋಭಾವನೆ ಮೂಡಿಸಿ ಮನೋವೈಶಾಲ್ಯತೆ ಹಾಗೂ ಸುಧಾರಿತ ಮೌಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ಸಹಾಯಕವಾಗಿವೆ. ಸಮೂಹ ಮಾಧ್ಯಮಗಳಂತೂ ಬಹಳಷ್ಟು ಮಟ್ಟಿಗೆ ಜನರ ಮನೋಭಾವನೆಗಳನ್ನು ಬದಲಿಸುವಲ್ಲಿ ಯಶಸ್ವಿಯಾಗಿವೆ. ಅಸಂಪ್ರದಾಯಿಕ ಶಿಕ್ಷಣ ನೀಡುತ್ತಿರುವ ಅಂಚೆ ಮತ್ತು ತೆರಪಿನ

ಸಂಸ್ಥೆಗಳು, ಮುಕ್ತವಿಶ್ವವಿದ್ಯಾಲಯಗಳ ಪಾತ್ರ ಅಪರಿಮಿತ. ಇವುಗಳ ಜೊತೆಗೆ ಪತ್ರಿಕೆಗಳಲ್ಲಿನ ಲೇಖನಗಳು, ಬರಹಗಳು, ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳ ಬಗ್ಗೆ ಪ್ರಜ್ಞೆ ಮೂಡಿಸುವ ಕಥೆ, ಕಾದಂಬರಿಗಳೂ ಮಹತ್ವದ ಪಾತ್ರ ವಹಿಸಿವೆ.

ಶಿಕ್ಷಣ ಸಾಮಾಜಿಕ ಪರಿವರ್ತನೆಯ ಅಸ್ತ್ರವಾಗಿದೆ. ಯಾವುದೇ ಸಮಾಜದ ಪ್ರಗತಿಪೂರ್ಣ ಅಭಿವೃದ್ಧಿ ಹಾಗೂ ಪುನಃರ್‌ರಚನೆಗೆ ಅವಶ್ಯವಿರುವ ಸಾಧನಗಳಲ್ಲಿ ಶಿಕ್ಷಣ ಅತ್ಯಂತ ಪ್ರಮುಖ ಸಾಧನೆ. ಇದು ಜ್ಞಾನಾರ್ಜನೆ ಕೌಶಲ್ಯ ಮನೋವೃತ್ತಿ ಹಾಗೂ ಮೌಲ್ಯಗಳ ಬಗ್ಗೆ ನವೀನ ವೈಚಾರಿಕತೆಯನ್ನು ಮಗು ಮತ್ತು ವ್ಯಕ್ತಿಯಲ್ಲಿ ಮೂಡಿಸುವ ಕಾರ್ಯಮಾಡುತ್ತದೆ. ಅನೇಕ ಪೂರ್ವಗೃಹಪೀಡಿತ ವಿಚಾರಗಳನ್ನು ನವೀನ ವೈಜ್ಞಾನಿಕ ವಿಚಾರಗಳ ಬೆಳಕಿನಲ್ಲಿ ಮರೆಮಾಡುವ ಕಾರ್ಯವೆಸಗುತ್ತದೆ. ಗಾಂಧೀಜಿಯವರ ಮೂಲ ಶಿಕ್ಷಣ ಪದ್ಧತಿಯು ಮೂಲೋದ್ಧೇಶ ಹಾಗೂ ಕೈಕೆಲಸ ಕೇಂದ್ರೀಕೃತವಾಗಿದ್ದು, ನಿಜಜೀವನಕ್ಕೆ ಸಂಬಂಧಿಸಿದ್ದು, ಸಾಮಾಜಿಕ ಬದಲಾವಣೆಯ ನಿಜವಾದ ಅಸ್ತ್ರದಂತಿದೆ. ಇದರ ಪಠ್ಯಕ್ರಮ ಸಾಮಾಜಿಕ ಪರಿವರ್ತನೆಗೆ ಬೇಕಾದ ಎಲ್ಲಾ ಅಂಶಗಳಿಂದ ಕೂಡಿದ್ದಾಗಿದೆ. ಕ್ರೈಸ್ತ ಮಿಷನರಿ ಶಾಲೆಗಳು, ರಾಮಕೃಷ್ಣ ಮಿಷನ್ ಶಾಲೆಗಳು, ಸಾಮಾಜಿಕ ಬದಲಾವಣೆಯ ಮಹತ್ವಪೂರ್ಣ ಕಾರ್ಯಮಾಡುತ್ತಿವೆ. ಶಿಕ್ಷಣರಂಗದ ಸರ್ಕಾರಿ ಸ್ಥಳೀಯ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಸ್ಪರ್ಧಾತ್ಮಕ ಮನೋಭಾವನೆಯ ಮುಖಾಂತರ ಮಕ್ಕಳಲ್ಲಿ ಯುವಕರಲ್ಲಿ ಸಾಮಾಜಿಕ ಪರಿವರ್ತನೆ ತರಲು ಪ್ರಯತ್ನಿಸುತ್ತಿರುವುದು ನಿತ್ಯಸತ್ಯ. ಶಿಕ್ಷಣದ ಗುರಿಗಳು ಸಹ ಸಾಮಾಜಿಕ ಬದಲಾವಣೆಯ ಗುರಿಗಳೇ ಆಗಿವೆ. ಶಿಕ್ಷಕರು ತಮ್ಮ ಪರಿಣಾಮಕಾರಿಯಾದ ಬೋಧನೆ ಮೂಲಕ ಮಾರ್ಗದರ್ಶಿಗಳಾಗಿದ್ದಾರೆ.

ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರವನ್ನು ಮುಖ್ಯವಾಗಿ ಹೀಗೆ ತಿಳಿಸಬಹುದು.

- ಆಧುನಿಕ ಶಿಕ್ಷಣ ವೃತ್ತಿ ಸಾಧನೆಯ ಗುರಿ ಹೊಂದಿದ್ದು, ಆ ಮೂಲಕ ವ್ಯಕ್ತಿಗಳನ್ನು ವಿವಿಧ ರಂಗಗಳಿಗೆ ಕಳಿಸಿ ಜವಾಬ್ದಾರಿ ನಿರ್ವಹಿಸುವ ಸಾಮರ್ಥ್ಯ ಉಂಟು ಮಾಡಿದೆ.
- ಸಾಂಪ್ರದಾಯಿಕ ವಿಚಾರಗಳನ್ನು ಮೂಢನಂಬಿಕೆಗಳನ್ನು ಸಾಮಾಜಿಕ ಹಿಡುವಳಿಗಳನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಂಡು ಜನರು ದೃಷ್ಟಿಕೋನಗಳನ್ನು ಬದಲಿಸುವಲ್ಲಿ ಸಹಾಯಕವಾಗಿದೆ.
- ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯ ಸಾಧನವಾಗಿದ್ದು ಜನರ ಸ್ಥಿತಿಗತಿಗಳನ್ನು ಬದಲಿಸಿ ಜೀವನಮಟ್ಟ ಸುಧಾರಿಸುವ ಮೂಲಕ ಅವರ ವೈಚಾರಿಕತೆಯನ್ನು ಬದಲಿಸಲೆತ್ನಿಸಿದೆ.
- ಶಿಕ್ಷಣವು ಸಾಮಾಜಿಕ ಚಲನೆಗೆ ಅವಕಾಶ ನೀಡಿದೆ.

- ದುರ್ಬಲ ವರ್ಗದ ಜನರ ಜಾಗೃತಿಗೆ ಕಾರಣವಾಗಿ ಅವರ ಸ್ಥಿತಿಗತಿಗಳನ್ನು, ಜೀವನದ ರೀತಿನೀತಿಗಳನ್ನು ಬದಲಿಸಿದೆ.
- ನಗರೀಕರಣಕ್ಕೆ, ಆಧುನೀಕರಣಕ್ಕೆ, ಕೈಗಾರಿಕರಣಕ್ಕೆ, ತಾಂತ್ರೀಕರಣಕ್ಕೆ, ರಾಜಕೀಕರಣಕ್ಕೆ, ಸಾಮಾಜೀಕರಣಕ್ಕೆ ಶಿಕ್ಷಣದ ಅವಕಾಶ ನೀಡಿ ಸಾಮಾಜಿಕ ಪರಿವರ್ತನೆಗೆ ದಾರಿಮಾಡಿದೆ.
- ಸ್ತ್ರೀಯರ ಸ್ಥಾನಮಾನಗಳನ್ನು ಹೆಚ್ಚಿಸಿ ಅವರ ದೃಷ್ಟಿಕೋನಗಳನ್ನು ಬದಲಿಸುವಲ್ಲಿ ಅವಕಾಶ ಕಲ್ಪಿಸಿದೆ.
- ಮುಕ್ತ ಹಾಗೂ ಸ್ವತಂತ್ರ ರೀತಿಯ ಶಿಕ್ಷಣ ಜನರ ಮೂಲಭೂತ ಹಕ್ಕುಗಳ ಬಗ್ಗೆ ಜನ-ಜಾಗೃತಿ ಮೂಡಿಸಿದೆ.

೨.೧೪ ಸಮಾಜ ಮತ್ತು ಶಿಕ್ಷಣ ಇವುಗಳ ನಡುವಿನ ಸಂಬಂಧ :

ಸಮಾಜ ಮತ್ತು ಶಿಕ್ಷಣ ಇವೆರಡೂ ಪರಸ್ಪರಾವಲಂಬಿಗಳು. ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ಈ ಸಾಮಾಜಿಕ ಸಂಬಂಧಗಳ ವೈಜ್ಞಾನಿಕ ಅಧ್ಯಯನ ಸಮಾಜಶಾಸ್ತ್ರದ ಕಾರ್ಯ. ಶಿಕ್ಷಣಶಾಸ್ತ್ರ ಸಮಾಜದ ಜನರ ಆಶೋತ್ತರಗಳನ್ನು ಈಡೇರಿಸಿ ಅವರನ್ನು ಸುಶಿಕ್ಷಿತ ಹಾಗೂ ಸಮಾಜದ ಆದರ್ಶ ವ್ಯಕ್ತಿಗಳನ್ನಾಗಿ ಮಾಡುವ ಕಾರ್ಯ ಮಾಡುತ್ತದೆ. ಸಮಾಜದ ವ್ಯಕ್ತಿಗಳು ಸಮಾಜದ ನಂಬಿಕೆ ವಿಚಾರ, ಕಾನೂನು, ಪದ್ಧತಿಗಳಿಂದ ಬಂಧಿತರಾಗಿರುತ್ತಾರೆ. ಈ ವಿಚಾರಣೆಗಳ ಉತ್ತಮ ಬೆಳವಣಿಗೆಯಿಂದ ಮಾತ್ರ ಅವರು ಉತ್ತಮ ವ್ಯಕ್ತಿಗಳಾಗಲು ಸಾಧ್ಯ. ಈ ಕಾರ್ಯ ಶಿಕ್ಷಣದ್ದು ಕಾರಣ ನಾಗರಿಕ ಜೀವನದ ಸಾಧನೆ-ಸಾರ್ಥಕಗಳು ಶಿಕ್ಷಣವನ್ನವಲಂಬಿಸಿವೆ. ಸುಸಂಸ್ಕೃತ ವ್ಯಕ್ತಿಗಳ ನಿರ್ಮಾಣ ಕಾರ್ಯ ಶಿಕ್ಷಣದ್ದು. ಸುಸಂಸ್ಕೃತ ವ್ಯಕ್ತಿಗಳೇ ಆದರ್ಶ ಸಮಾಜದ ಕಣ್ಣುಗಳು.

ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಕರ್ತವ್ಯ ಜವಾಬ್ದಾರಿ ಹೊಂದಿರುತ್ತಾನೆ. ಸಮಾಜಸೇವೆಗೆ ಸದಾ ಸಿದ್ಧನಿರಬೇಕಾದ ವ್ಯಕ್ತಿ ಕರ್ತವ್ಯಪ್ರಜ್ಞೆ, ಸಮಯಪ್ರಜ್ಞೆ, ಸಮಾಜಸೇವಾ ಮನೋಭಾವನೆ ಹೊಂದಿರುವುದು ತೀರಾ ಅವಶ್ಯಕ. ಈ ಪ್ರಜ್ಞೆಯ ಅರಿವು ಹಾಗೂ ಸೇವಾಮನೋಭಾವನೆ ಮೂಡಿಸುವಿಕೆ ಶಿಕ್ಷಣದಿಂದ ಸಾಧ್ಯ. ಸಮಾಜ ಕಲ್ಪಿಸುವ ಶಿಕ್ಷಣದ ಮಾಧ್ಯಮಗಳಿಂದಲೇ ಈ ಕಾರ್ಯ ಸಾಗುತ್ತದೆ. ಸಮಾಜ ಮತ್ತು ಶಿಕ್ಷಣ ಒಂದರ ಪ್ರಗತಿಯನ್ನು ಮತ್ತೊಂದು ಅವಲಂಬಿಸಿದೆ. ಸಾಮಾಜಿಕ ಜೀವನದ ಅಮೂಲ್ಯ ಅನುಭವಗಳನ್ನು ಸಾಂಪ್ರದಾಯಿಕವಾಗಿ ಶಿಕ್ಷಣ ರಕ್ಷಿಸಿಕೊಂಡು ಬಂದಿದೆ. ಸಮಾಜದ ಸದಸ್ಯರೆಲ್ಲರೂ ಮೈತ್ರಿಯಿಂದ, ಸೌಹಾರ್ದತೆಯಿಂದ, ಭಾತೃಪ್ರೇಮದಿಂದ, ಸಾಮರಸ್ಯದಿಂದ ಒಬ್ಬರಿಗೊಬ್ಬರು ಹೊಂದಿಕೊಂಡು ಬದುಕುವುದನ್ನು ಶಿಕ್ಷಣ ಕಲಿಸಿದೆ. ಒಂದು ಜನಾಂಗವು ತಾನು ಗಳಿಸಿದ ಅನುಭವಗಳನ್ನು

ಭಾವನೆಗಳನ್ನು ಆಚಾರ-ವಿಚಾರ ಸಂಪ್ರದಾಯ ಹಾಗೂ ಜೀವನದ ಮೌಲ್ಯಗಳನ್ನು ಮುಂದಿನ ಜನಾಂಗಕ್ಕೆ ಬಳುವಳಿಯಂತೆ ನೀಡುವ ಕಾರ್ಯ ಶಿಕ್ಷಣದ್ದು.

ಶಿಕ್ಷಣದ ಉದ್ದೇಶ ಕೇವಲ ಜ್ಞಾನ ಸಂಪಾದನೆ ಆಗಿರದೇ ಮಕ್ಕಳಲ್ಲಿ ಶೀಲಸಂವರ್ಧನೆ. ವ್ಯಕ್ತಿತ್ವ ವಿಕಾಸ ಹಾಗೂ ಸಾಮಾಜಿಕ ಗುಣಗಳ ಬೆಳವಣಿಗೆ ಮಾಡುವುದಾಗಿದೆ. ಈ ಕಾರ್ಯದಲ್ಲಿ ಔಪಚಾರಿಕ ಶಿಕ್ಷಣ ಸಂಸ್ಥೆಗಳಾದ ಶಾಲೆಗಳ ಪಾತ್ರ ಮಹತ್ತರವಾದದ್ದು. ಶಾಲೆಯೇ ಒಂದು ಪುಟ್ಟ ಸಮಾಜ ಅದನ್ನು ವ್ಯಕ್ತಿ ದೃಷ್ಟಿಯಿಂದ ನೋಡುವುದಲ್ಲ. ಸಾಮಾಜಿಕ ಘಟಕವಾಗಿ ಪರಿಗಣಿಸಬೇಕು ಎಂಬ ಜಾನ್ ಡ್ಯೂಯಿಯವರ ಅಭಿಪ್ರಾಯ. ಸಮಾಜ ಹಾಗೂ ಶಿಕ್ಷಣ ಇವೆರಡರ ಸಂಬಂಧ ಎಂಥದ್ದು ಎಂಬುದನ್ನು ನಿರೂಪಿಸುತ್ತದೆ.

ಶಿಕ್ಷಣ ಸಂಸ್ಥೆಗಳ ಕಾರ್ಯ ಕೇವಲ ಸಾಂಪ್ರದಾಯಿಕ ವಿಷಯಗಳ ಬೋಧನೆಯಲ್ಲಿ ಶಿಕ್ಷಣ ಮತ್ತು ಜೀವನವನ್ನು ಒಂದುಗೂಡಿಸುವ ಕಾರ್ಯ ಶಿಕ್ಷಣದ್ದು, ಎಂಬ ಮಾತನ್ನು ರೂಸೋನಿಂದ ಡ್ಯೂಯಿಯವರೆಗೂ ಎಲ್ಲರೂ ಹೇಳುತ್ತಲೇ ಬಂದಿದ್ದಾರೆ. ಗಾಂಧೀಜಿಯವರ ಶಿಕ್ಷಣ ಪದ್ಧತಿಯಂತೂ ಶಿಕ್ಷಣ ಹಾಗೂ ಜೀವನ ಅವೆರಡರ ಸಂಬಂಧ ಕಲ್ಪಿಸುವುದೇ ಆಗಿತ್ತು. ಡ್ಯೂಯಿ ಸಹ ಸಹಕಾರಯುಕ್ತವಿರದ ಮತ್ತು ಪರಸ್ಪರ ಸಹಾಯಕವಾದ ಜೀವನ ನಡೆಸಲು ಮಕ್ಕಳಿಗೆ ತರಬೇತಿ ನೀಡುವುದೇ ಶಿಕ್ಷಣದ ಧ್ಯೇಯ ಎಂದಿರುವನು. ವೈಟ್ಹೆಡ ಕಾಡ ಶಿಕ್ಷಣವೆಂಬುದು ಒಂದೇ ವಿಷಯವಸ್ತು ಯಾವುದೆಂದರೆ, ಜೀವನ ಎಂದಿರುವನು. ಡಾ॥ ರಾಧಾಕೃಷ್ಣನ್ ಅವರು ಹೇಳುವಂತೆ ಮಕ್ಕಳು ಮಾನವರಾಗಿ, ನಾಗರಿಕರಾಗಿ ಇನ್ನೊಬ್ಬರೊಡನೆ ಮೈತ್ರಿ, ಗೌರವ, ಘನತೆಗಳಿಂದ ವರ್ತಿಸುವಂತೆ ಮಾಡುವುದೇ ಶಿಕ್ಷಣ, ಎಂಬ ಮಾತುಗಳು ಆದರ್ಶ ಸಮಾಜದ ನಿರ್ಮಾಣವೇ ಶಿಕ್ಷಣದ ಗುರಿ. ಎಂಬ ವಿಚಾರದ ಬಗ್ಗೆ ಒತ್ತಿ ಹೇಳಿವೆ. ಒಟ್ಟಾರೆ ಶಿಕ್ಷಣದ ಕಾರ್ಯ ಸಮಾಜದ ಪರಿವರ್ತನೆಯಾಗಿದೆ.

ಸಾಮಾಜಿಕ ಬದಲಾವಣೆಯ ಅಸ್ತ್ರವೇ ಶಿಕ್ಷಣ. ಇದೊಂದು ಸಾಮಾಜಿಕ ಕಾರ್ಯ ಸಾಮರ್ಥ್ಯತೆ ಮೂಡಿಸುವ ಸಾಧನ. ಸಮಾಜದ ಸುಖ-ಶಾಂತಿ, ಅಭ್ಯುದಯಗಳೆಲ್ಲವೂ ಶಿಕ್ಷಣವನ್ನವಲಂಬಿಸಿವೆ. ಸಮಾಜ ಹಾಗೂ ರಾಷ್ಟ್ರವನ್ನು ಪ್ರಗತಿಪಥದತ್ತ ಮುನ್ನಡೆಸಿಕೊಂಡು ಹೋಗುವಂತೆ ಮಾಡುವ ಪ್ರೇರಕ ಶಕ್ತಿಯೇ ಶಿಕ್ಷಣ. ವೈವಿಧ್ಯಮಯವಾಗಿರುವ ಸಮಾಜದ ರೀತಿ, ನೀತಿ, ಸಂಸ್ಕೃತಿ, ಧರ್ಮ, ಭಾಷೆ, ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ಐಕ್ಯತೆ ಮೂಡಿಸಿ ನೆಮ್ಮದಿಯ ಬದುಕಿಗೆ ಮಾರ್ಗ ಕಲ್ಪಿಸುವ ಸಾಧನವೇ ಏಕೈಕ ಮಾರ್ಗ ಶಿಕ್ಷಣ. ಔಪಚಾರಿಕ, ಅನೌಪಚಾರಿಕ ಹಾಗೂ ಸಮೂಹ ಸಂಪರ್ಕ ಮಾಧ್ಯಮಗಳು ಈ ಗುರಿಯತ್ತ ತಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ. ಶಿಕ್ಷಣ ಹೇಗೆ ಸಮಾಜದ ಅಭಿವೃದ್ಧಿಗೆ ಕಾರಣವೋ ಹಾಗೆ ಸಮಾಜವು ಸಹ ಶಿಕ್ಷಣದ ಮೂಲನೆಲೆಯಾಗಿದೆ. ತನ್ನ ರೀತಿ ನೀತಿ ನಡುವಳಿಕೆ ಧರ್ಮ-ಕಾಯ್ದೆ, ಕಟ್ಟಳೆ, ಸಂಸ್ಕೃತಿ ಮುಂತಾದವುಗಳ ಬಗ್ಗೆ ಸೂಕ್ಷ್ಮ ವಿಚಾರಗಳನ್ನು ದೊರಕಿಸುವ ಮೂಲಕ ಶಿಕ್ಷಣಕ್ಕೆ ಮಾರ್ಗದರ್ಶನ ಮಾಡಿದೆ. ಸಮಾಜದ ಅಧ್ಯಯನವಾದ ಸಮಾಜ ಶಾಸ್ತ್ರವು ಶಿಕ್ಷಣದ ಅರ್ಥ-ಗುರಿ ಪಠ್ಯಕ್ರಮದ ಮೇಲೆ ಪ್ರಭಾವ ಬೀರಿದೆ.

ಅಧ್ಯಾಯ ೩

ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

[illegible]

[illegible]

ಅಧ್ಯಾಯ –೩

ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

೩.೧ ಸಮುದಾಯದ ಸಹಭಾಗಿತ್ವ :

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಸರಕಾರವು ಸತತ ಪ್ರಯತ್ನಿಸುತ್ತಿದೆ. ವ್ಯಾಪಕವಾದ ಧ್ಯೇಯಬದ್ಧವಾದ ಕ್ಷೇತ್ರವು ಜನತೆಯ ಪಾಲ್ಗೊಳ್ಳುವಿಕೆಯಿಂದ ದೂರವಿದ್ದರೆ ಅಷ್ಟರ ಮಟ್ಟಿಗೆ ಅದೊಂದು ಕೊರತೆಯಾಗುತ್ತದೆ. ೬ ರಿಂದ ೧೪ ವಯಸ್ಸಿನ ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ನೀಡುವ ಬದ್ಧತೆಯೊಂದಿಗೆ ಶಿಕ್ಷಣ ಕಾರ್ಯತಂಡ ರಚಿಸಲಾಗಿದೆ.

ಈ ಕಾರ್ಯತಂಡದ ಶಿಫಾರಸ್ಸಿನಂತೆ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಎಲ್ಲಾ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹಿಂದಿದ್ದ ಶಾಲಾಭಿವೃದ್ಧಿ ಸಮಿತಿ ಹಾಗೂ ಗ್ರಾಮ ಶಿಕ್ಷಣ ಸಮಿತಿಗಳನ್ನು ರದ್ದು ಪಡಿಸಿದೆ. ಹಿಂದೆ ಶುದ್ಧ ಗ್ರಾಮ ಶಿಕ್ಷಣ ಸಮಿತಿಗಳು ಕಾನೂನಿನ ಅಧಿಕಾರವನ್ನು ಹೊಂದಿರದೆ ಇದ್ದುದರಿಂದ ಪ್ರಾಥಮಿಕ ಶಿಕ್ಷಣ ಪ್ರಸ್ತಾವನೆಯಲ್ಲಿ ಡಾ. ರಾಜಾರಾಮಣ್ಣನವರ ತಂಡವು ನೀಡಿದ್ದ ಮಧ್ಯಂತರ ವರದಿಯ ಶಿಫಾರಸ್ಸಿನಲ್ಲಿ ಪ್ರಾಥಮಿಕ ಶಿಕ್ಷಣ ಸಾರ್ವತ್ರಿಕರಣಕ್ಕಾಗಿ ಸರಕಾರ ಸಮುದಾಯವನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ವೇದಿಕೆಯನ್ನು ಸಿದ್ಧಪಡಿಸಿದೆ.

ಶಿಕ್ಷಣದ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಶಾಲಾ ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಶಿಕ್ಷಣ ಸಮಿತಿಗಳನ್ನು ರದ್ದುಪಡಿಸಿ, ಶಾಲಾ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಶಿಕ್ಷಣ ಸಮಿತಿಗಳನ್ನು ರದ್ದುಪಡಿಸಿ, ಶಾಲಾ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ, ಗ್ರಾಮ ಪಂಚಾಯತ ಮಟ್ಟದಲ್ಲಿ ಗ್ರಾಮ ಪಂಚಾಯತ ಶಿಕ್ಷಣ ಸಮಿತಿ, ತಾಲೂಕು ಮಟ್ಟದಲ್ಲಿ ತಾಲೂಕು ಪಂಚಾಯತ ಶಿಕ್ಷಣ ಸಮಿತಿ ಹಾಗೂ ನಗರ ಮಟ್ಟದಲ್ಲಿ ನಗರಸಭೆ ಕಾರ್ಪೋರೇಷನ್ ಸಮಿತಿಗಳ ರಚನೆಯನ್ನು ಉದ್ದೇಶಿಸಲಾಗಿದೆ. ಕಾಲಾವಕಾಶ ಅವಶ್ಯಕತೆ ಇರುವುದರಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ರಚನೆಗೆ ಕಾನೂನು ತಿದ್ದುಪಡಿಗೆ ಪ್ರಕ್ರಿಯೆ ಪ್ರಾರಂಭಿಸುವುದರೊಂದಿಗೆ ಸರಕಾರದ ಕಾರ್ಯಕಾರಿ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ ೧೯೮೩ ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದನ್ನು ಸರಕಾರ ಮನಗಂಡು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆ ಕುರಿತಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರಕಾರಿ ಆದೇಶ ಸಂಖ್ಯೆ ಇ.ಡಿ/೧/ಪಿ.ಬಿ.ಎಸ್. ೨೦೦೧, ಬೆಂಗಳೂರು ದಿನಾಂಕ : ೨೮-೪-೨೦೦೧ ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಪ್ರಕ್ರಿಯೆ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರಕಾರಿ ಪ್ರಾಥಮಿಕ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆಗೆ ಸರಕಾರದ ಅನುಮತಿಯನ್ನು ನೀಡಲಾಗಿದೆ.

ಈ ಸಮಿತಿಯು ಸಮುದಾಯವು ಶಿಕ್ಷಣದಲ್ಲಿ ಪಾಲ್ಗೊಳ್ಳಲು ಸಹಕಾರಿಯಾಗಿದೆ. ಇದರ ಜೊತೆಗೆ ಶಿಕ್ಷಣದ ಪ್ರಗತಿಗೆ ಸಮುದಾಯದಿಂದ ಸಲಹೆ ಸೂಚನೆಗಳು ದೊರೆಯುವಂತಾಗಿದೆ.

ಸದರಿ ಸಮಿತಿಯು ಶಾಸನ ಬದ್ಧವಾಗಿ ರಚಿತವಾಗಿದ್ದು, ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ನೀಡಿರುವ ಪ್ರಾಮುಖ್ಯತೆಯ ಸಂಕೇತವಾಗಿದೆ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಪ್ರಸ್ತುತ ಎಲ್ಲಾ ಶಾಲೆಗಳಲ್ಲೂ ಅಸ್ತಿತ್ವದಲ್ಲಿದ್ದು, ಕಾರ್ಯನಿರತವಾಗಿವೆ. ಈ ಸಮಿತಿಗಳು ಹಿಂದೆ ಇದ್ದ ಶಾಲಾಭಿವೃದ್ಧಿ ಸಮಿತಿಗಳಿಗಿಂತ ಹೆಚ್ಚು ಅಧಿಕಾರಯುತವಾಗಿದ್ದು, ಶಾಲೆಯ ಭೌತಿಕ ಮತ್ತು ಶೈಕ್ಷಣಿಕ ಪ್ರಗತಿಗಳೆರಡರಲ್ಲೂ ತಮ್ಮ ಕೊಡುಗೆಯನ್ನು ನೀಡುತ್ತಿವೆ.

೩.೨ ಎಸ್.ಡಿ.ಎಂ.ಸಿ.ಯ ಹಿನ್ನೆಲೆ :

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ ೧೯೭೮ ರ ೩ನೇ ಪ್ರಕರಣದ (೨)ನೇ ಉಪ ಪ್ರಕರಣದ (ಎ) ಖಂಡದಿಂದ ಅಗತ್ಯ ಪಡಿಸಲಾದಂತೆ ಅಧಿಸೂಚನೆ ಸಂಖ್ಯೆ ಇ.ಡಿ ೧೨೨ ಬಿ.ಎಸ್. ೨೦೦೪ ದಿನಾಂಕ : ೧೭-೩-೨೦೦೬ ರಲ್ಲಿ ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) ಉಪವಿಧಿ ೨೦೦೬ರ ಕರಡನ್ನು (ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV-A (ವಿಶೇಷ ಸಂಚಿಕೆ ದಿನಾಂಕ: ೧೭-೩-೨೦೦೬) ದಲ್ಲಿ ಪ್ರಕಟಿಸಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸುವುದರಿಂದ ಮತ್ತು ಸದರಿ ರಾಜ್ಯ ಪತ್ರವನ್ನು ೨೦೦೬ರ ಮಾರ್ಚ್ ೧೭ ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುರಿಂದ ಮತ್ತು ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರಕಾರವು ಪರಿಗಣಿಸಿರುವುದರಿಂದ ಈಗ ಕರ್ನಾಟಕ ಸರಕಾರವು ಕರ್ನಾಟಕ ಪಂಚಾಯತರಾಜ್ ಅಧಿನಿಯಮ ೧೯೯೩ ರ (೧೯೯೩ ರ ಕರ್ನಾಟಕ ಅಧಿನಿಯಮ ಸಂಖ್ಯೆ ೧೪) ೫೮ (೧-ಎ) (ವ್ವಿ) ೫೮(೨) ೬೦ ಮತ್ತು ಪ್ರಕರಣ ೬೧ (೨) (ಬಿ) ಪ್ರಕರಣಗಳೊಂದಿಗೆ ಓದಲಾದ ಸದರಿ ಅಧಿನಿಯಮದ ૩೧೬ನೇ ಪ್ರಕರಣದ (೧)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಬದಲಾಯಿಸಿ ಹಾಗೂ ಈ ವಿಷಯದಲ್ಲಿ ಈ ಮೊದಲಿನ

ಸರಕಾರಿ ಆದೇಶಗಳನ್ನು ರದ್ದುಪಡಿಸಿ ಕರ್ನಾಟಕ ಸರಕಾರವು ಈ ಮೂಲಕ ಈ ಕೆಳಗಿನಂತೆ ಉಪ ವಿಧಿಗಳನ್ನು ರಚಿಸಿರುತ್ತದೆ.

(ಎ) ಈ ಉಪವಿಧಿಗಳನ್ನು ಕರ್ನಾಟಕದ ಗ್ರಾಮ ಪಂಚಾಯತಿಗಳು **ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (ಮಾದರಿ) ಉಪ ವಿಧಿಗಳು** ೨೦೦೩ ಎಂದು ಕರೆಯತಕ್ಕದ್ದು.

ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಸವಾಲುಗಳು ನಮ್ಮ ಮುಂದಿವೆ. ರಾಜ್ಯ ಸರಕಾರವು ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಹಲವಾರು ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

ಈ ಸಮುದಾಯನ್ನು ಶಿಕ್ಷಣದ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಳ್ಳುವ ಮೊದಲ ಪ್ರಯತ್ನವಾಗಿ ದಿನಾಂಕ : ೨೭-೦೨-೧೯೮೮ ರಲ್ಲಿ ಸರಕಾರವು ಆದೇಶವೊಂದನ್ನು ಹೊರಡಿಸಿತು. ಈ ಆದೇಶದ ಅನ್ವಯ ರಾಜ್ಯದಲ್ಲಿ ಅಂದು ಜಾರಿಯಲ್ಲಿದ್ದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳನ್ನು ಮತ್ತು ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಈ ಹಿಂದೆ ಅಸ್ತಿತ್ವದಲ್ಲಿದ್ದ ಶಾಲಾಭಿವೃದ್ಧಿ ಸಮಿತಿಗಳನ್ನು ಶೈಕ್ಷಣಿಕ ಸಮಿತಿಗಳೆಂದು ಪುನರ್ ನಾಮಕರಣ ಮಾಡುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಮಿತಿಯಲ್ಲಿ ಕೇವಲ ಜನಪ್ರತಿನಿಧಿಗಳು ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಇದಾದ ನಂತರ ಜುಲೈ ೧೯೯೫ ರಲ್ಲಿ ಪ್ರಾಥಮಿಕ ಶಿಕ್ಷಣದ ನಿರ್ದೇಶಕರು ರಾಜ್ಯದ ಎಲ್ಲಾ ಶಾಲೆಗಳಲ್ಲಿ ೯ ರಿಂದ ೧೧ ಜನರನ್ನೊಳಗೊಂಡ ಶಾಲಾಭಿವೃದ್ಧಿ ಸಮಿತಿ ರಚಿಸುವಂತೆ ಸೂಚನೆ ನೀಡಿದ್ದರು. ಈ ಪತ್ರದ ಅನ್ವಯ ಸಮಿತಿಯಲ್ಲಿ ಮೊದಲ ಬಾರಿಗೆ ಒಬ್ಬ ಪೋಷಕ ಪ್ರತಿನಿಧಿಗೆ ಅವಕಾಶ ಕಲ್ಪಿಸಲಾಗಿತ್ತು. ಅಗಸ್ಟ್ ೧೯೯೫ ರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸುವಂತೆ ಸರಕಾರ ಆದೇಶಿಸಿತು. ಈ ಸಮಿತಿಯಲ್ಲಿ ಕನಿಷ್ಟ ೭ ರಿಂದ ಗರಿಷ್ಠ ೧೫ ಸದಸ್ಯರಿದ್ದು, ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಗಿತ್ತು. ಒಟ್ಟಾರೆ ಸರ್ವ-ಶಿಕ್ಷಣ ಅಭಿಯಾನದ ಪೂರ್ವದಲ್ಲಿದ್ದ ಶಾಲಾಭಿವೃದ್ಧಿಯಲ್ಲಿ (ಶಿಕ್ಷಣ ಸಮಿತಿ) ಗ್ರಾಮ ಶಿಕ್ಷಣ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಹಲವು ಪ್ರಯತ್ನಗಳಾಗಿದ್ದು, ಇವುಗಳಲ್ಲಿ ಜನಪ್ರತಿನಿಧಿ ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಈ ಮಧ್ಯ ೧೯೯೯ ರಲ್ಲಿ ರಚನೆಯಾದ ಶಿಕ್ಷಣ ಕಾರ್ಯ ವರದಿಯ ಶಿಫಾರಸ್ಸಿನಂತೆ ರಾಜ್ಯ ಸರಕಾರವು ೨೦೦೧ ರಲ್ಲಿ ರಾಜ್ಯದ ಎಲ್ಲಾ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾಭಿವೃದ್ಧಿಯಲ್ಲಿ ಸಮಿತಿಗಳ ಬದಲಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶ ನೀಡಿತು. ಈ ಆದೇಶದ ಅನ್ವಯ ಪ್ರತಿಯೊಂದು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಂದಿರು ಆ ಶಾಲೆಯ ತಂದೆ ತಾಯಿ ಪರಿಷತ್ತಿನ ಸದಸ್ಯರಾಗಿರುತ್ತಾರೆ. ತಂದೆ ತಾಯಿ ಪರಿಷತ್ತು ೯ ಜನ ಪ್ರತಿನಿಧಿಗಳನ್ನು ಆಯ್ಕೆ

ಮಾಡುತ್ತದೆ. ಈ ೯ ಜನರು ಸೇರಿ ಅವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಉಳಿದಂತೆ ಈ ಸಮಿತಿಯಲ್ಲಿ ಪದನಿಮಿತ್ತ ಮತ್ತು ನಾಮ ನಿರ್ದೇಶನ ಸದಸ್ಯರು ಇರುತ್ತಾರೆ. ಈ ಸರಕಾರಿ ಆದೇಶವು ರಾಜ್ಯಾದ್ಯಂತ ಹೆಚ್ಚು ಉತ್ಸಾಹ ಮತ್ತು ಪರಿಣಾಮಕಾರಿಯಾಗಿ ಜಾರಿಗೊಂಡ ಕಾರಣ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ.ಗಳು ರಚನೆಗೊಂಡವು.

೨೦೦೧ ಅಗಸ್ಟ್ ಅಂತ್ಯಕ್ಕೆ ಶೇಕಡ ೭೦ ರಿಂದ ೮೦ ಶಾಲೆಗಳಲ್ಲಿ ಎಸ್.ಡಿ.ಎಂ.ಸಿಗಳು ರಚನೆಗೊಂಡು ಕೆಲಸ ನಿರ್ವಹಿಸಲು ಪ್ರಾರಂಭಿಸಿದವು. ಎಸ್.ಡಿ.ಎಂ.ಸಿ.ಗಳು ೩ ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅವುಗಳ ಕಾರ್ಯಕ್ಷಮತೆಯನ್ನು ಇಲಾಖೆಯು ಮೌಲ್ಯಮಾಪನ ಮಾಡಿಸಿತು. ಎಸ್.ಡಿ.ಎಂ.ಸಿ.ಯ ಕಾರ್ಯಕ್ಷಮತೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದ ತಂಡವು ಕೆಳಗಿನ ಪ್ರಮುಖ ಶಿಫಾರಸ್ಸುಗಳನ್ನು ಮಾಡಿತು.

೩.೩ ಎಸ್.ಡಿ.ಎಂ.ಸಿ.ಯ ರಚನೆ :

ಸರಕಾರಿ ಆದೇಶ ಸಂಖ್ಯೆ ಇ.ಡಿ /೧/ ಪಿ.ಬಿ.ಎಸ್. ೨೦೦೧ ಬೆಂಗಳೂರು ದಿನಾಂಕ : ೨೮-೪-೨೦೦೧ ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರಕಾರಿ ಪ್ರಾಥಮಿಕ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಪ್ರೌಢಶಾಲೆಗಳಲ್ಲಿ ಹಾಗೂ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆಗೆ ಸರಕಾರದ ಅನುಮತಿಯನ್ನು ನೀಡಲಾಗಿದೆ.

ನಾಗರಿಕ ಸೌಕರ್ಯ ಸಮಿತಿಯು ಪಂಚಾಯತಿ ಆದೇಶದ ವ್ಯಾಪ್ತಿಯೊಳಗೆ ಪ್ರತಿಯೊಂದು ಪ್ರಾಥಮಿಕ ಶಾಲೆಗಾಗಿ ಪ್ರತಿ ಪಂಚಾಯತಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸಲು ಸದರಿ ಶಾಲೆಯ ಮುಖ್ಯ ಶಿಕ್ಷಕರಿಗೆ ಈ ಸಮಿತಿಯು ರಚನೆಯ ಕಾರ್ಯವನ್ನು ಪ್ರಯೋಗಿಸತಕ್ಕದ್ದು.

ಈ ಸಮಿತಿಯಲ್ಲಿ ಒಟ್ಟು ೧೭ ಜನ ಸದಸ್ಯರಿರುತ್ತಾರೆ. ಇವರಲ್ಲಿ ೯ ಜನ ಪ್ರತಿನಿಧಿಗಳನ್ನು ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ ತಾಯಿಗಳಾಗಿರುತ್ತಾರೆ. ಇವರಲ್ಲಿ ಕನಿಷ್ಟ ೩ ಜನ ಮಹಿಳೆಯರಿರುತ್ತಾರೆ. ಎಸ್. ಸಿ ಮತ್ತು ಎಸ್.ಟಿ ಹಾಗೂ ಅಲ್ಪಸಂಖ್ಯಾತ ಸಮುದಾಯದಿಂದ ಒಬ್ಬೊಬ್ಬ ಪ್ರತಿನಿಧಿಗಳು ಇರುತ್ತಾರೆ. ೯ ಜನರಲ್ಲಿ ಒಬ್ಬರು ಅಧ್ಯಕ್ಷರು ಮತ್ತು ಒಬ್ಬರು ಉಪಾಧ್ಯಕ್ಷರಾಗಿರುತ್ತಾರೆ. ಶಾಲೆಯ ಪ್ರಧಾನ ಗುರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ.

ಇದಲ್ಲದೆ ೩ ಜನ ಪದನಿಮಿತ್ಯ ೩ ಜನ, ನಾಮ ನಿರ್ದೇಶನ ಮತ್ತು ೨ ಜನ ಮಕ್ಕಳ ಪ್ರತಿನಿಧಿಗಳಿರುತ್ತಾರೆ. ಈ ಪದನಿಮಿತ್ಯ ಸದಸ್ಯರಲ್ಲಿ ಶಾಲೆಯ ಮುಖ್ಯ ಶಿಕ್ಷಕರು ಆರೋಗ್ಯ ಕಾರ್ಯಕರ್ತರು ಅಂಗನವಾಡಿ ಶಿಕ್ಷಕರಿರುತ್ತಾರೆ.

ನಾಮ ನಿರ್ದೇಶಿತ ಸದಸ್ಯರಲ್ಲಿ ಯುವಕ/ಯುವತಿ ಮಂಡಳ ೫ ಎಚ್.ಜಿ.ದಿಂದ ಒಬ್ಬ ಪ್ರತಿನಿಧಿ. ಶಿಕ್ಷಣ ತಜ್ಞರು (ಪದವಿ ಮುಗಿಸಿದ ಯುವಕ/ಯುವತಿ ಅಥವಾ ನಿವೃತ್ತಿ ಹೊಂದಿದ ಶಿಕ್ಷಕ) ರೂ. ೧೦,೦೦೦/- ಮೌಲ್ಯಕ್ಕಿಂತ ಹೆಚ್ಚಿಗೆ ದೇಣಿಗೆ ಕೊಟ್ಟ ಒಬ್ಬದಾನಿ, ವಿದ್ಯಾರ್ಥಿ ಪ್ರತಿನಿಧಿಗಳಲ್ಲಿ ಉನ್ನತ ತರಗತಿಯ ಇಬ್ಬರು ವಿದ್ಯಾರ್ಥಿಗಳಿರುತ್ತಾರೆ. ಈ ರೀತಿಯಾಗಿ ಒಟ್ಟು ೧೭ ಜನ ಪ್ರತಿನಿಧಿಗಳಿಂದ ರಚನೆಯಾಗಿರುತ್ತದೆ.

ಎಸ್.ಡಿ.ಎಂ.ಸಿಯ ಅಧಿಕಾರ ಮತ್ತು ಕಾರ್ಯಗಳು :

- ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಯಲ್ಲಿ ಸದಸ್ಯ ಕಾರ್ಯದರ್ಶಿಗೆ ಮಾರ್ಗದರ್ಶನ ನೀಡುವುದು ಮತ್ತು ಪ್ರತಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಕನಿಷ್ಠ ಒಂದು ತಿಂಗಳು ಮೊದಲು ಅದನ್ನು ಅನುಮೋದಿಸುವುದು.
- ಶಿಕ್ಷಕರು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕ್ರಮಬದ್ಧ ಹಾಗೂ ಸಕಾಲಿಕ ಹಾಜರಾತಿಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಶೀಲಿಸುವುದು.
- ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುವಂತೆ ಶಾಲೆಯನ್ನು ಸಿದ್ಧಪಡಿಸುವುದು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಯಾವುದೇ ಸದಸ್ಯರು ಶಾಲೆಯಲ್ಲಿ ನಿರ್ವಹಿಸಿರುವ ಎಲ್ಲಾ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿರುತ್ತಾರೆ.
- ಧರ್ಮ, ಜನಾಂಗ, ಲಿಂಗ, ಭಾಷೆ, ಹುಟ್ಟಿದ ಸ್ಥಳ –ಇವು ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಗ್ರಾಮದಲ್ಲಿರುವ ಶಾಲೆಗೆ ಹೋಗದೆ ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವುದನ್ನು ಖಚಿತಪಡಿಸುವುದು.
- ಇದಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಹೆಣ್ಣು ಮಕ್ಕಳು ಅಂಗವಿಕಲ ಮಕ್ಕಳು ಬಾಲ ಕಾರ್ಮಿಕರು ಹಾಗೂ ಇತರರಿಗಾಗಿ ದಾಖಲಾತಿ ಆಂದೋಲನ ಸೇತುಬಂಧ ಕಾರ್ಯಕ್ರಮಗಳು ಮತ್ತು ವಿಶೇಷ ಪ್ರಚಾರಾಂದೋಲನವನ್ನು ನಡೆಸಬಹುದು.
- ಗ್ರಾಮದಲ್ಲಿರುವ ದೈಹಿಕ ವಿಕಲತೆ ಅಥವಾ ಮಾನಸಿಕವಾಗಿ ಅಸ್ವಸ್ಥಗೊಂಡ ಮಕ್ಕಳ ವಿರುದ್ಧ ತಾರತಮ್ಯ ನಡೆಸಿರುವುದನ್ನು ಖಚಿತಪಡಿಸುವುದು. ಹಾಗೂ ಅವರು ಶಾಲೆಗೆ ಹಾಜರಾಗಲು ಸಮರ್ಥರಾಗುವಂತೆ ಶ್ರವಣ ಸಾಧನಗಳು, ಬ್ರೈಲ್‌ಲಿಪಿ ಮುಂತಾದ ವಿಶೇಷ ಸೌಲಭ್ಯಗಳನ್ನು ಒದಗಿಸುವುದು.

- ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವುದು. ಮತ್ತು ಶಾಲೆಯಲ್ಲಿರುವ ಎಲ್ಲ ಮಕ್ಕಳ ಹಾಜರಾತಿಯ ಬಗ್ಗೆ ಹಾಗೂ ಅವರನ್ನು ಶಾಲೆಯಲ್ಲಿಯೇ ಉಳಿಸಿಕೊಳ್ಳುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಉಚಿತ ಪಠ್ಯ ಪುಸ್ತಕಗಳು ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ ಮತ್ತು ವಿದ್ಯಾರ್ಥಿ ವೇತನಗಳು ಮುಂತಾದ ಪ್ರೋತ್ಸಾಹಕಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅವುಗಳ ವಿತರಣೆಯ ಮೇಲ್ವಿಚಾರಣೆ ಹಾಗೂ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.
- ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೊಮ್ಮೆ ತಂದೆ ತಾಯಿಯರ ಪರಿಷತ್ತಿನ ಸಭೆಗಳನ್ನು ಕರೆಯುವುದು. ಶಾಲೆಗೆ ಮಕ್ಕಳನ್ನು ಕಳಿಸಲು ವಿಫಲರಾಗುವ ತಂದೆ –ತಾಯಿಗಳಿಗಾಗಿ ಸಭೆಗಳನ್ನು ನಿಯತಕಾಲಿಕವಾಗಿ ನಡೆಸುವುದು.
- ಶಾಲೆಯಲ್ಲಿ ಸಂಪೂರ್ಣ ನೈರ್ಮಲ್ಯ ಕೊಠಡಿಗಳ ಸುಸ್ಥಿತಿ ಮತ್ತು ನಿರ್ವಹಣೆಯಿರುವಂತೆ ನೋಡಿಕೊಳ್ಳುವುದು.
- ಆಟದ ಮೈದಾನ/ಆವರಣ, ಗೋಡೆಗಳು, ಕೊಠಡಿಗಳು, ಶೌಚಾಲಯ, ಪೀಠೋಪಕರಣ ಕುಡಿಯುವ ನೀರಿನ ಸೌಲಭ್ಯ ಮುಂತಾದ ಮೂಲಸೌಕರ್ಯಗಳು ಹಾಗೂ ಶಾಲೆಗೆ ಅವಶ್ಯವಿರುವ ಇತರ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು.
- ಇದಕ್ಕಾಗಿ ಶಾಲಾ ಅಭಿವೃದ್ಧಿಯಲ್ಲಿ ಮತ್ತು ಮೇಲುಸ್ತುವಾರಿ ಸಮಿತಿಯು ಯಾವದೇ ಕಟ್ಟಡಗಳ ಅಥವಾ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ಮಾರ್ಪಾಡು, ಸುಧಾರಣೆ ಅಥವಾ ಅಭಿವೃದ್ಧಿ ಯನ್ನು ಕೈಗೊಳ್ಳಬಹುದು.
- ಎಲ್ಲ ಪ್ರಕಾರ್ಯಗಳ ಮುಂದುವರಿಕೆಗೆ ಅವಶ್ಯಕವೆನಿಸುವ ಅಥವಾ ಅನುಕೂಲವೆನಿಸುವ ಸ್ಥಿರ ಅಥವಾ ಚರ ಸ್ವತ್ತು ಅಥವಾ ವಿಶೇಷ ಸೌಲಭ್ಯಗಳನ್ನು ಒದಗಿಸುವುದು, ಖರೀದಿಸುವುದು. ಅಥವಾ ಸ್ವಂತವಾಗಿ ಹೊಂದುವುದು ಅಥವಾ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಗುತ್ತಿಗೆಗೆ ಅಥವಾ ಬಾಡಿಗೆಗೆ ಪಡೆಯುವುದು.
- ಸ್ವಂತ ನಿಧಿಯಿಂದ ಅಥವಾ ಶಾಲಾ ನಿಧಿಗಳಿಂದ ವೆಚ್ಚವನ್ನು ಭರಿಸಿ ನಿಗದಿಪಡಿಸಿದ ಸಂಭಾವನೆಯನ್ನು ಸಂದಾಯ ಮಾಡುವ ಮೂಲಕ ಅವಶ್ಯವಿರುವೆಡೆ, ಸಂದರ್ಭಾನುಸಾರ ಶಿಕ್ಷಕರಾಗಿ ಅಥವಾ ಬೋಧಕರಾಗಿ ಸ್ಥಳೀಯ ವ್ಯಕ್ತಿಗಳ ಸೇವೆಗಳನ್ನು ಪಡೆಯುವುದು ಪರಂತು ತಾತ್ಕಾಲಿಕ ಹುದ್ದೆಯನ್ನು ಈ ರೀತಿಯಲ್ಲಿ ಖಾಯಂ ಆಗಿ ಭರ್ತಿ ಮಾಡಬಾರದು.
- ವರ್ಷದಲ್ಲಿ ಕನಿಷ್ಠ ಪಕ್ಷ ೨೨೦ ಬೋಧನಾ ದಿನಗಳನ್ನು ಖಚಿಪಡಿಸುವುದು.

- ಶಿಕ್ಷಕರ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಸರ್ವ ಶಿಕ್ಷಣ ಅಭಿಯಾನ ಅಥವಾ ಕಾಲ ಕಾಲಕ್ಕೆ ಅನ್ವಯವಾಗುವಂತೆ ಕೇಂದ್ರ ಅಥವಾ ರಾಜ್ಯ ಸರಕಾರದ ಯಾವುದೇ ಇತರ ಕಾರ್ಯಕ್ರಮದ ಅಡಿಯಲ್ಲಿ ಗೊತ್ತುಪಡಿಸಿದ ಕನಿಷ್ಠ ಅರ್ಹತಾ ಮಾನ ದಂಡಗಳನ್ನು ಪಾಲಿಸುವಂತೆ ಮಾಡುವುದು.
- ಶಿಕ್ಷಕರ ಮತ್ತು ಮುಖ್ಯ ಶಿಕ್ಷಕರ ಬೇಡಿಕೆಗಳನ್ನು ಆಧರಿಸಿ ಶಿಕ್ಷಕರಿಗೆ ಅವಶ್ಯಕತೆಯಾಧಾರಿತ ತರಬೇತಿಗಳನ್ನು ಒದಗಿಸಲು ಅನುಕೂಲ ಕಲ್ಪಿಸುವುದು.
- ವಿದ್ಯಾರ್ಥಿಗಳ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಎಸ್.ಸಿ. ಅಥವಾ ಆರ್.ಟಿ. ಮತ್ತು ರಾಜ್ಯ ಸರಕಾರವು ಗೊತ್ತುಪಡಿಸಿದ ಮಾನದಂಡಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು.
- ಶಾಲೆಯಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಿಯತವಾಗಿ ಅವಲೋಕಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು. ಮತ್ತು ಮಕ್ಕಳಿಗಾಗಿ ಕ್ರಮಬದ್ಧವಾಗಿ ಆರೋಗ್ಯ ಶಿಬಿರಗಳನ್ನು ನಡೆಸಲು ನೆರವು ನೀಡುವುದು.
- ಶಾಲೆಯ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಸ್ವತ್ತುಗಳು ವಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆ ನಡೆಸುವುದು.
- ಶಾಲಾ ಅಭಿವೃದ್ಧಿಗಾಗಿ ಹಣ ಮತ್ತು ನಿಧಿಗಳನ್ನು ಪಡೆಯಲು ಮನವಿ ಮತ್ತು ಅರ್ಜಿಗಳನ್ನು ನೀಡುವುದು ಹಾಗೂ ನಗದು ರೂಪದಲ್ಲಿ ಯಾವುದೇ ದಾನಗಳು ಅಥವಾ ದೇಣಿಗೆಗಳು ಭದ್ರತೆಗಳು ಅಥವಾ ಚರ ಅಥವಾ ಸ್ಥಿರ ರೂಪದಲ್ಲಿ ಯಾವುದೇ ಸ್ವತ್ತನ್ನು ಸ್ವೀಕರಿಸುವುದು ಸಂಗ್ರಹಿಸುವುದು. ಮತ್ತು ಅಂಗೀಕರಿಸುವುದು ಮತ್ತು ಅವಶ್ಯ ಬೇಡಿಕೆಗಳ ಈಡೇರಿಕೆಗಾಗಿ ಅದನ್ನು ಖರ್ಚು ಮಾಡುವುದು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯವನ್ನು ಅವಲೋಕಿಸುವುದು ಮತ್ತು ಈ ಬಗ್ಗೆ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆ ತಂದೆ ತಾಯಿಯರ ಪರಿಷತ್ತು ಮತ್ತು ನಾಗರಿಕ ಸೌಕರ್ಯ ಸಮಿತಿಗೆ ವರದಿ ಮಾಡುವುದು.
- ಶಾಲಾ ಕಾರ್ಯ ಚಟುವಟಿಕೆಗಳಲ್ಲಿ ಎಲ್ಲ ಪಾಲಕರು ಒಳಗೊಳ್ಳುವಂತೆ ಮಾಡಲು ಮತ್ತು ಅವರನ್ನು ತಮ್ಮ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಲು ನಿಯಮಿತವಾಗಿ ತಂದೆ ತಾಯಿಯರ ದಿನವನ್ನು ಆಚರಿಸುವುದು.
- ನಾಗರಿಕ ಸೌಕರ್ಯ ಸಮಿತಿ (ಸಿ.ಎ.ಸಿ.) ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಶೈಕ್ಷಣಿಕ ಸಮನ್ವಯವಾದವರಿಗೆ ಶಾಲಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳನ್ನು ಸೂಚಿಸುವುದು.

- ವರ್ಷದಲ್ಲಿ ೮ ಕ್ಕಿಂತ ಹೆಚ್ಚಿಲ್ಲದಂತೆ ಸ್ಥಳೀಯ ರಜಾ ದಿನಗಳನ್ನು ನಿರ್ಣಯಿಸುವುದು.
- **ಮಕ್ಕಳ ಸಹಾಯವಾಣಿಯ** ಉಪಯೋಗ ಮತ್ತು ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ಪ್ರತಿಯೊಂದು ಶಾಲೆಯಲ್ಲಿ ಮುಕ್ತ ಸಹಾಯವಾಣಿ ಸಂಖ್ಯೆ **೧೦೯೮** ನ್ನು ಪ್ರದರ್ಶಿಸುವಂತೆ ಮತ್ತು ಪ್ರಚಾರ ಮಾಡುವಂತೆ ನೋಡಿಕೊಳ್ಳುವುದು.
- ಒತ್ತುವರಿ ಮತ್ತು ಯಾವುದೇ ಅಡಚಣೆಯಾಗದಂತೆ ಶಾಲಾ ಆವರಣವನ್ನು ರಕ್ಷಿಸುವುದು.
- ಈ ಉಪವಿಧಿಗಳ ೫ನೇ ಅಧ್ಯಾಯಕ್ಕೆ ಅನುಸಾರವಾಗಿ ವಿದ್ಯಾರ್ಥಿಗಳು, ತಂದೆ ತಾಯಿಯರ ಶಿಕ್ಷಕರ, ಶಾಲೆಯ ಬೋಧಕೇತರ ಸಿಬ್ಬಂದಿ ವರ್ಗದವರ ಕುಂದುಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.
- ಪ್ರಾಸಂಗಿಕವಾದಂತಹ ಇತರ ಎಲ್ಲ ಕಾನೂನು ಬದ್ಧ ಕಾರ್ಯಗಳನ್ನು ಮಾಡುವುದು.
- ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗಿನ ಶಾಲೆಗಳ ವಾರ್ಷಿಕ ಕಾಮಗಾರಿ ಯೋಜನೆಗಳ ಅನುಷ್ಠಾನವನ್ನು ನಿಯಮಿತವಾಗಿ ಪರಿಶೀಲಿಸಿ ಅಗತ್ಯ ನೆರವು ನೀಡುವುದು.
- ಮಾಹಿತಿ ವಿನಿಮಯ ಮತ್ತು ಸಮನ್ವಯತೆಗಾಗಿ ಶೈಕ್ಷಣಿಕ ವರ್ಷದಲ್ಲಿ ಪ್ರತಿ ೩ ತಿಂಗಳಿಗೊಮ್ಮೆ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆಗಳ ಕರ್ನಾಟಕ ಎಸ್.ಡಿ.ಎಮ್.ಸಿ. ಪದಾಧಿಕಾರಿಗಳ ಜಂಟಿ ಸಭೆಯನ್ನು ನಡೆಸುವುದು.
- ಶಾಲಾ ಅಭಿವೃದ್ಧಿಗೆ ಅಗತ್ಯವಿರುವ ನಿಧಿ ಒದಗಿಸಲು ಕ್ರಮ ಕೈಗೊಳ್ಳುವುದು.
- ಎಸ್.ಡಿ.ಎಮ್.ಸಿ. ಸದಸ್ಯರು, ಶಿಕ್ಷಕರು ಮತ್ತು ಸಿಬ್ಬಂದಿಯ ವಿರುದ್ಧ ದೂರುಗಳು ಬಂದಾಗ ವಿಚಾರಣಾ ಸಮಿತಿಯನ್ನು ರಚಿಸಿ, ಸಮಿತಿ ನೀಡುವ ಶಿಫಾರಸ್ಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳುವದು.
- ಈ ಸಭೆಯಲ್ಲಿ ಶಾಲಾ ಅಭಿವೃದ್ಧಿಗಾಗಿ ಸ್ವೀಕರಿಸಿದ ಎಲ್ಲಾ ನಿಧಿಗಳು ಖರ್ಚು ವೆಚ್ಚಗಳನ್ನು ಮತ್ತು ಬ್ಯಾಂಕ ಖಾತೆಯನ್ನು ಪರಿಶೀಲಿಸುವುದು.
- ಶೈಕ್ಷಣಿಕ ವರ್ಷ ಆರಂಭವಾಗುವ ಒಂದು ತಿಂಗಳ ಮೊದಲೇ ಶಾಲೆಯ ಮುಖ್ಯ ಶಿಕ್ಷಕರನ್ನು ಹಾಗೂ ಎಸ್.ಡಿ.ಎಂ.ಸಿ. ಸದಸ್ಯರನ್ನು ಒಳಗೊಂಡು ಶಾಲಾ ಕ್ರಿಯಾ ಯೋಜನೆಯನ್ನು ರೂಪಿಸಿ, ಅನುಮೋದಿಸುವುದು.
- ಈ ವಾರ್ಷಿಕ ಯೋಜನೆಯು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾದ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಂತೆ ಇರಬೇಕು.
- ಶಾಲಾ ವ್ಯಾಪ್ತಿಯಲ್ಲಿ ಬರುವ ೩-೧೪ ವಯಸ್ಸಿನ ಎಲ್ಲಾ ಮಕ್ಕಳ ಶಿಬಿರದ ಮಾಹಿತಿಯನ್ನು ಸಂಗ್ರಹಿಸುವುದು. ೩-೬ ವಯಸ್ಸಿನ ಎಲ್ಲಾ ಮಕ್ಕಳನ್ನು ಅಂಗನವಾಡಿ ಕೇಂದ್ರಗಳಲ್ಲಿಯೂ

೬-೧೪ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಯಲ್ಲಿದ್ದು ಕಲಿಕೆಯಲ್ಲಿ ತೊಡಗುವಂತೆ ನೋಡಿಕೊಳ್ಳುವುದು.

- ಶಾಲೆಯಿಂದ ಹೊರಗುಳಿದಿರುವ ಎಲ್ಲಾ ಮಕ್ಕಳನ್ನು ಶಾಲೆಯ ಮುಖ್ಯ ವಾಹಿನಿಗೆ ತರುವುದು.
- ಸರಕಾರದಿಂದ ಉಚಿತವಾಗಿ ನೀಡುವ ಪಠ್ಯಪುಸ್ತಕ ಸಮವಸ್ತ್ರ ,ಶಾಲಾಬ್ಯಾಗ, ನೋಟಪುಸ್ತಕ, ಸೈಕಲ್, ವಿದ್ಯಾರ್ಥಿವೇತನ, ಬಿಸಿಯೂಟ ಇತ್ಯಾದಿಗಳು ಶಾಲೆಯ ಎಲ್ಲಾ ಮಕ್ಕಳಿಗೆ ಸಕಾಲಕ್ಕೆ ಸಿಗುವಂತೆ ಮಾಡುವುದು.
- ಮಕ್ಕಳ ಕಲಿಕೆಯ ನಿರಂತರ ಮೌಲ್ಯಮಾಪನಗಳನ್ನು ಆಧರಿಸಿ ಕಲಿಕೆಯಲ್ಲಿ ಮತ್ತಷ್ಟು ಅಭಿವೃದ್ಧಿ ಪಡಿಸಲು ಅವಶ್ಯಕವಾದಂತಹ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
- ಶಾಲಾ ಆಸ್ತಿಯನ್ನು ನಿರ್ವಹಿಸುವುದು ಮತ್ತು ಸಂರಕ್ಷಿಸುವುದು.
- ಶಾಲೆಗಳಲ್ಲಿ ಜಾತಿ, ಧರ್ಮ, ಲಿಂಗ, ತಾರತಮ್ಯ ವಾಗದಂತೆ ನೋಡಿಕೊಳ್ಳುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಗೆ ಹಾಜರಾಗಲು ಅನುಕೂಲವಾಗುವಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದು.
- ಮಕ್ಕಳು ತಮ್ಮ ಸಮಸ್ಯೆಯನ್ನು ತಿಳಿಸಲು ಅನುಕೂಲವಾಗುವಂತೆ ಮಕ್ಕಳ ಸಹಾಯವಾಣಿ ಸಂಖ್ಯೆ ೧೦೯೮ ನ್ನು ಪ್ರದರ್ಶಿಸುವುದು ಮತ್ತು ಪ್ರಚಾರ ಮಾಡುವುದು.

೩.೪ ಎಸ್.ಡಿ.ಎಂ.ಸಿ.ಯ ಪ್ರಮುಖ ಅಧಿಕಾರಗಳು :

- ಪ್ರತಿ ತಿಂಗಳು ಮಾಸಿಕ ಸಭೆಯನ್ನು ನಡೆಸುವುದು.
- ಮುಖ್ಯ ಶಿಕ್ಷಕರಿಗೆ ಸಾಂದರ್ಭಿಕ ರಜೆ ನೀಡುವುದು.
- ಶಾಲೆಯಲ್ಲಿ ಜಂಟಿ ಖಾತೆಯಲ್ಲಿರುವ ಹಣಕಾಸನ್ನು ಜವಾಬ್ದಾರಿಯುತವಾಗಿ ಗೊತ್ತುಪಡಿಸಿದ ಕಾರ್ಯಗಳಿಗೆ ಖರ್ಚು ಮಾಡುವುದು ಮತ್ತು ಅದಕ್ಕೆ ಸರಿಯಾದ ದಾಖಲೆಗಳನ್ನು ನಿರ್ವಹಿಸುವುದು.
- ಎಲ್ಲಾ ವಿದ್ಯಾರ್ಥಿಗಳು ಬೋಧಕೇತರ ಸಿಬ್ಬಂದಿ, ಶಿಕ್ಷಕರು ಮತ್ತು ಗ್ರಾಮಸ್ಥರು ಮತ್ತು ದೂರುಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ದೂರು ಪೆಟ್ಟಿಗೆಯನ್ನು ಇಡುವುದು. ಇದನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ವಾರಕ್ಕೊಮ್ಮೆ ತೆಗೆದು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
- ಪ್ರತಿ ಮೂರು ತಿಂಗಳಿಗೊಮ್ಮೆ ತಂದೆ ತಾಯಂದಿರ ಷರತ್ತಿನ ಸಭೆಗಳನ್ನು ಆಯೋಜಿಸಿ ಶಾಲಾ ಪ್ರಗತಿ, ಮಕ್ಕಳ ದಾಖಲಾತಿ, ಹಾಜರಾತಿ, ಉಳಿಯುವಿಕೆ, ಕಲಿಕೆ ಮತ್ತು ಹಣಕಾಸಿನ

ಮಾಹಿತಿಗಳನ್ನು ಹಂಚಿಕೊಳ್ಳುವುದು. ಈ ಸಭೆಯ ವರದಿಯನ್ನು ಗ್ರಾಮ ಪಂಚಾಯತಿಯ ಗಮನಕ್ಕೆ ತರುವದು.

೩.೫ ಎಸ್.ಡಿ.ಎಂ.ಸಿ. ಸಭೆ :

ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ವೃದ್ಧಿಸುವಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪಾತ್ರ ಮಹತ್ವದ್ದಾಗಿದೆ.

ಶಾಲೆಯ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ಪರಾಮರ್ಶಿಸಿ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ನಿಗದಿತ ಅವಧಿಯಲ್ಲಿ ಸಭೆಗಳನ್ನು ನಡೆಸುತ್ತದೆ.

೩.೬ ಎಸ್.ಡಿ.ಎಂ.ಸಿ. ಸಭೆಯ ಉದ್ದೇಶ :

- ನಿಗದಿತ ವಿಷಯ ಪಟ್ಟಿಯ ಪ್ರಕಾರ ವಿಷಯಗಳನ್ನು ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವುದು.
- ನಡೆಯುತ್ತಿರುವ ಕಾರ್ಯಗಳ ಬಗ್ಗೆ ಸಮಿತಿಯ ಸದಸ್ಯರಿಗೆ ಅರಿವು ಮೂಡಿಸುವುದು.
- ಹಿಂದಿನ ಸಭೆಯ ನಿರ್ಣಯಗಳ ಅನುಷ್ಠಾನದ ಬಗ್ಗೆ ಅವಲೋಕನೆ
- ಸದಸ್ಯರಿಗೆ ಜವಾಬ್ದಾರಿಗಳ ಹಂಚಿಕೆ.

೩.೭ ಸಭೆಯ ಸಿದ್ಧತೆ :

- ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಮೊದಲೇ ನಿರ್ಧರಿಸಿ ವಿಷಯ ಪಟ್ಟಿ ತಯಾರಿಸಿರಬೇಕು.
- ಸಭೆ ನಡೆಸುವ ಜ್ಞಾಪನ ಪತ್ರದ ಜೊತೆಯಲ್ಲಿಯೇ ವಿಷಯ ಪಟ್ಟಿ ಲಗತ್ತಿಸಿರಬೇಕು.
- ಸಭೆ ನಡೆಯುವ ಒಂದು ವಾರ ಮೊದಲೇ ವಿಷಯವನ್ನು ಸದಸ್ಯರಿಗೆ ತಲುಪಿಸಬೇಕು.

೩.೮ ಸಭೆ ಮಾಡುವುದು ಹೇಗೆ :

- ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸುವುದು.
- ಮೊದಲ ಸಭೆಯಾಗಿದ್ದಲ್ಲಿ ಸದಸ್ಯರ ಪರಸ್ಪರ ಪರಿಚಯ

- ಸಭೆಗೆ ಹಾಜರಾದವರ ಸಹಿ ಪಡೆಯುವುದು.
- ಸಭೆಯ ಅವಶ್ಯ ಸಂಖ್ಯೆ (ಕೋರಂ) ೨/೩ ಭಾಗ ಇರುವುದನ್ನು ಖಚಿಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ದಿನಾಂಕ ನಿಗದಿಪಡಿಸಿ ಸಭೆಯನ್ನು ಮುಂದೂಡಬೇಕು.
- ಹಿಂದಿನ ಸಭೆಯ ನಿರ್ಣಯಗಳ ಅನುಪಾಲನೆ ಬಗ್ಗೆ ಪರಾಮರ್ಶಿಸುವುದು.
- ವಿಷಯ ಪಟ್ಟಿಯಲ್ಲಿನ ವಿಷಯಗಳನ್ನು ಅನುಕ್ರಮವಾಗಿ ಚರ್ಚಿಸುವುದು.
- ಚರ್ಚಿಸಿದ ವಿಷಯಗಳು ಮತ್ತು ನಿರ್ಣಯಗಳನ್ನು ನಡಾವಳಿ ರೂಪದಲ್ಲಿ ದಾಖಲಿಸುವುದು.
- ದಾಖಲಿಸಿದ ನಿರ್ಣಯಗಳನ್ನು ಪುನಃ ಓದಿ ಅಧ್ಯಕ್ಷರು ಹಾಗೂ ಹಾಜರಿದ್ದ ಸದಸ್ಯರ ಸಹಿ ಪಡೆಯುವುದು.
- ಕಾರಣಾಂತರಗಳಿಂದ ಸಭೆಗೆ ಅಧ್ಯಕ್ಷರು ಗೈರು ಹಾಜರಾದಲ್ಲಿ ಹಾಜರಿರುವ ಹಿರಿಯ ಸದಸ್ಯರು ಅಧ್ಯಕ್ಷತೆಯನ್ನು ವಹಿಸುವುದು.

೩.೯ ಸಭೆಯಲ್ಲಿ ಸದಸ್ಯರ ಪಾತ್ರ :

- ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವುದು.
- ವಿಷಯ ಪಟ್ಟಿಗೆ ಸಂಬಂಧಿಸಿದಂತೆ ಮಾಡಿಕೊಂಡು ಹಾಜರಾಗುವುದು.
- ಚರ್ಚೆಯಲ್ಲಿ ವಿಷಯಾಂತರ ಆಗದಂತೆ ನೋಡಿಕೊಳ್ಳುವುದು.
- ಎಲ್ಲಾ ಸದಸ್ಯರು ಚರ್ಚೆಯಲ್ಲಿ ಪಾಲ್ಗೊಳ್ಳುವುದು.
- ಜವಾಬ್ದಾರಿಯಿಂದ ವರ್ತಿಸುವುದು.
- ಕೆಲಸ ಕಾರ್ಯಗಳನ್ನು ಹಂಚಿಕೊಳ್ಳುವುದು.

೩.೧೦ ಸಭೆಯ ನಂತರ ಮಾಡುವ ಕಾರ್ಯಗಳು :

- ಸಭೆಯ ನಿರ್ಣಯಗಳನ್ನು ಕಾರ್ಯಗತ ಮಾಡುವುದು.
- ಅವಶ್ಯಕ ಸಂಪನ್ಮೂಲಗಳ ಕ್ರೋಢೀಕರಣ.
- ಅನುಪಾಲನಾ ಸಮಯದಲ್ಲಿ ಅಧಿಕೃತ ಅಡಚಣೆಗಳು ಬಂದಲ್ಲಿ ಸದಸ್ಯರಲ್ಲಿರು ಸೇರಿ ನಿವಾರಿಸುವುದು.
- ಸಮುದಾಯದ ಸಂಪೂರ್ಣ ಸಹಕಾರ ಪಡೆಯುವುದು.

೩.೧೧ ಎಸ್.ಡಿ.ಎಂ.ಸಿ. ಮತ್ತು ಶಿಸ್ತು ಕ್ರಮ :

- ೧೭ನೇ ಉದ್ದೇಶಗಳಿಗಾಗಿ ಶಿಕ್ಷಕರು ಅಥವಾ ಬೋಧಕ ಸಿಬ್ಬಂದಿಯು ಮುಖ್ಯ ಶಿಕ್ಷಕರನ್ನು ಒಳಗೊಳುತ್ತದೆ.
- ಎಲ್ಲಾ ವಿದ್ಯಾರ್ಥಿಗಳು ಬೋಧಕೇತರ ಸಿಬ್ಬಂದಿ ಶಿಕ್ಷಕರು ಮತ್ತು ತಂದೆ ತಾಯಿಗಳಿಗೆ ಮುಕ್ತವಾಗಿರುವಂತೆ ಶಾಲೆಯಲ್ಲಿ ಬಂದು ದೂರಗಳ ಪೆಟ್ಟಿಗೆಗಳನ್ನು ಇಡುವುದು.
- ಆ ಶಾಲೆಯಲ್ಲಿ ಓದುತ್ತಿರುವ ಮಗು ಅಥವಾ ಅಂಥ ಮಗುವಿನ ತಂದೆ ತಾಯಿಗಳು ಶಾಲೆಯನ್ನು ಬಿಟ್ಟಿರುವ ಮಗು ಅಥವಾ ಮಗುವಿನ ತಂದೆ ತಾಯಿಗಳು ಗ್ರಾಮದಲ್ಲಿ ವಾಸವಾಗಿದ್ದು, ಆದರೆ ಶಾಲೆಗೆ ಹೋಗದಿರುವ ಮಗು ಅಥವಾ ಅಂತ ಮಗುವಿನ ತಂದೆ ತಾಯಿಗಳು ಶಾಲೆಯ ಸಿಬ್ಬಂದಿ ಸದಸ್ಯರು ಈ ಮುಂದಿನವುಗಳ ಸಂಬಂಧವಾಗಿ ನಾಗರಿಕ ಸೌಕರ್ಯ ಸಮಿತಿಗೆ ಮೌಖಿಕ ಅಥವಾ ಲಿಖಿತ ದೂರನ್ನು ಸಲ್ಲಿಸಬಹುದು.

೧) ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುವುದು.

೨) ಶಾಲೆಯಲ್ಲಿ ಮಕ್ಕಳಿಗೆ ದೈಹಿಕ ಅಥವಾ ಲೈಂಗಿಕ ಕಿರುಕುಳ ನೀಡಿರುವುದು.

೩) ಶಾಲೆಯಲ್ಲಿ ಶಾಲಾ ಸಿಬ್ಬಂದಿ ಬೋಧಕ ಅಥವಾ ಬೋಧಕೇತರ ಮಕ್ಕಳನ್ನು ಲೈಂಗಿಕ ಕಿರುಕುಳ ಅಥವಾ ನಿಂದನೆಗೆ ಒಳಪಡಿಸಿರುವುದು.

೪) ಮಕ್ಕಳು ಅಥವಾ ಯಾರೇ ಸಿಬ್ಬಂದಿ ಸದಸ್ಯರಿಗೆ ಯಾವುದೇ ವಿಧವಾದ ಅಗೌರವ ಅಥವಾ ತಾರತಮ್ಯ ಎಸಗಿರುವುದು.

೫) ಶಿಕ್ಷಕರು ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಉದಾಸೀನತೆ.

೬) ಶಿಕ್ಷಕರು ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರುಗಳಿಗೆ ಕರ್ತವ್ಯ ಲೋಪ.

೭) ಯಾರೇ ಶಿಕ್ಷಕ, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ದುರ್ವತನೆ ದುರ್ನಡೆತೆ ಅಥವಾ ಅಸಭ್ಯ ವರ್ತನೆ

೮) ಯಾರೇ ಶಿಕ್ಷಕ ಬೋಧಕೇತರ ಸಿಬ್ಬಂದಿ. ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಂದ ತಪ್ಪು ನಿರ್ವಹಣೆ.

೯) ಯಾರೇ ಶಿಕ್ಷಕ ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಂದ ನಿಧಿಗಳ ಮತ್ತು ಸೌಲಭ್ಯಗಳ ದುರುಪೋಗ.

೧೦) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಮಗ್ರ ಕಾರ್ಯನಿರ್ವಹಣೆ.

ಡಿ) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಸ್ವೀಕರಿಸಿದ ದೂರುಗಳನ್ನು ಕಡೇ ಪಕ್ಷ ವಾರದ ಆಧಾರದ ಮೇಲೆ ಅವಶ್ಯಕವಾಗಿ ಪರಿಶೀಲಿಸಿ ಅದನ್ನು ನಾಗರಿಕ ಸೌಕರ್ಯ ಸಮಿತಿಗೆ ಕಳುಹಿಸುವುದು.

ಇ) ಬಂದಿರುವ ದೂರು, ಯಾರೇ ಬೋಧಕ/ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ಸದಸ್ಯರಿಂದ ಶಾಲೆ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರೂ. ೧೦೦೦/- ಗಳನ್ನು ವಿವಿಧ ನಿಧಿಗಳು ಆಸ್ತಿ–ಚರಾಸ್ತಿ ಅಥವಾ ಸೌಲಭ್ಯಗಳ ದುರುಪಯೋಗ ಅಥವಾ ಅವ್ಯವಸ್ಥೆಗೆ ಸಂಬಂಧಿಸಿದ್ದು, ನಾಗರಿಕ ಸೌಕರ್ಯ ಸಮಿತಿಯು ಈ ಕೆಳಕಂಡ ಕಾರ್ಯ ವಿಧಾನಗಳನ್ನು ಅನುಸರಿಸತಕ್ಕದ್ದು.

೧) ನಾಗರಿಕ ಸೌಕರ್ಯ ಸಮಿತಿಯ ದ್ವಿಸದಸ್ಯ ವಿಚಾರಣಾ ತಂಡವನ್ನು ರಚಿಸತಕ್ಕದ್ದು.

೨) ದೂರನ್ನು ಸ್ವೀಕರಿಸಿದ ೭ ದಿನಗಳೊಳಗೆ ಒಂದು ವಿಚಾರಣಾ ತಂಡವನ್ನು ರಚಿಸಬೇಕು. ಯಾವುದೇ ವಿಚಾರಣಾ ತಂಡವನ್ನು ರಚಿಸದಿರುವ ಸಂದರ್ಭದಲ್ಲಿ ಪಿರ್ಯಾದುದಾರನ್ನು ನೇರವಾಗಿ ಗ್ರಾಮಪಂಚಾಯತಿಯನ್ನು ಅಥವಾ ಕ್ಷೇತ್ರಶಿಕ್ಷಣಾಧಿಕಾರಿಯನ್ನು ಸಂಪರ್ಕಿಸಬಹುದು.

೩) ವಿಚಾರಣಾ ತಂಡವು ನಾಗರಿಕ ಸೌಕರ್ಯ ಸಮಿತಿಯಿಂದ ಒಬ್ಬ ಸದಸ್ಯರನ್ನು ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಿಂದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು. ವಿಚಾರಣಾ ತಂಡದ ಉಭಯ ಸದಸ್ಯರನ್ನು ದೂರಿನಲ್ಲಿ ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿಸಿರಬಾರದು /ಹೆಸರಿಸಲಾರದು.

೪) ವಿಚಾರಣಾ ತಂಡವು ಇದರ ರಚನೆಯ ೧೫ ದಿನಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಬೇಕು ಮತ್ತು ತಾನೇ ತೀರ್ಮಾನಗಳನ್ನು ಶಿಫಾರಸ್ಸುಗಳೊಂದಿಗೆ ನಾಗರಿಕ ಸೌಕರ್ಯ ಸಮಿತಿಗೆ ಕಳುಹಿಸಬೇಕು.

೫) ನಾಗರಿಕ ಸೌಕರ್ಯ ಸಮಿತಿಯು ವಿಚಾರಣಾ ತಂಡದ ವರದಿ ಮತ್ತು ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

ಎಫ್) ದೂರು ಯಾರೇ ಶಿಕ್ಷಕ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ/ಮೇಲುಸ್ತುವಾರಿ ಸಮಿತಿಯ ಸದಸ್ಯನಿಂದ ಶಾಲೆ ಅಥವಾ ಅಭಿವೃದ್ಧಿ ಮತ್ತು ಮೇಲಸ್ತುವಾರಿ ಸಮಿತಿಯ ಸದಸ್ಯನಿಂದ ಶಾಲೆ ಅಥವಾ ಶಾಲಾ ಅಭಿವೃಧ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರೂ. ೧೦೦೦/- ಗಳಿಗಿಂತ

ಕಡಿಮೆ ಇರುವ ನಿಧಿಗಳು ಆಸ್ತಿ ಚರ ಅಥವಾ ಸ್ಥಿರಾಸ್ತಿ ಅಥವಾ ಸೌಲಭ್ಯಗಳ ದುರುಪಯೋಗ ಅಥವಾ ಅವ್ಯವಸ್ಥೆಗೆ ಸಂಬಂಧಿಸಿದ್ದಾಗಿರುವಲ್ಲಿ ಅಥವಾ ದೂರು ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರೆ ಉದಾಸೀನತೆ ಕರ್ತವ್ಯ ಲೋಪ ದುವರ್ತನೆ ದುರ್ನಡತೆ ಅಸಭ್ಯ ವರ್ತನೆಗೆ ಸಂಬಂಧಿಸಿದ್ದಾಗಿರುವಲ್ಲಿ ನಾಗರಿಕ ಸೌಕರ್ಯ ಸಮಿತಿಯು ಪರಿಶೀಲನಾ ಸಭೆಯಲ್ಲಿ ಇದನ್ನು ಚರ್ಚಿಸತಕ್ಕದ್ದು. & ಅಂತ ವ್ಯಕ್ತಿ ವಿರುದ್ಧ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ಙ) ಮಕ್ಕಳನ್ನು ಯಾವುದೇ ರೂಪದಲ್ಲಿ ದೈಹಿಕವಾಗಿ ಅಥವಾ ಲೈಂಗಿಕವಾಗಿ ದುರುಪಯೋಗಪಡಿಸಿಕೊಂಡಿರುವುದಕ್ಕೆ ಸಂಬಂಧಪಟ್ಟಿರುವುದಿಲ್ಲ ನಾಗರಿಕ ಸೌಕರ್ಯ ಸಮಿತಿಯು ಕೆಳಕಂಡ ಕಾರ್ಯ ವಿಧಾನವನ್ನು ಅನುಸರಿಸತಕ್ಕದ್ದು.

೧. ನಾಗರಿಕ ಸೌಕರ್ಯ ಸಮಿತಿಯು ಕೂಡಲೇ ಸಂಬಂಧಪಟ್ಟ ಶಾಲೆಯ ಮುಖ್ಯ ಶಿಕ್ಷಕರಿಗೆ ಮಗುವನ್ನು ಬಾಲ ನ್ಯಾಯ ಅಧಿನಿಯಮ ೨೦೦೦ ಅಡಿಯಲ್ಲಿ ರಚಿಸಿದ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವಂತೆ ನಿರ್ದೇಶಿತಕ್ಕುದ್ದು, ಮತ್ತು ಮುಂದಿನ ಕ್ರಮಕ್ಕಾಗಿ ವಿಷಯವನ್ನು ಪೋಲಸರಿಗೆ ಕಳುಹಿಸಸತಕ್ಕದ್ದು.

೨) ನಾಗರಿಕ ಸೌಕರ್ಯ ಸಮಿತಿಯು ಕೂಡಲೇ ಇಬ್ಬರು ಮಹಿಳೆಯರನ್ನು ಒಳಗೊಂಡ ಮೂವರು ಸದಸ್ಯರ ಒಂದು ವಿಚಾರಣಾ ತಂಡವನ್ನು ರಚಿಸಿತಕ್ಕದ್ದು. ವಿಚಾರಣಾ ತಂಡದ ಸದಸ್ಯರಲ್ಲಿ ಒಬ್ಬರು ಶಾಲೆಯೊಂದಿಗೆ ಕಾರ್ಯನಿರತವಾಗಿಲ್ಲದಿರುವ ಒಂದು ಸರ್ಕಾರೇತರ ಸಂಸ್ಥೆಯಿಂದ ಬಂದಿರುವದು ಆಗಿರಬೇಕು.

೩) ಸದರಿ ವಿಚಾರಣಾ ತಂಡವು ಅದರ ರಚನೆಯ ೧೫ ದಿನಗಳೊಳಗಾಗಿ ದೂರವನ್ನು ಪರಿಶೀಲಿಸಿ ನಾಗರಿಕ ಸೌಕರ್ಯ ಸಮಿತಿಗೆ ವರದಿಯನ್ನು ಸಲ್ಲಿಸಬೇಕು.

೪) ನಾಗರಿಕ ಸೌಕರ್ಯ ಸಮಿತಿಯು ವಿಚಾರಣಾ ತಂಡದ ವರದಿ & ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

೫) ದೂರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಮಗ್ರ ಕಾರ್ಯನಿರ್ವಹಣೆಗೆ ಸಂಬಂಧಪಟ್ಟದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಯಾವೊಬ್ಬ ಸದಸ್ಯನ ವಿರುದ್ಧವಾಗಿರದ ಸಂದರ್ಭದಲ್ಲಿ ನಾಗರಿಕ ಸೌಕರ್ಯ ಸಮಿತಿಯು ಈ ಮುಂದಿನ ಕಾರ್ಯ ವಿಧಾನವನ್ನು ಅನುಸರಿಸಬೇಕು.

- ದೂರು ಸ್ವೀಕರಿಸಿದ ೧೦ ದಿನಗಳೊಳಗಾಗಿ ಇಬ್ಬರು ಸದಸ್ಯರು ಒಂದು ನಾಗರಿಕ ಸೌಲಭ್ಯ ಸಮಿತಿ ತಂಡವನ್ನು ರಚಿಸಬೇಕು.

- ಸದರಿ ತಂಡವು ದೂರವನ್ನು ಪರಿಶೀಲಿಸಿ ಅವ್ಯವಹಾರಗಳನ್ನು ಸರಿಪಡಿಸುವ ವಿಧಾನಗಳನ್ನು ಸೂಚಿಸಿ ತಂಡ ರಚನೆಯಾದ ಹತ್ತು ದಿನಗಳೊಳಗಾಗಿ ನಾಗರಿಕ ಸೌಲಭ್ಯ ಸಮಿತಿಗೆ ವರದಿ ನೀಡಬೇಕು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ದೂರು ಪ್ರತಿಗಳ ಮತ್ತು ಸದರಿ ನಾಗರಿಕ ಸೌಲಭ್ಯ ಸಮಿತಿ ತಂಡದ ವರದಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಕಳಿಸಿ ಅವ್ಯವಹಾಗಳನ್ನು ಸರಿಪಡಿಸಲು ೧೦ ದಿನಗಳ ಕಾಲಾವಕಾಶ ನೀಡಬೇಕು.
- ಶಾಲಾ ಅಭಿವೃದ್ಧಿಯಲ್ಲಿ ಮತ್ತು ಮೇಲುಸ್ತುವಾರಿ ಸಮಿತಿಯು ೧೫ ದಿನದೊಳಗಾಗಿ ನಾಗರಿಕ ಸೌಲಭ್ಯಗಳ ಸಮಿತಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.
- ಅನುಪಾಲನಾ ವರದಿಯನ್ನು ಸ್ವೀಕರಿಸಿದ ತರುವಾಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅವ್ಯವಹಾರಗಳನ್ನು ನಿಜವಾಗಿಯೂ ಸರಿಪಡಿಸಿದ ಬಗ್ಗೆ ನಾಗರಿಕ ಸೌಕರ್ಯ ಸಮಿತಿಯು ಖುದ್ದಾಗಿ ಪರಿಶೀಲಿಸಬೇಕು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಪಾಲನಾ ವರದಿಯನ್ನು ಸಲ್ಲಿಸಿದ್ದರೂ ಅವ್ಯವಹಾರಗಳನ್ನು ಸರಿಪಡಿಸಿ ಅಥವಾ ಕಾರಣ ಕೇಳುವ ನೋಟೀಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಶಾಲಾ ಅಭಿವೃದ್ಧಿ ಕೇಳುವ ನೋಟೀಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ನಿರಾಕರಿಸಿದ ಎಂದು ನಾಗರಿಕ ಸೌಕರ್ಯ ಸಮಿತಿಯು ನಂಬಿದರೆ ಶಾಲಾ ಅವಧಿಯಲ್ಲಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ೧೦ ದಿನಗಳ ಅವಧಿಯೊಳಗಾಗಿದ್ದು ಮಾಡಬಾರದೇಕೆ ಎಂಬ ಬಗ್ಗೆ ಕಾರಣ ಕೇಳುವ ಎರಡನೇ ನೋಟೀಸನ್ನು ನಾಗರಿಕ ಸೌಕರ್ಯ ಸಮಿತಿಯು ಜಾರಿಗೆ ಮಾಡಬೇಕು.
- ಅವ್ಯವಹಾರಗಳನ್ನು ಸರಿಪಡಿಸಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಎರಡನೇ ೧೦ ದಿನಗಳ ಅವಧಿಯಲ್ಲಿ ತೆಗೆದುಕೊಂಡ ಕ್ರಮಗಳು ತೃಪ್ತಿಕರವಾಗಿಲ್ಲದಿದ್ದಲ್ಲಿ ನಾಗರಿಕ ಸೌಲಭ್ಯಗಳ ಸಮಿತಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರದ್ದುಪಡಿಸತಕ್ಕದ್ದು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ವರದಿ ಸಮಿತಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಅದು ಹಾಗೆ ರದ್ದುಗೊಂಡ ೧ ತಿಂಗಳೊಳಗಾಗಿ ಶಾಲಾ ಪ್ರಾಧಿಕಾರಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮರು ರಚನೆ ಮಾಡಿದ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು.
- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯಾಗುವವರೆಗೆ ಅದರ ಪ್ರಕಾರ್ಯಗಳನ್ನು ನಾಗರಿಕ ಸೌಕರ್ಯ ಸಮಿತಿಯು ನಿರ್ವಹಿಸಬೇಕು.

೩.೧೨. ಎಸ್.ಡಿ.ಎಂ.ಸಿ ಮತ್ತು ಶಾಲೆಯ ನಡುವೆ ಸಂಬಂಧ :

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲೆಯ ಸಾಂಘಿಕ ಭಾಗವಾಗಿದ್ದು, ಶಾಲೆಯ ಸರ್ವಾಂಗೀಣ ಅಭಿವೃದ್ಧಿಯ ಪೂರ್ಣ ಜವಾಬ್ದಾರಿಯನ್ನು ಹೊಂದಿದೆ. ಶಾಲೆಯ ವ್ಯಾಪ್ತಿಗೆ ಸೇರುವ ಎಲ್ಲಾ ಜನವಸತಿ ಪ್ರದೇಶಗಳಲ್ಲಿ ಹುಟ್ಟಿನಿಂದ ೧೪ ವರ್ಷದ ಮಕ್ಕಳಿಗೆ ಸೂಕ್ತ ಆರೈಕೆ, ಶಿಕ್ಷಣ, ಪೋಷಣೆ ಮತ್ತು ರಕ್ಷಣೆ ಒದಗಿಸುವ ಜವಾಬ್ದಾರಿ ಎಸ್.ಡಿ.ಎಂ.ಸಿ. ಗಳದ್ದಾಗಿದೆ.

- ಶಾಲೆಯ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಭೆ ಸೇರಿ ಶಾಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತನೆ ವಾಸ್ತವಿಕವಾಗಿ ಅನುಷ್ಠಾನಗೊಳಿಸಬಹುದಾದ ಕ್ರಿಯಾ ಯೋಜನೆಯನ್ನು ತಯಾರಿಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲೆಯ ಅಭಿವೃದ್ಧಿಗೆ ಪ್ರಯತ್ನಿಸದೇ ಸಾರ್ವತ್ರೀಕರಣದ ಎಲ್ಲಾ ಆರು ಅಂಶಗಳಿಗೆ ಒತ್ತು ನೀಡಬೇಕಾಗಿದೆ.
- ಶಾಲೆಗೆ ಅಗತ್ಯವಾದ ಭೌತಿಕ ಸೌಲಭ್ಯಗಳು ಶಾಲಾ ವ್ಯಾಪ್ತಿಗೆ ಬರುವ ಎಲ್ಲಾ ಮಕ್ಕಳ ದಾಖಲಾತಿ ಹಾಜರಾತಿ ಎಲ್ಲಾ ಮಕ್ಕಳಿಗೆ ಸರಕಾರದಿಂದ ಸಿಗಬೇಕಾದ ಉಚಿತ ಉತ್ತೇಜಕಗಳ ಸಕಾಲಿಕ ವಿತರಣೆಯನ್ನು ಖಾತ್ರಿ ಪಡಿಸಿಕೊಳ್ಳಬೇಕು.
- ಎಸ್.ಡಿ.ಎಂ.ಸಿ.ಯ ಪಾಲಕರ ಸದಸ್ಯರು ಮತ್ತು ಸಮುದಾಯ ಎಸ್.ಡಿ.ಎಂ.ಸಿ. ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು ಮತ್ತು ಶೈಕ್ಷಣಿಕ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಗಳ ಜೊತೆ ಸಂಪರ್ಕವಿಟ್ಟುಕೊಂಡು ಶಾಲೆಯ ಅಗತ್ಯ ಮತ್ತು ಆಡಳಿತಕ್ಕೆ ಸಂಬಂಧಿಸಿದ ಸಂವಹನೆಯನ್ನು ಪರಿಣಾಮಕಾರಿಯಾಗಿ ನಡೆಸಲು ಅನುವಾಗುವಂತೆ ಕೆಲಸ ನಿರ್ವಹಿಸುವುದು.
- ಶಾಲೆಯ ಇನ್ನೊಂದು ಮುಖ್ಯವಾದ ಶಿಕ್ಷಕರು ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸಹಾಯವಾಗುವ ವಾತಾವರಣವನ್ನು ಸೃಷ್ಟಿಸುವುದು ಮತ್ತು ಸಮುದಾಯದ ಭಾಗವಹಿಸುವಿಕೆಗೆ ಪ್ರೇರೇಪಣೆ ಮತ್ತು ಬೆಂಬಲ ನೀಡುವ ಕೆಲಸವನ್ನು ನಿರಂತರವಾಗಿ ನಡೆಸಬೇಕು.
- ಶಾಲೆಯ ಕೇಂದ್ರ ಬಿಂದುವಾದ ಮಕ್ಕಳ ಶಿಕ್ಷಕರು ಪಾಲಕರ ನಡುವಿನ ಸೇತುವೆಯಗಿ ಕಾರ್ಯನಿರ್ವಹಿಸುವುದರ ಮೂಲಕ ಪಾಲಕರು ಮತ್ತು ಶಿಕ್ಷಕರು ಗುಣಾತ್ಮಕ ಶಿಕ್ಷಣದಡಿ ಅಭಿವೃದ್ಧಿಗೆ ಎಲ್ಲಾ ರೀತಿಯಲ್ಲೂ ನೆರವಾಗುವಂತೆ ತಮ್ಮ ಅಗತ್ಯ ಸಮಸ್ಯೆಗಳನ್ನು ಶಿಕ್ಷಕರಲ್ಲಿ, ಪಾಲಕರಲ್ಲಿ ಹಂಚಿಕೊಳ್ಳಬೇಕು.

- ಎಸ್.ಡಿ.ಎಂ.ಸಿ. ಶಾಲೆಯ ಕೇಂದ್ರ ಬಿಂದು ಮಗುವಾಗಿರುವುದರಿಂದ ಎಸ್.ಡಿ.ಎಂ.ಸಿ. ಮತ್ತು ಶಾಲೆಯ ಒಟ್ಟಾರೆ ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳು ಮತ್ತು ಕಾರ್ಯಕ್ರಮಗಳು ಮಕ್ಕಳ ಹಿತದೃಷ್ಟಿಯಿಂದ ಕೂಡಿರಬೇಕು.

ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಮಕ್ಕಳು ಕೂಡ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಒಂದು ಉತ್ತಮ ವಾತಾವರಣವನ್ನು ನಿರ್ಮಾಣ ಮಾಡುವುದು ಎಸ್.ಡಿ.ಎಂ.ಸಿ. ಮತ್ತು ಶಾಲೆಯ ಪ್ರಮುಖ ಗುರಿ ಯಾಗಬೇಕು.

೩.೧೩ ಗುಣಾತ್ಮಕ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆ :

- ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದಂತೆ ಚರ್ಚಿಸುವಂತಾಗಬೇಕು.
- ಶಾಲೆಗೆ ಬೆಂಬಲವಾಗಿ ಕೆಲಸ ಮಾಡಬೇಕಾದ ವ್ಯವಸ್ಥೆಗಳಾದ ಅಂಗನವಾಡಿ, ಆರೋಗ್ಯ ಕೇಂದ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಸಮಾಜ ಕಲ್ಯಾಣ ಇಲಾಖೆ, ಈ ಸಮುದಾಯ ಆಧಾರಿತ ಸಂಘಟನೆಗಳು ಸರಕಾರೇತರ ಸಂಘ ಸಂಸ್ಥೆಗಳ ನಡುವೆ ಸಮನ್ವಯತೆ ಸಾಧಿಸುವ ಅಗತ್ಯವನ್ನು ಹೇಳಬೇಕು. ಪ್ರಜಾಪ್ರಭುತ್ವದ ಸಮಾನತೆ, ಸಾಮಾಜಿಕ ನ್ಯಾಯದಿಂದಿರುವ ಅನುಕೂಲಗಳನ್ನು ಸಮುದಾಯದಲ್ಲಿ ಹುಟ್ಟುಹಾಕಬೇಕು. ಇದಕ್ಕೆ ಗ್ರಾಮದಲ್ಲಿ ಇರುವ ಸಣ್ಣಪುಟ್ಟ ಪ್ರಜಾಸತ್ತೆಯ ಸಂಸ್ಥೆಗಳನ್ನು ಬೆಳೆಸುವಂತಾಗಬೇಕು.
- ಗ್ರಾಮ ಪಂಚಾಯತಿ ಸಭೆಗಳಲ್ಲಿ, ಗ್ರಾಮಸಭೆಗಳಲ್ಲಿ, ವಾರ್ಡ್ ಸಭೆಗಳಲ್ಲಿ ಶಾಲಾ ಶಿಕ್ಷಣದ ಗತಿಶೀಲತೆಯನ್ನು ಚರ್ಚಿಸುವಂತಾಗಬೇಕು.
- ವೈಯಕ್ತಿಕ ಕಲಿಕೆಗೆ ಗ್ರಾಮದ ಅಭಿವೃದ್ಧಿಗೆ ಇರುವ ಸಂಬಂಧವನ್ನು ಸಮುದಾಯಕ್ಕೆ ತಿಳಿಸುವ ಪ್ರಯತ್ನ ಮಾಡಬೇಕು.
- ಮಕ್ಕಳು ತಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಲು, ಅನ್ವೇಷಿಸಲು ತನ್ನ ಅಗತ್ಯಗಳನ್ನು ಗುರುತಿಸಲು ಕ್ರೋಢೀಕರಿಸಲು ಸಮುದಾಯ ಬೆಂಬಲವಾಗಿ ನಿಲ್ಲಬೇಕು.
- ಶೈಕ್ಷಣಿಕ ಯೋಜನೆಗಳ ಸ್ಪಷ್ಟ ಪರಿಕಲ್ಪನೆ ಎಲ್ಲರಿಗೂ ಇರಬೇಕು.
- ಜನವಸತಿ ಪ್ರದೇಶದ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮ ಅನ್ವಯವಾಗಬೇಕು.
- ಹೊಸ ಯೋಜನೆಗಳ ಮುನ್ನ ಇರುವ ಯೋಜನೆಗಳ ಲೋಪದೋಷ ಸರಿಪಡಿಸಿಕೊಂಡು ಮುಂದುವರೆಸುವದು.
- ಶೈಕ್ಷಣಿಕ ಯೋಜನೆಗಳು ಕೆಳಹಂತದಲ್ಲಿಯೇ ರೂಪಿತವಾಗಬೇಕು.

- ನಮ್ಮ ಶಾಲಾಭಿವೃದ್ಧಿ ಶಾಲಾ ಮಕ್ಕಳ ಕಲಿಕಾ ಗುಣಮಟ್ಟ ಗ್ರಾಮಗಳಲ್ಲಿಯೂ ಚರ್ಚೆಯಾಗಬೇಕು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಸ್.ಡಿ.ಎಂ.ಸಿ. ಬರುವದರಿಂದ ಎಸ್.ಡಿ.ಎಂ.ಸಿ. ಈಗ ಸಂವಿಧಾನ ಕಾನೂನುಬದ್ಧವಾದ ಪ್ರಜಾಪ್ರಭುತ್ವದ ತಳಹದಿಯಲ್ಲಿ ರಚನೆಗೊಂಡ ಸ್ಥಳಿಯ ಶೈಕ್ಷಣಿಕ ಸರಕಾರವಾಗಿದೆ. ಗುಣಮಟ್ಟದ ಕಲಿಕೆ ಅಲ್ಲಿಂದಲೇ ಚರ್ಚಿತವಾಗಬೇಕು.
- ಆಯಾ ಗ್ರಾಮ ಪಂಚಾಯತಿಯ ಸಭೆಯ ಸಮಿತಿಗಳನ್ನೇ ಸಬಲೀಕರಣ ಮಾಡುವುದರಿಂದ ಅದರಲ್ಲೂ ಮುಖ್ಯವಾಗಿ ಸಿ.ಎ.ಸಿ. (ನಾಗರಿಕ ಸೌಕರ್ಯ ಸಮಿತಿ) ಯನ್ನು ಸಬಲೀಕರಣದೊಂದಿಗೆ ಗುಣಮಟ್ಟದ ಕಲಿಕೆಯಾಗಲು ಸಾಧ್ಯ.
- ಸಮುದಾಯವನ್ನೇ ಸಂಪೂರ್ಣವಾಗಿ ತೊಡಗಿಸುವುದರ ಮೂಲಕ ಗುಣಮಟ್ಟದತ್ತ ಶಾಲೆಗಳನ್ನು ಒಯ್ಯಲು ಸಾಧ್ಯ.
- ಶಿಕ್ಷಣದ ಮುಖ್ಯ ವಾರುಸುದಾರರನ್ನು ಮಾತನಾಡಿಸಿ ಅವರೆಲ್ಲರ ಚರ್ಚೆಯ ತೀರ್ಮಾನದ ಮೂಲಕ ಆ ಗ್ರಾಮದ ಶೈಕ್ಷಣಿಕ ಯೋಜನೆಗಳನ್ನು ರೂಪಿಸೋಣ ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಅದರ ಸ್ಥಾಯಿ ಸಮಿತಿಗಳು ಎಸ್.ಡಿ.ಎಂ.ಸಿ.ಗಳನ್ನು ಸಬಲೀಕರಣ ಮಾಡೋಣ. ಮಿತ್ರರೆ ಗುಣಮಟ್ಟದ ಕಲಿಕೆ ಪ್ರಮುಖವಾಗಿ ನಮ್ಮ ಕೈಯಲ್ಲಿದೆ. ನಾವೆಲ್ಲಾ ಎಚ್ಚೆತ್ತುಕೊಳ್ಳೋಣ ಹೊಸ ಹೆಜ್ಜೆಗಳನ್ನೇ ಸಮುದಾಯದೊಂದಿಗೆ ಹಾಕೋಣ.

೩.೧೪ ಎಸ್.ಡಿ.ಎಂ.ಸಿ. ಮತ್ತು ಪಂಚಾಯತ ರಾಜ್ ಸಂಸ್ಥಾನಗಳೊಂದಿಗೆ ಸಂಬಂಧ :

೧. ಗ್ರಾಮ ಸಭೆಗಳಲ್ಲಿ ಆಯಾ ಗ್ರಾಮದ ಶಾಲೆಗಳ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಖಾಯಂ ಆಮಂತ್ರಿತ ಸದಸ್ಯರಾಗಿರುತ್ತಾರೆ. ಸಭೆಗಳಲ್ಲಿ ಶೈಕ್ಷಣಿಕ ಸಮಸ್ಯೆ ಹಾಗೂ ಪ್ರಗತಿಯ ಕುರಿತು ಚರ್ಚಿಸಲು ಅವರುಗಳಿಗೆ ಸೂಕ್ತ ಕಾಲಾವಕಾಶವನ್ನು ನೀಡಬೇಕು.

೨. ಗ್ರಾಮ ಪಂಚಾಯತಿಯ ಕೇಂದ್ರದಲ್ಲಿರುವ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಆ ಗ್ರಾಮ ಪಂಚಾಯತಿಯ ಸಭೆಗೆ ವಿಶೇಷ ಆಹ್ವಾನಿತರಾಗಿರುತ್ತಾರೆ ಈ ಕ್ರಮವು ಶಾಲೆಯ ಹಾಗೂ ಶೈಕ್ಷಣಿಕ ವಿಚಾರಗಳನ್ನು ಗ್ರಾಮಪಂಚಾಯತಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ತಮ್ಮ ಶಾಲೆಗಳ ಸಮಸ್ಯೆಗಳನ್ನು ಮೇಲ್ಕಾಣಿಸಿದ ಅಧ್ಯಕ್ಷರ/ಉಪಾಧ್ಯಕ್ಷರ ಮುಖಾಂತರ ಗ್ರಾಮ ಪಂಚಾಯತಿಯ ಗಮನಕ್ಕೆ ತರಬಹುದಾಗಿದೆ.

೩. ಸಾರ್ವಜನಿಕ ಶಿಕ್ಷಣ ಇಲಾಖೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ಯ ಇಲಾಖೆಗಳು ಸೇರಿ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಎಸ್.ಡಿ.ಎಂ.ಸಿ.ಗಳಲ್ಲಿ ಅವರು ಪಾತ್ರದ ಬಗ್ಗೆ ತಿಳುವಳಿಕೆ ನೀಡುವದು.

- ಇಲ್ಲಿಯವರೆಗೆ ಸಮಾಂತರವಾಗಿ ಕೆಲಸ ನಿರ್ವಹಿಸುತ್ತಿದ್ದ ಹಲವಾರು ಸಮಿತಿಗಳನ್ನೇ ಪಂಚಾಯತಿಯ ಜೊತೆಗೆ ಬೆಸೆಯುವ ಕೆಲಸ ಪ್ರಾರಂಭವಾಯಿತು.
- ಈ ಪ್ರಕ್ರಿಯೆಯಲ್ಲಿ ಮಹತ್ವದ ಘಟ್ಟವೆಂದರೆ ಪಂಚಾಯತ ರಾಜ್ಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯವು ಕರ್ನಾಟಕ ರಾಜ್ಯಪತ್ರದಲ್ಲಿ ಅಭಿಪ್ರಚಾರ ಮೂಲಕ ಪಂಚಾಯತ ರಾಜ್ಯಗಳಿಗೆವಹಿಸಿರುವ ಎಲ್ಲಾ ೨೯ ವಿಷಯಕ್ಕೆ ಸಂಬಂಧಿಸಿದ ವಿವಿಧ ಇಲಾಖೆ ಕಾರ್ಯಕ್ರಮಗಳನ್ನು ತಾಲೂಕು ಪಂಚಾಯತ ಮತ್ತು ಜಿಲ್ಲಾ ಪಂಚಾಯತಿಗಳಿಗೆ ವರ್ಗಾಹಿಸುವ ತೀರ್ಮಾನ ಕೈಗೊಂಡಿತು.
- ಈ ಮಾದರಿ ಉಪವಿಧಿಗಳನ್ನೇ ಕರ್ನಾಟಕ ರಾಜ್ಯ ಸರಕಾರವು ಮೊದಲ ಬಾರಿಗೆ ೧೭-೦೩-೨೦೦೬ ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿ ಸಾರ್ವಜನಿಕರ ಚರ್ಚೆ/ಸಲಹೆಗಳಿಗಾಗಿ ತೆರೆದಿಟ್ಟು ಒಂದು ತಿಂಗಳ ಕಾಲಾವಕಾಶವನ್ನು ಕಲ್ಪಿಸಿತು.
- ಸಾರ್ವಜನಿಕರಿಂದ ಬಂದ ಸಲಹೆ ಸೂಚನೆಗಳ ಮೇಲೆ ಅಗತ್ಯ ತಿದ್ದುಪಡಿಗಳನ್ನೇ ಮಾಡಿದ ಸರಕಾರವು ಅಂತಿಮವಾಗಿ ಈ ಉಪವಿಧಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ ೧೪-೦೬-೨೦೦೬ ರಂದು ಪ್ರಕಟಿಸಿತು. ಇದು ಕರ್ನಾಟಕ ರಾಜ್ಯ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲು ಎಂದರೆ ತಪ್ಪಾಗಲಾರದು.
- ಈ ರೀತಿ ಸಹಭಾಗಿತ್ವ ಸಂಶೋಧನೆಯ ಮೂಲಕ ರೂಪುಗೊಂಡ ಮಾದರಿ ಉಪವಿಧಿಗಳ ಪ್ರತಿ ಇಂದು ನಮ್ಮ ಕೈಯಲ್ಲಿದೆ. ಈ ಉಪವಿಧಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದರ ಮೂಲಕ ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಾರ್ವತ್ರಿಕರಣಕ್ಕೆ ಗುಣಾತ್ಮಕತೆಯ ಕಾಯಕಲ್ಪವನ್ನು ಕಲ್ಪಿಸಬೇಕಿದೆ.

೩.೧೫ ಎಸ್.ಡಿ.ಎಂ.ಸಿ. ಅಧ್ಯಕ್ಷ, ಉಪಾಧ್ಯಕ್ಷರ ಹಾಗೂ ಸದಸ್ಯ ಕಾರ್ಯದರ್ಶಿಯವರ ಅಧಿಕಾರ ಹಾಗೂ ಕರ್ತವ್ಯಗಳು :

ಅಧ್ಯಕ್ಷರ ಪ್ರಕಾರ್ಯಗಳು :

- ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾಗಿ ಸಭೆಗಳ ಅಧ್ಯಕ್ಷತೆ ವಹಿಸುವುದು
- ಮುಖ್ಯ ಶಿಕ್ಷಕರಿಗೆ ಸಾಂದರ್ಭಿಕ ರಜೆ ನೀಡುವುದು.

- ದೂರುಗಳ ಪೆಟ್ಟಿಗೆಯನ್ನು ಆ ಸಮಯದಲ್ಲಿ ಅಲ್ಲಿ ಲಭ್ಯವಿರುವ ಕನಿಷ್ಠ ಒಬ್ಬ ಶಿಕ್ಷಕ ಮತ್ತು ವಿದ್ಯಾರ್ಥಿಗಳಿಂದ ಉಪಸ್ಥಿತಿಯಲ್ಲಿ ಕನಿಷ್ಠ ವಾರಕ್ಕೊಮ್ಮೆ ತೆರೆಯುವುದು.
- ಅಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂತಹ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಉಪಾಧ್ಯಕ್ಷರ ಪ್ರಕಾರ್ಯಗಳು :

- ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಎಸ್.ಡಿ.ಎಂ.ಸಿ. ಉಪವಿಧಿ ೭ ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಧ್ಯಕ್ಷರ ಪ್ರಕಾರ್ಯಗಳನ್ನೇ ನಿರ್ವಹಿಸತಕ್ಕದ್ದು.
- ಉಪಾಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂತಹ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

ಸದಸ್ಯ ಕಾರ್ಯದರ್ಶಿಯ ಪ್ರಕಾರ್ಯಗಳು :

೧) ಸದಸ್ಯ ಕಾರ್ಯದರ್ಶಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

೨) ಪ್ರತಿ ಶೈಕ್ಷಣಿಕ ವರ್ಷದ ಪ್ರಾಭಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಮೋದನೆ ಪಡೆದು ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವದು ಮತ್ತು ಅದನ್ನು ಸಿದ್ಧಪಡಿಸಿದ ಒಂದು ವಾರದೊಳಗೆ ಸಿ.ಎ.ಸಿ.ಗೆ ಸಲ್ಲಿಸತಕ್ಕದ್ದು.

೩) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಗೆ ಕಾರ್ಯಸೂಚಿ ತಯಾರಿಸುವದು.

ವಿವರಣೆ :

ಸಭೆಗಳ ಕಾರ್ಯಸೂಚಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಸಿಕ ಲೆಕ್ಕಪತ್ರಗಳು ಶಾಲಾ ಅಭಿವೃದ್ಧಿ ಆಡಳಿತ ಹಾಜರಾತಿ ದಾಖಲಾತಿ ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಅವರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರತಕ್ಕದ್ದು.

೧) ಎಸ್.ಡಿ.ಎಂ.ಸಿ. ಅಧಿನಿಯಮದ ಅಧ್ಯಾಯ (೪) ರ ಅನುಸಾರ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ಕರೆಯುವುದು ಮತ್ತು ಅದಕ್ಕೆ ಅನುಕೂಲ ಕಲ್ಪಿಸಿಕೊಡುವುದು ಮತ್ತು ಎಲ್ಲಾ ಸಭೆಗಳ ನಡಾವಳಿಗಳನ್ನು ತೆಗೆದುಕೊಳ್ಳುವದು

೨) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಹಿತಿಗಾಗಿ ಆತನ/ಆಕೆಯ ಅಧಿಕಾರದ ಅಡಿಯಲ್ಲಿ ಬರುವ ಎಲ್ಲ ವಿಷಯಗಳ ಮಾಹಿತಿಯನ್ನು ತಯಾರಿಸುವದು.

೩) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವುದು.

೪) ಅವನ/ಆಕೆಯ ಪ್ರಭಾರದಲ್ಲಿರುವ ಶಾಲೆಗೆ ಸೇರಿರುವ ಎಲ್ಲ ದಸ್ತಾವೇಜುಗಳು ಮತ್ತು ಸ್ವತ್ತಿನ ಸುರಕ್ಷಿತ ಸುಪರ್ದಿಗೆ ಜವಾಬ್ದಾರರಾಗಿವುದು

೫) ಕನಿಷ್ಟ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ತಂದೆತಾಯಿಯವರ ಪರಿಷತ್ತು ಮತ್ತು ನಾಗರಿಕ ಸೌಲಭ್ಯ ಸಮಿತಿಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಚಟುವಟಿಕೆಗಳ ವರದಿ ಮತ್ತು ಲೆಕ್ಕಪತ್ರಗಳ ವಿವರ ಪಟ್ಟಿಯನ್ನು ತಯಾರಿಸುವದು ಹಾಗೂ ಹಾಜರುಪಡಿಸುವದು.

೬) ಪತ್ರ ವ್ಯವಹಾರ ನಡೆಸುವುದು ಹಾಗೂ ಎಲ್ಲ ನೋಟಿಸುಗಳನ್ನು ಜಾಹೀರಾತುಗಳನ್ನು ಹೊರಡಿಸುವದು. ಸದಸ್ಯ ಕಾರ್ಯದರ್ಶಿಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂತಹ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

ಅಧ್ಯಾಯ ೪

ಮಾಹಿತಿಯ ವರ್ಗೀಕರಣ ಮತ್ತು ವಿಶ್ಲೇಷಣೆ

ಮಾಹಿತಿಯ ವರ್ಗೀಕರಣ ಮತ್ತು ವಿಶ್ಲೇಷಣೆ

ಯಾವದೇ ಸಂಶೋಧಕನು ಯಾವುದೇ ಒಂದು ಅಧ್ಯಯನದ ಮೇಲೆ ಸಂಶೋಧನೆಯನ್ನು ಕೈಗೊಂಡನಂತರ ಅಲ್ಲಿ ದೊರೆತ ಮಾಹಿತಿ ಮತ್ತು ಅಂಕಿ-ಸಂಖ್ಯೆಗಳನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿದ ನಂತರ ಸಂಶೋಧನೆಯ ನೈಜಸ್ಥಿತಿ ತಿಳಿಯುತ್ತದೆ. ಆದುದರಿಂದ ಈ ಕೆಳಗಿನಂತೆ ಸಂಶೋಧನೆಯ ವಿಷಯವನ್ನು ದೊರೆತ ಅಂಕಿ ಸಂಖ್ಯೆಗಳ ಮುಖಾಂತರ ವರ್ಗೀಕರಣ ಮತ್ತು ವಿಶ್ಲೇಷಣೆಯನ್ನು ಮಾಡಲಾಗಿದೆ.

ಭಾಗ-ಅ

೪.೧. ದತ್ತಾಂಶಗಳ ವಿಶ್ಲೇಷಣೆ

೪.೧.ಅ ಎಸ್.ಡಿ.ಎಮ್.ಸಿ. ಎಂದರೇನು ತಮಗೆ ಗೊತ್ತೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಬಗ್ಗೆ ಆರಂಭದಲ್ಲಿ ಎಷ್ಟು ಜನ ಸದಸ್ಯರಿಗೆ ಗೊತ್ತಿತ್ತು ಎಂಬ ವಿಷಯವನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ಪ್ರತಿಸ್ಪಂದಿಗಳ ಸಂಖ್ಯೆ ೨೦. ಇವರಲ್ಲಿ ೨೦ ಜನ ಸದಸ್ಯರು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಅಂದರೆ ಶೇ.೧೦೦ ರಷ್ಟು ಸದಸ್ಯರಿಗೆ ಎಸ್.ಡಿ.ಎಮ್.ಸಿ.ಯ ಬಗ್ಗೆ ಗೊತ್ತಿತ್ತು ಎಂಬುದು ತಿಳಿದು ಬರುತ್ತದೆ.

೪.೨.೫ ಹೌದಾದರೆ ಎಸ್.ಡಿ.ಎಮ್.ಸಿ. ಯಾವುದಕ್ಕೆ ಇದೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಲುವಾಗಿ	೪	೨೦
೨.	ಆಡಳಿತ ನಡೆಸಲು	–	–
೩.	ಶಿಕ್ಷಕರ ಮೇಲೆ ನಿಯಂತ್ರಣ ತರಲು	೧	೫
೪.	ಮಕ್ಕಳ ಶೈಕ್ಷಣಿಕ ಸುಧಾರಣೆಗೆ	೧೫	೭೫
೫.	ಮೇಲಿನ ಯಾವುದೂ ಅಲ್ಲ	–	–
	ಒಟ್ಟು		೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಯಾವ ಉದ್ದೇಶಕ್ಕಾಗಿ ಸ್ಥಾಪನೆಯಾಗಿದೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ೪ ಜನರು (ಶೇ.೨೦ರಷ್ಟು) ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿಗಾಗಿ ಒಬ್ಬರು ವ್ಯಕ್ತಿ (ಶೇ.೫ರಷ್ಟು) ಶಿಕ್ಷಕರ ಮೇಲೆ ನಿಯಂತ್ರಣ ತರಲು ೧೫ ಜನರು (ಶೇ.೭೫ರಷ್ಟು) ಈ ಮೇಲಿನ ನಾಲ್ಕು ಅಂಶಗಳನ್ನು ಈಡೇರಿಸಲು ಸ್ಥಾಪನೆಯಾಗಿದೆ ಎಂದು ಸೂಚಿಸಿದ್ದಾರೆ.

೪.೩.೫ ಎಸ್.ಡಿ.ಎಮ್.ಸಿ. ನಿಮ್ಮ ಗ್ರಾಮದ ಶಾಲೆಯಲ್ಲಿ ಯಾವಾಗ ಸ್ಥಾಪನೆಯಾಯಿತು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಕಳೆದ ಒಂದು ವರ್ಷ	–	–
೨.	ಕಳೆದ ಮೂರು ವರ್ಷ	೧೬	೮೦
೩.	ಕಳೆದ ಎರಡು ವರ್ಷ	೩	೧೫
೪.	ಕಳೆದ ಎಂಟು ವರ್ಷ	೧	೫
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಯಾವಾಗ ಸ್ಥಾಪನೆಯಾಯಿತು ಎಂಬುದನ್ನು ತಿಳಿಸಿಕೊಡುತ್ತದೆ. ಸಂಶೋಧಕನು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ೧೬ಜನ ಪ್ರತಿಸ್ಪಂದಿಗಳು (ಶೇ.೮೦ರಷ್ಟು) ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯು ಕಳೆದ ಮೂರು

ವರ್ಷಗಳಿಂದ ಸ್ಥಾಪನೆಯಾಗಿದೆ ಎಂದು ತಿಳಿಸಿದ್ದಾರೆ. ೩ ಜನ ಪ್ರತಿಸ್ಪಂದಿಗಳು (ಶೇ.೧೫ರಷ್ಟು) ಎಸ್.ಡಿ.ಎಮ್.ಸಿ.ಯು ಕಳೆದ ೨ ವರ್ಷಗಳಿಂದ, ಒಬ್ಬರು (ಶೇ.೫ರಷ್ಟು) ಪ್ರತಿಸ್ಪಂದಿಗಳು ಕಳೆದ ಎಂಟು ವರ್ಷಗಳಿಂದ ಸ್ಥಾಪನೆಯಾಗಿದೆ ಎಂದು ಸೂಚಿಸಿದ್ದಾರೆ.

೪.೪.೮ ಎಸ್.ಡಿ.ಎಮ್.ಸಿ.ಯ ಸದಸ್ಯರಾಗಿ ಎಷ್ಟು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದೀರಿ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಎಂಟು ವರ್ಷಗಳಿಂದ	೫	೨೫
೨.	ಮೂರು ವರ್ಷಗಳಿಂದ	೫	೨೫
೩.	ಒಂದು ವರ್ಷದಿಂದ	೬	೩೦
೪.	ಎರಡು ವರ್ಷಗಳಿಂದ	೪	೨೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಸದಸ್ಯರಾಗಿ ಎಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬುದನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ (೫ ಜನರು) ಶೇ.೨೫ರಷ್ಟು ಸದಸ್ಯರು ಕಳೆದ ಎಂಟು ವರ್ಷಗಳಿಂದ, (೫ಜನರು) ಶೇ.೨೫ ರಷ್ಟು ಸದಸ್ಯರು ಮೂರು ವರ್ಷಗಳಿಂದ, (೬ ಜನರು) ಶೇ.೩೦ರಷ್ಟು ಸದಸ್ಯರು ಒಂದು ವರ್ಷದಿಂದ, (೪ ಜನರು) ಶೇ.೨೦ ರಷ್ಟು ಸದಸ್ಯರು ಎರಡು ವರ್ಷಗಳಿಂದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಸೂಚಿಸಿದ್ದಾರೆ.

೪.೫.೮ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯ ಅವಶ್ಯಕತೆ ಇದೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	**೧೦೦**

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಅವಶ್ಯಕತೆ ಇದೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ

ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ. ಶೇ.೧೦೦ರಷ್ಟು ಸದಸ್ಯರು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಅವಶ್ಯಕತೆ ಇದೆ ಎಂದು ಸೂಚಿಸಿದ್ದಾರೆ.

೪.೬.೮ ಎಸ್.ಡಿ.ಎಮ್.ಸಿ.ಯು ಸಮುದಾಯದ ಜನರಿಗೆ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯು ಸಮುದಾಯದ ಜನರಿಗೆ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ, ಶೇ.೧೦೦ ರಷ್ಟು ಪ್ರತಿಸ್ಪಂದಿಗಳು ಎಸ್.ಡಿ.ಎಮ್.ಸಿ.ಯು ಸಮುದಾಯದ ಜನರಿಗೆ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ.

೪.೭.೮ ಎಸ್.ಡಿ.ಎಮ್.ಸಿ.ಯ ಸದಸ್ಯರನ್ನು ಯಾರು ನೇಮಕ ಮಾಡುತ್ತಾರೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲಾ ಶಿಕ್ಷಕರು	೪	೨೦
೨.	ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು	–	–
೩.	ಶಾಲೆಗೆ ಬರುವ ವಿದ್ಯಾರ್ಥಿಗಳ ಪಾಲಕರು	೧೬	೮೦
೪.	ಗ್ರಾಮದ ಹಿರಿಯರು/ಪಂಚರು	–	–
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರನ್ನು ಯಾರು ನೇಮಕ ಮಾಡುತ್ತಾರೆ ಎಂಬುದನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ (೪ ಜನರು) ಶೇ.೨೦ ರಷ್ಟು ಪ್ರತಿಸ್ಪಂದಿಗಳು ಶಾಲೆಯ ಮುಖ್ಯ ಶಿಕ್ಷಕರು. (೧೬ ಜನರು) ಶೇ.೮೦ ರಷ್ಟು ಪ್ರತಿಸ್ಪಂದಿಗಳು, ಶಾಲೆಗೆ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪಾಲಕರು ನೇಮಕ ಮಾಡುತ್ತಾರೆ ಎಂದು ಸೂಚಿಸಿದ್ದಾರೆ.

೪.೮.೫ ಎಸ್.ಡಿ.ಎಮ್.ಸಿ.ಯ ಬಗ್ಗೆ ಹೇಗೆ ಮಾಹಿತಿ ಪಡೆದುಕೊಂಡಿದ್ದೀರಿ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲೆಯ ಮುಖ್ಯ ಶಿಕ್ಷಕರಿಂದ	೧೫	೭೫
೨.	ಸರಕಾರಿ ಜಾಹೀರಾತುಗಳಿಂದ	೫	೨೫
೩.	ಶಾಲಾ ಸಹ ಶಿಕ್ಷಕರಿಂದ	–	–
೪.	ಗ್ರಾಮ ಪಂಚಾಯತಿಯಿಂದ	–	–
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಬಗ್ಗೆ ಸದಸ್ಯರು ಯಾರಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ ? ಎಂಬುದನ್ನು ತಿಳಿಸುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ೧೫ ಜನರು (ಶೇ.೭೫ರಷ್ಟು) ಪ್ರತಿಸ್ಪಂದಿಗಳು ಶಾಲೆಯ ಮುಖ್ಯ ಶಿಕ್ಷಕರಿಂದ, ೫ ಜನರು (ಶೇ.೨೫ರಷ್ಟು) ಪ್ರತಿಸ್ಪಂದಿಗಳು ಸರಕಾರಿ ಜಾಹೀರಾತುಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಸೂಚಿಸಿದ್ದಾರೆ.

೪.೯.೫ ಶಾಲೆಯ ಸಮಸ್ಯೆಗಳನ್ನು ಎಸ್.ಡಿ.ಎಮ್.ಸಿ. ಸದಸ್ಯರು ಗುರುತಿಸುತ್ತಾರೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ತಕ್ಕ ಮಟ್ಟಿಗೆ ಗುರುತಿಸುತ್ತಾರೆ.	೫	೨೫
೨.	ಭಾಗಶಃ ಗುರುತಿಸುತ್ತಾರೆ.	೩	೧೫
೩.	ಗುರುತಿಸುವದಿಲ್ಲ.	೨	೧೦
೪.	ತಪ್ಪು ಕಂಡು ಹಿಡಿಯುತ್ತಾರೆ.	೧೦	೫೦
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಶಾಲೆಯ ಸಮಸ್ಯೆಗಳನ್ನು ಎಸ್.ಡಿ.ಎಮ್.ಸಿ. ಸದಸ್ಯರು ಗುರುತಿಸುತ್ತಾರೆಯೇ ? ಎಂಬುದನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ (೫ ಜನರು) ಶೇ.೨೫ ರಷ್ಟು ಪ್ರತಿಸ್ಪಂದಿಗಳು ತಕ್ಕ ಮಟ್ಟಿಗೆ

ಗುರುತಿಸುತ್ತಾರೆ. (೩ ಜನರು) ಶೇ.೧೫ರಷ್ಟು ಪ್ರತಿಸ್ಪಂದಿಗಳು ಭಾಗಶಃ ಗುರುತಿಸುತ್ತಾರೆ. (೨ ಜನರು) ಶೇ.೧೦ ರಷ್ಟು ಪ್ರತಿಸ್ಪಂದಿಗಳು ಗುರುತಿಸುವದಿಲ್ಲ. (೧೦ ಜನ) ಸದಸ್ಯರು ಶೇ.೫೦ರಷ್ಟು ಪ್ರತಿಸ್ಪಂದಿಗಳು ತಪ್ಪುಗಳನ್ನು ಕಂಡು ಹಿಡಿಯುತ್ತಾರೆ. ಎಂಬುದನ್ನು ಸೂಚಿಸಿದ್ದಾರೆ.

೪.೧೦.ಅ ಸಮುದಾಯದ ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ?

ಕ್ರ.ಸಂ	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಸಮುದಾಯದ ಸದಸ್ಯರು ಶಾಲೆಯ ಕಾರ್ಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ಎಂಬ ವಿಷಯವನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ.೧೦೦ ರಷ್ಟು ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ಸೂಚಿಸುತ್ತದೆ.

೪.೧೧.ಅ ಸಮುದಾಯದ ಜನರನ್ನು ಶಾಲೆಯ ಕಾರ್ಯ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಎಸ್.ಡಿ.ಎಮ್.ಸಿ. ಸಹಾಯಕಾರಿಯಾಗಿದೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಎಸ್.ಡಿ.ಎಮ್.ಸಿ.ಸಭೆಯಲ್ಲಿ ಭಾಗವಹಿಸಲು ಅವಕಾಶ	೫	೨೫
೨.	ರಾಷ್ಟ್ರೀಯ ಹಬ್ಬಗಳನ್ನು ಅವಕಾಶ	೪	೨೦
೩.	ಇತರ ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶ	೨	೧೦
೪.	ಮೇಲಿನ ಎಲ್ಲವೂ ತಪ್ಪು	೯	೪೫
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಸಮುದಾಯದ ಜನರನ್ನು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಎಸ್.ಡಿ.ಎಮ್.ಸಿ. ಸಹಾಯಕಾರಿಯಾಗಿದೆಯೇ ಎಂಬುದನ್ನು ಸೂಚಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ. ೫

ಪ್ರತಿಸ್ಪಂದಿಗಳು (ಶೇ.೨೫ರಷ್ಟು) ಸಭೆಯಲ್ಲಿ ಭಾಗವಹಿಸಲು, ೪ ಪ್ರತಿಸ್ಪಂದಿಗಳು (ಶೇ.೨೦ರಷ್ಟು) ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು, ೨ ಜನರು (ಶೇ.೧೦ರಷ್ಟು) ಇತರ ಸಮಾರಂಭಗಳಲ್ಲಿ ಭಾಗವಹಿಸಲು, ೯ ಜನರು (ಶೇ.೪೫ರಷ್ಟು) ಮೇಲಿನ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಎಸ್.ಡಿ.ಎಮ್.ಸಿ ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ.

೪.೧೨.ಅ ಶಾಲೆಯ ಸಮಸ್ಯೆಯನ್ನು ತೊಡೆದು ಹಾಕಲು ಸಮುದಾಯದ ಜನರಿಗೆ ಎಸ್.ಡಿ.ಎಮ್.ಸಿ. ಸಹಾಯಕಾರಿಗಯಾಗಿದೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಯ ಸಮಸ್ಯೆಯನ್ನು ತೊಡೆದು ಹಾಕಲು ಸಮುದಾಯದ ಜನರಿಗೆ ಎಸ್.ಡಿ.ಎಮ್.ಸಿ. ಸಹಾಯಕಾರಿಯಾಗಿದೆ ಎಂಬುದನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ ೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಯ ಸಮಸ್ಯೆಯನ್ನು ತೊಡೆದುಹಾಕಲು ಸಮುದಾಯದ ಜನರಿಗೆ ಎಸ್.ಡಿ.ಎಮ್.ಸಿ ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ.

೪.೧೩.ಅ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸಲು ಸಹಾಯಕಾರಿಯಾಗಿದೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯು ಸ್ಥಾಪನೆಯಿಂದ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸಲು ಸಹಾಯಕಾರಿಯಾಗಿದೆ ಎಂಬುದನ್ನು ತಿಳಿಸುತ್ತದೆ.

ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ ೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯ ಸ್ಥಾಪನೆಯಿಂದ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸಲು ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ.

೪.೧೪.ಅ ಹೌದಾದರೆ ಹೇಗೆ ಸಹಾಯಕಾರಿಯಾಗಿದೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಸುಧಾರಣೆಗೆ	–	–
೨.	ಶಾಲೆಗೆ ಬೇಕಾಗುವ ಬೋಧನೋಪಕರಣ ಖರೀದಿಸಲು ಮುಖ್ಯ ಗುರುಗಳಿಗೆ ಹೇಳುವದು.	೧೫	೭೫
೩.	ಸಮಯಕ್ಕೆ ಸರಿಯಾಗಿ ಮಕ್ಕಳು ಹಾಜರಾಗುವುದರಿಂದ	೨	೧೦
೪.	ಮೇಲಿನ ಎಲ್ಲವೂ	೩	೧೫
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಂ.ಸಿ.ಯು ಹೇಗೆ ಸಹಾಯಕಾರಿಯಾಗಿದೆ ಎಂಬುದನ್ನು ತಿಳಿದುಕೊಳ್ಳುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ (೨೦ ಜನ) ಪ್ರತಿಸ್ಪಂದಿಗಳಲ್ಲಿ (೧೫ ಜನರು) ಶೇ. ೭೫ ರಷ್ಟು ಪ್ರತಿಸ್ಪಂದಿಗಳು ಮಕ್ಕಳ ಹಾಜರಾತಿ ಸುಧಾರಣೆಗೆ, ೨ ಜನರು ಶೇ.೧೦ ರಷ್ಟು ಪ್ರತಿಸ್ಪಂದಿಗಳು ಶಾಲೆಗೆ ಬೋಧನೋಪಕರಣ ಖರೀದಿಸಲು, (೩ ಜನರು) ಶೇ.೧೫ ರಷ್ಟು ಪ್ರತಿಸ್ಪಂಧಿಗಳು ಮೇಲಿನ ಎಲ್ಲವುಗಳಿಂದಾಗಿ ಎಸ್.ಡಿ.ಎಮ್.ಸಿ. ಸಹಾಯಕಾರಿಯಾಗಿದೆ ಎಂಬುದನ್ನು ಸೂಚಿಸಿದ್ದಾರೆ.

೪.೧೫.ಅ ಎಸ್.ಡಿ.ಎಮ್.ಸಿ.ಯ ಸದಸ್ಯರಾಗಿ ಶಾಲೆಯ ವಾರ್ಷಿಕ ಕಾರ್ಯಚಟುವಟಿಕೆಯ ಯೋಜನೆ ರೂಪಿಸುವಲ್ಲಿ ನೀವು ಪಾಲ್ಗೊಳ್ಳುತ್ತೀರಾ ?

ಕ್ರ.ಸಂಖ್ಯೆ	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರು ಶಾಲೆಯ ವಾರ್ಷಿಕ ಕಾರ್ಯಚಟುವಟಿಕೆಯ ಯೋಜನೆ ರೂಪಿಸುವಲ್ಲಿ ಪಾಲ್ಗೊಳ್ಳುತ್ತಾರೆ ಎಂಬುದನ್ನು ತಿಳಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ. ೧೦೦ ರಷ್ಟು ಸದಸ್ಯರು ಶಾಲೆಯ ವಾರ್ಷಿಕ ಕಾರ್ಯಚಟುವಟಿಕೆಯ ಯೋಜನೆ ರೂಪಿಸುವಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಸೂಚಿಸಿದ್ದಾರೆ.

೪.೧೩.ಅ ಹೌದಾದರೆ, ಹೇಗೆ ಪಾಲ್ಗೊಳ್ಳುತ್ತೀರಿ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಎಸ್.ಡಿ.ಎಮ್.ಸಿ. ಸಭೆಯಲ್ಲಿ ಭಾಗವಹಿಸುವುದರ ಮೂಲಕ.	–	–
೨.	ಸ್ಥಾನಿಕ ಬಿಡುವು ನಿರ್ಧರಿಸಲು ಮಾರ್ಗದರ್ಶನ.	–	–
೩.	ಶಾಲೆಗೆ ಬೇಕಾಗುವ ಭೌತಿಕ ಸೌಲಭ್ಯ ಸಲುವಾಗಿ	–	–
೪.	ಮೇಲಿನ ಎಲ್ಲವೂ ಸರಿ.	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಂ.ಸಿ. ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಹೇಗೆ ಪಾಲ್ಗೊಳ್ಳುತಾರೆ ಎಂದು ತಿಳಿಸುತ್ತದೆ. ಸಂಶೋಧಕರು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂಧಿಗಳಲ್ಲಿ ಅವರಲ್ಲಿ ೨೦ ಜನ ಪ್ರತಿಸ್ಪಂಧಿಗಳು ಮೇಲಿನ ಎಲ್ಲವೂ ಸರಿ ಎಂದು ಪ್ರತಿಕ್ರಿಯಿಸಿದ್ದಾರೆ.

೪.೧೭.ಅ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಮೂಲಕ ರಾಜಕೀಯ ನಾಯಕರು ಪ್ರವೇಶಿಸುವಂತಾಗಿದೆಯೇ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	–	–
೨.	ಇಲ್ಲ	೨೦	೧೦೦
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಮೂಲಕ ರಾಜಕೀಯ ನಾಯಕರು ಪ್ರವೇಶಿಸುವಂತಾಗಿದೆಯೇ ? ಎಂಬುದನ್ನು ತಿಳಿಸುತ್ತದೆ.

ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಪ್ರತಿಸ್ಪಂದಿಗಳು ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ. ೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯ ಮೂಲಕ ರಾಜಕೀಯ ನಾಯಕರು ಪ್ರವೇಶಿಸುವುದಿಲ್ಲ ಎಂದು ಸೂಚಿಸಿದ್ದಾರೆ.

೪.೧೮.ಅ ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಇದೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಇದೆ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ. ೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಇದೆ ಎಂದು ಸೂಚಿಸಿದ್ದಾರೆ.

೪.೧೯.ಅ ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಏತಕ್ಕೆ ಬೇಕು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲೆಯ ಸುಧಾರಣೆಗೆ	೧೫	೭೫
೨.	ಶಾಲೆಗೆ ಅನುದಾನ ಕಲ್ಪಿಸಲು	೫	೨೫
೩.	ಶಾಲೆ ಹಾಳು ಮಾಡಲು	–	–
೪.	ಮೇಲಿನ ಎಲ್ಲವೂ ತಪ್ಪು	–	–
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಏತಕ್ಕೆ ಬೇಕು ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ೧೫ ಜನರು (ಶೇ. ೭೫% ರಷ್ಟು) ಪ್ರತಿಸ್ಪಂಧಿಗಳು ಶಾಲೆಯ ಸುಧಾರಣೆಗೆ ಅವಶ್ಯವಿದೆ ಎಂದು, ೫ ಜನರು ಶೇ. ೨೫ ರಷ್ಟು ಪ್ರತಿಸ್ಪಂಧಿಗಳು ಶಾಲೆಗೆ ಅನುದಾನ ಕಲ್ಪಿಸಲು ರಾಜಕೀಯ ನಾಯಕರ ಅವಶ್ಯಕತೆ ಇದೆ ಎಂಬುದನ್ನು ಸೂಚಿಸಿದ್ದಾರೆ.

೪.೨೦.ಅ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ ಸ್ಥಾಪನೆಯಿಂದ ಶಾಲಾ ಶಿಕ್ಷಣದಲ್ಲಿ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಿದೆಯೇ ?

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಶಿಕ್ಷಣದಲ್ಲಿ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಿದೆಯೇ ? ಎಂಬುದನ್ನು ತಿಳಿಯುವದಾಗಿದೆ.

ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ. ೧೦೦ ರಷ್ಟು ಪ್ರತಿಸ್ಪಂದಿಗಳು

ಎಸ್.ಡಿ.ಎಮ್.ಸಿ.ಯ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವು ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಿದೆ ಎಂದು ಸೂಚಿಸಿದ್ದಾರೆ.

೪.೨೧.ಅ ಹೌದಾದರೆ ಹೇಗೆ ಪಾಲ್ಗೊಳ್ಳುತ್ತಾರೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲಾ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಲು ಸಭೆ ಸೇರುವುದು	–	–
೨.	ಶಾಲಾ ವಾರ್ಷಿಕ ಕ್ರೀಡಾಕೂಟದ ಸಮಾರಂಭಗಳಲ್ಲಿ ಭಾಗವಹಿಸುವುದು.	–	–
೩.	ಶಾಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು.	೨೦	೧೦೦
೪.	ಮೇಲಿನ ಎಲ್ಲವೂ ಸರಿ.	–	–
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಸಮುದಾಯವು ಶಾಲಾ ಶಿಕ್ಷಣದಲ್ಲಿ ಹೇಗೆ ಪಾಲ್ಗೊಳ್ಳುತ್ತದೆ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ಶೇ. ೧೦೦ ರಷ್ಟು ಪ್ರತಿಸ್ಪಂಧಿಗಳೂ ಶಾಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವದರ ಮೂಲಕ ಭಾಗವಹಿಸುತ್ತಾರೆ ಎಂದು ಸೂಚಿಸಿದ್ದಾರೆ.

೪.೨೨.ಅ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಮುಂದುವರಿಯಬೇಕೇ ?

ಕ್ರ.ಸಂಖ್ಯೆ	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	**೧೦೦**

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಮುಂದುವರಿಯಬೇಕೆ ? ಎಂಬುದನ್ನು ಸೂಚಿಸುತ್ತದೆ. ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಪ್ರತಿಸ್ಪಂದಿಗಳು ಹೌದು

ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ. ೧೦೦ ರಷ್ಟು ಪ್ರತಿಸ್ಪಂಧಿಗಳು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ ಮುಂದುವರಿಯಬೇಕು ಎಂಬುದನ್ನು ಸೂಚಿಸಿದ್ದಾರೆ.

೪.೨೩.ಅ ಎಸ್.ಡಿ.ಎಂ.ಸಿ ವ್ಯವಸ್ಥೆಯ ಲೋಪ-ದೋಷಗಳೇನು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಿಕ್ಷಕರಿಗೆ ಮೇಲಿಂದ ಮೇಲೆ ಕಿರುಕುಳ	–	–
೨.	ಕ್ಷುಲ್ಲಕ ವಿಷಯದ ಸಲುವಾಗಿ ಪದೇ ಪದೇ ಶಾಲೆಗೆ ಭೇಟಿ	–	–
೩.	ಧನಾತ್ಮಕ ಮನೋಭಾವನೆಯ ಕೊರತೆ	–	–
೪.	ಮೇಲಿನ ಎಲ್ಲವೂ ಸರಿ.	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಯ ಲೋಪ-ದೋಷಗಳನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂಧಿಗಳಲ್ಲಿ ಅಂದರೆ ಶೇ.೧೦೦ ರಷ್ಟು ಪ್ರತಿಸ್ಪಂಧಿಗಳು ಮೇಲಿನ ೪ ಅಂಶಗಳ ಎಸ್.ಡಿ.ಎಮ್.ಸಿ.ಯ ಲೋಪ-ದೋಷಗಳು ಇವೆ ಎಂದು ಸೂಚಿಸಿದ್ದಾರೆ.

೪.೨೪.ಅ ಎಸ್.ಡಿ.ಎಮ್.ಸಿ.ಯಲ್ಲಿರುವ ಲೋಪ-ದೋಷಗಳನ್ನು ಹೇಗೆ ತೊಡೆದು ಹಾಕಬೇಕು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಎಸ್.ಡಿ.ಎಮ್.ಸಿ. ಸದಸ್ಯರಿಗೆ ಅದರ ನಿಯಮ ತಿಳಿಸುವುದು.	–	–
೨.	ಸಿ.ಆರ್.ಸಿ. ಹಂತದಲ್ಲಿ ಸದಸ್ಯರಿಗೆ ತರಬೇತಿ ನೀಡುವುದು.	–	–
೩.	ಅಗತ್ಯ ಸಂದರ್ಭದಲ್ಲಿ ಮುಖ್ಯಗುರುಗಳ ಮಾರ್ಗದರ್ಶನ	–	–
೪.	ಮೇಲಿನ ಎಲ್ಲವೂ ಸರಿ.	೨೦	೧೦೦
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಲೋಪ-ದೋಷಗಳನ್ನು ತೊಡೆದು ಹಾಕುವ ಕ್ರಮಗಳನ್ನು ಸೂಚಿಸುತ್ತದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಅಂದರೆ ಶೇ.೧೦೦ ರಷ್ಟು ಈ ಮೇಲಿನ ನಾಲ್ಕು ಅಂಶಗಳ ಮೂಲಕ ತೊಡೆದು ಹಾಕಬಹುದು ಎಂದು ಸೂಚಿಸಿದ್ದಾರೆ.

೪.೨.ಅ ಸಂಶೋಧನೆಯಿಂದ ಕಂಡು ಬಂದ ಅಂಶಗಳು :

ಎಂ.ಫಿಲ್. ಪದವಿ ಅಧ್ಯಯನಕ್ಕೆಂದು ಇಂಡಿ ತಾಲೂಕಿನ ಚಡಚಣ ವಲಯದಲ್ಲಿ ಬರುವ ೨೦ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, "ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ. ಒಂದು ಅಧ್ಯಯನ" ಎಂಬ ಶೀರ್ಷಿಕೆ ಅಡಿಯಲ್ಲಿ ಕೈಕೊಂಡ ಕಿರು ಸಂಶೋಧನೆಯಿಂದ ಕಂಡು ಬಂದಂಥ ವಿಷಯಗಳು ಈ ಕೆಳಗಿನಂತಿವೆ.

೧. ಚಡಚಣ ವಲಯದಲ್ಲಿರುವ ಸಮುದಾಯದ ಜನರಿಗೆ ಎಸ್.ಡಿ.ಎಮ್.ಸಿ. ಎಂದರೇನು ? ಎಂಬುದರ ಬಗ್ಗೆ ಸಂಪೂರ್ಣವಾಗಿ ಮನವರಿಕೆಯಾಗಿದೆ.

೨. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯನ್ನು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿಗಾಗಿ, ಶಿಕ್ಷಕರ ಮೇಲೆ ನಿಯಂತ್ರಣ ತರಲು, ಮಕ್ಕಳ ಶೈಕ್ಷಣಿಕ ಸುಧಾರಣೆ ತರಲು ಸ್ಥಾಪನೆಯಾಗಿದೆ ಎಂದು ತಿಳಿದು ಬಂದಿದೆ.

೩. ಈ ವಲಯದ ಗ್ರಾಮದ ಶಾಲೆಗಳಲ್ಲಿ ಎರಡು ವರ್ಷಗಳಿಂದ ಎಸ್.ಡಿ.ಎಮ್.ಸಿ. ಸ್ಥಾಪನೆಯಾಗಿದೆ ಎಂದು ಜನರು ಅಭಿಪ್ರಾಯಪಟ್ಟಿದ್ದಾರೆ.

೪. ಈ ವಲಯದ ಶೇ.೨೫ ರಷ್ಟು ಸದಸ್ಯರು ೮ ವರ್ಷಗಳಿಂದ, ಶೇ.೨೫ ರಷ್ಟು ೩ ವರ್ಷಗಳಿಂದ, ಶೇ.೩೦ ರಷ್ಟು ಸದಸ್ಯರು ಒಂದು ವರ್ಷದಿಂದ ಎಸ್.ಡಿ.ಎಮ್.ಸಿ. ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

೫. ಈ ವಲಯದಲ್ಲಿ ಪ್ರತಿಯೊಂದು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಅವಶ್ಯಕತೆ ಇದೆ ಎಂಬುದು ತಿಳಿದು ಬಂದಿದೆ.

೬. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆ ಎಂದು ತಿಳಿದು ಬರುತ್ತದೆ.

೭. ಈ ವಲಯದ ಎಸ್.ಡಿ.ಎಮ್.ಸಿ. ಸದಸ್ಯರುಗಳಿಗೆ ಶೇ.೨೦ ಶಾಲಾ ಶಿಕ್ಷಕರು, ಶೇ.೮೦ ರಷ್ಟು ಶಾಲೆಗೆ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪಾಲಕರು ನೇಮಕ ಮಾಡುತ್ತಾರೆ.

೮. ಸಮುದಾಯದ ಜನರು ಎಸ್.ಡಿ.ಎಮ್.ಸಿ.ಯ ಬಗ್ಗೆ ಶೇ.೭೫ ಸದಸ್ಯರು ಶಾಲಾ ಶಿಕ್ಷಕರಿಂದ, ಶೇ.೨೫ ಸದಸ್ಯರು ಸರಕಾರಿ ಜಾಹಿರಾತುಗಳಿಂದ ಎಸ್.ಡಿ.ಎಮ್.ಸಿ.ಯ ಬಗ್ಗೆ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

೯. ಎಸ್.ಡಿ.ಎಮ್.ಸಿ.ಯ ಸದಸ್ಯರು ಶಾಲೆಯ ಸಮಸ್ಯೆಗಳನ್ನು ಶೇ.೨೫ರಷ್ಟು ತಕ್ಕ ಮಟ್ಟಿಗೆ ಗುರುತಿಸುತ್ತಾರೆ. ಶೇ.೧೫ ಭಾಗಶಃ ಗುರುತಿಸುತ್ತಾರೆ. ಶೇ. ೧೦ ಗುರುತಿಸುವುದಿಲ್ಲ, ಶೇ ೫೦ ರಷ್ಟು ತಪ್ಪು ಕಂಡು ಹಿಡಿಯುತ್ತಾರೆ ಎಂಬುದು ಕಂಡು ಬರುತ್ತದೆ.

೧೦. ಸಮುದಾಯದ ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಶೇ.೧೦೦ ರಷ್ಟು ಸದಸ್ಯರು ಪಾಲ್ಗೊಳ್ಳುತ್ತಾರೆ.

೧೧ ಸಮುದಾಯದ ಜನರನ್ನು ಶಾಲೆಯಲ್ಲಿ ನಡೆಯುವ ಕಾರ್ಯಚಟುವಟಿಕೆಯಲ್ಲಿ, ಶೇ.೨೫ ಜನರು ಎಸ್.ಡಿ.ಎಮ್.ಸಿ. ಸಭೆಯಲ್ಲಿ ಭಾಗವಹಿಸುತ್ತಾರೆ. ಶೇ.೨೦ ಜನರು ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು, ಶೇ.೧೦ ಇತರ ಸಮಾರಂಭಗಳಲ್ಲಿ, ಶೇ.೪೫ ಜನರು ಈ ನಾಲ್ಕು ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವದು ಕಂಡು ಬರುತ್ತದೆ

೧೨ ಶಾಲೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ತೊಡೆದುಹಾಕಲು ಎಸ್.ಡಿ.ಎಮ್.ಸಿ.ಯು ಸಮುದಾಯದ ಜನರಿಗೆ ಸಹಾಯಕಾರಿಯಾಗಿದೆ.

೧೩ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಇದು ಸಹಾಯಕಾರಿಯಾಗಿದೆ ಎಂದು ತಿಳಿದುಬಂದಿದೆ.

೧೪. ಎಸ್.ಡಿ.ಎಮ್.ಸಿ.ಯು ಶೇ.೧೫ ಮಕ್ಕಳ ಹಾಜರಾತಿ ಹೆಚ್ಚಿಸಲು ಶೇ.೧೦ರಷ್ಟು ಶಾಲೆಗೆ ಸಮಯಕ್ಕೆ ಹಾಜರಾಗಲು, ಶೇ.೧೫ ಮೇಲಿನ ಎಲ್ಲ ಅಂಶಗಳಿಂದ ಸಹಾಯಕಾರಿಯಾಗಿದೆ ಎಂದು ಹೇಳಬಹುದು.

೧೫ ಎಸ್.ಡಿ.ಎಮ್.ಸಿ.ಯ ಸದಸ್ಯರಾಗಿ ಶಾಲೆಯ ವಾರ್ಷಿಕ ಕಾರ್ಯಯೋಜನೆ ರೂಪಿಸಲು ಶೇ.೧೦೦ ಸದಸ್ಯರು ಭಾಗವಹಿಸುತ್ತಾರೆ ಎಂಬುದು ತಿಳಿದು ಬರುತ್ತದೆ.

೧೬. ಎಸ್.ಡಿ.ಎಮ್.ಸಿ. ಮೂಲಕ ರಾಜಕೀಯ ನಾಯಕರು ಶಾಲೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ತಿಳಿದು ಬರುತ್ತದೆ.

೧೭. ಶಾಲೆಗಳಲ್ಲಿ ರಾಜಕೀಯ ನಾಯಕರು ಶಾಲೆಯ ಸುಧಾರಣೆಗೆ ಮತ್ತು ಶಾಲೆಗೆ ಅನುದಾನ ಕಲ್ಪಿಸಲು ಅವರ ಅವಶ್ಯಕತೆ ಇದೆ ಎಂಬುದು ತಿಳಿದು ಬರುತ್ತದೆ.

೧೮ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶೇ.೧೦೦ ಸಮುದಾಯದ ಸದಸ್ಯರು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆ ಎಂಬುದು ತಿಳಿದು ಬರುತ್ತದೆ.

೧೯. ಶಾಲೆಗಳಲ್ಲಿ ಸಮುದಾಯದ ಸದಸ್ಯರು ಶಾಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

೨೦. ಚಡಚಣ ವಲಯದ ಪ್ರತಿಯೊಂದು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸಕಾಲದಲ್ಲಿ ಮುಂದುವರಿಯಬೇಕೆಂಬುದು ತಿಳಿದುಬರುತ್ತದೆ.

೪.೧.ಬ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆಯೇ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆಯೇ ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ. ೧೦೦%ರಷ್ಟು ಪ್ರತಿಸ್ಪಂದಿಗಳು ಎಸ್.ಡಿ.ಎಂ.ಸಿ.ಯು ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

೪.೨.ಬ ಹೌದಾದರೆ, ಹೇಗೆ ಸಹಾಯಕವಾಗಿದೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲೆಗೆ ವಿವಿಧ ರೀತಿಯ ಸೌಲಭ್ಯ ಕೊಡಿಸಲು.	೧೭	೮೫
೨.	ಸೂಕ್ತವಾದ ರೀತಿಯಲ್ಲಿ ಶಾಲೆ ಮುಂದುವರಿಯಲು	–	–
೩.	ವಿದ್ಯಾರ್ಥಿಗಳ ದಾಖಲಾತಿ ಹಾಜರಾತಿ ಸುಧಾರಿಸಲು	೩	೧೫
೪.	ಮೇಲಿನ ಎಲ್ಲವೂ ಸರಿ.	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯು ಶಾಲೆ ಸುಧಾರಣೆಗೆ ಹೇಗೆ ಸಹಾಯಕಾರಿಯಾಗಿದೆ ಎಂಬುದನ್ನು ತಿಳಿಯುವದಾಗಿದೆ. ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ

೨೦ ಪ್ರತಿಸ್ಪಂದಿಗಳಲ್ಲಿ ೧೭ ಜನ (ಶೇ.೮೫ರಷ್ಟು) ಶಾಲೆಗೆ ವಿವಿಧ ರೀತಿಯ ಸೌಲಭ್ಯ ಕೊಡಿಸಲು, ೩ ಜನ (ಶೇ.೧೫ರಷ್ಟು) ಇದು ವಿದ್ಯಾರ್ಥಿಗಳ ದಾಖಲಾತಿ ಸುಧಾರಿಸಲು ಸಹಾಯಕಾರಿಯಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

೪.೩.ಬ ಇಲ್ಲವಾದರೆ, ಏಕಿಲ್ಲ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಿಕ್ಷಕರಿಗೆ ಕೆಲಸದ ಹೊರೆಯಾಗಿದೆ	೧೭	೮೫
೨.	ಸಮಯದ ಅಭಾವ	–	–
೩.	ಸಹ ಶಿಕ್ಷಕರಿಗೆ ಕಿರುಕುಳ	೩	೧೫
೪.	ಮೇಲಿನ ಎಲ್ಲವೂ ತಪ್ಪು	–	–
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಶಾಲೆಯ ಸುಧಾರಣೆಗೆ ಏಕೆ ಸಹಾಯಕಾರಿಯಾಗಿಲ್ಲ ಎಂಬುದನ್ನು ತಿಳಿಯುವದಾಗಿದೆ. ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ಜನ ಪ್ರತಿಸ್ಪಂದಿಗಳಲ್ಲಿ ೧೭ ಜನ (ಶೇ.೮೫ರಷ್ಟು) ಶಿಕ್ಷಕರಿಗೆ ಇದೊಂದು ಹೊರೆಯಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ೩ ಜನ (ಶೇ.೧೫ರಷ್ಟು) ಶಿಕ್ಷಕರಿಗೆ ಸದಸ್ಯರಿಂದ ಕಿರುಕುಳ ಉಂಟಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

೪.೪.ಬ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯದ ಜನರ ಸಹಕಾರ ದೊರೆಯುತ್ತಿದೆಯೇ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯದ ಜನರ ಸಹಕಾರ ದೊರೆಯುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಅಂದರೆ ಶೇ.೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆ ಸುದಾರಣೆಗೆ ಸಮುದಾಯದ ಸಹಕಾರ ದೊರೆಯುತ್ತದೆ ಎಂಬುದನ್ನು ಸೂಚಿಸಿದ್ದಾರೆ.

೪.೫.೬ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸದಸ್ಯರ ಸಹಕಾರ ಪಡೆಯಲು ಯಾವ ಕ್ರಮಗಳಿರಬೇಕು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಸಭೆಗೆ ತಪ್ಪದೇ ಸಮಯಕ್ಕೆ ಸರಿಯಾಗಿ ಹಾಜರಾಗುವುದು	–	–
೨.	ಸಭೆಗೆ ಹಾಜರಾಗದೇ ಇರುವುದು	–	–
೩.	ಪದೇ ಪದೇ ಸದಸ್ಯರಿಗೆ ತರಬೇತಿ ನೀಡುವುದು	–	–
೪.	ಮೇಲಿನ ಎಲ್ಲವೂ ತಪ್ಪು	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರ ಸಹಕಾರ ಪಡೆಯಲು ಯಾವ ಕ್ರಮಗಳಿರಬೇಕು ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ, ೪ ಜನರು (ಶೇ.೨೦ರಷ್ಟು) ಸದಸ್ಯರನ್ನು ತಪ್ಪದೇ ಎಸ್.ಡಿ.ಎಮ್.ಸಿ. ಸಭೆಗೆ ಹಾಜರಾಗುವಂತೆ ಮಾಡುವದರ ಮೂಲಕ, ೪ ಜನರು (ಶೇ.೨೦ರಷ್ಟು) ಸದಸ್ಯರು ಸಭೆಗೆ ಹಾಜರಾಗದಿದ್ದರೂ, ಸಹಕಾರ ಪಡೆಯಬಹುದೆಂದು, ೧೨ ಜನರು (ಶೇ.೬೦ರಷ್ಟು) ಪ್ರತಿಸ್ಪಂದಿಗಳು ಮೇಲಿನ ಎಲ್ಲ ಕ್ರಮಗಳಿಂದ ಸಹಕಾರ ಪಡೆಯಬಹುದೆಂದು ಸೂಚಿಸಿದ್ದಾರೆ.

೪.೬.ಬ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ನಿಮ್ಮ ಶಾಲೆಯ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿಯಾಗಿದೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿಯಾಗಿದೆಯೇ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಅಂದರೆ, ಶೇ.೧೦೦ ರಷ್ಟು ಪ್ರತಿಸ್ಪಂದಿಗಳು ಇದು ಶಾಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ.

೪.೭.ಬ ಹೌದಾದರೆ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ನಿಮ್ಮ ಶಾಲೆಯ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಹೇಗೆ ಸಹಾಯಕಾರಿಯಾಗಿದೆ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಎಸ್.ಡಿ.ಎಮ್.ಸಿ. ಸಭೆಯಲ್ಲಿ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯಿಂದ	–	–
೨.	ದಾಖಲಾತಿ ಹಾಜರಾತಿ ಸುಧಾರಣೆಗೆ ಕ್ರಮ ತೆಗೆದುಕೊಳ್ಳುವುದರಿಂದ	–	–
೩.	ಶಾಲೆಗೆ ಮೇಲಿಂದ ಮೇಲೆ ಭೇಟಿ ನೀಡುವುದರಿಂದ	–	–
೪.	ಮೇಲಿನ ಎಲ್ಲವೂ ಸರಿ	೨೦	೧೦೦
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯು ಶಾಲೆಯ ಮಕ್ಕಳಿಗೆ ಹೇಗೆ ಗುಣಾತ್ಮಕ ಶಿಕ್ಷಣ ನೀಡಲು ಹೇಗೆ ಸಹಾಯಕಾರಿಯಾಗಿದೆ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ೨೦ ಜನ ಪ್ರತಿಸ್ಪಂದಿಗಳನ್ನು ಮಾಡಿಕೊಂಡಾಗ. ಇವರಲ್ಲಿ ೧೯ಜನ (ಶೇ.೯೫ರಷ್ಟು) ಪ್ರತಿಸ್ಪಂದಿಗಳು ಮೇಲಿನ ಎಲ್ಲ ಕ್ರಮಗಳಿಂದ ಸಹಾಯಕಾರಿಯಾಗಿದೆ ಎಂದು ಸೂಚಿಸಿದ್ದಾರೆ. ಒಬ್ಬ (ಶೇ.೫ರಷ್ಟು) ಪ್ರತಿಸ್ಪಂದಿ ಶಾಲಾ ಸಭೆಗಳಲ್ಲಿ ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳುವದರಿಂದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿಯಾಗಿದೆ ಎಂಬುದನ್ನು ಸೂಚಿಸಿದ್ದಾರೆ.

೪.೮.೬ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಯ ದೈನಂದಿನ ಕಾರ್ಯ ನಿರ್ವಹಿಸಲು ತೊಂದರೆಯಾಗುತ್ತಿದೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	–	–
೨.	ಇಲ್ಲ	೨೦	೧೦೦
		ಒಟ್ಟು	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಯ ದೈನಂದಿನ ಕಾರ್ಯ ನಿರ್ವಹಿಸಲು ತೊಂದರೆಯಾಗುತ್ತಿದೆಯೇ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ ೨೦ ಜನರು ಇಲ್ಲ ಎಂದು ಸೂಚಿಸಿದ್ದಾರೆ. ಆದ್ದರಿಂದ ಶೇ.೧೦೦ರಷ್ಟು ಪ್ರತಿಸ್ಪಂದಿಗಳು ದೈನಂದಿನ ಕಾರ್ಯ ನಿರ್ವಹಿಸಲು ತೊಂದರೆಯಾಗಿಲ್ಲ ಎಂದು ಸಂಭೋಧಿಸಿದ್ದಾರೆ.

೪.೯.ಬ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ದೈನಂದಿನ ಕಾರ್ಯ ನಿರ್ವಹಿಸಲು ಹೇಗೆ ತೊಂದರೆಯಾಗಿದೆ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಸಮುದಾಯದ ಒತ್ತಡ	೦೨	೧೦
೨.	ಸದಸ್ಯರು ಶಾಲೆಗೆ ಪದೇ ಪದೇ ಭೇಟಿ ನೀಡುವುದರಿಂದ	೦೩	೧೫
೩.	ವಯುಕ್ತಿಕ ಕಾರಣ ತಂದು ಶಾಲೆಯಲ್ಲಿ ಜಗಳ ಮಾಡುವುದು	–	–
೪.	ಮೇಲಿನ ಎಲ್ಲವೂ ಸರಿ	೧೫	೭೫
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ದೈನಂದಿನ ಕಾರ್ಯ ನಿರ್ವಹಿಸಲು ಹೇಗೆ ತೊಂದರೆಯಾಗಿದೆ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ, ಎರಡು ಜನರು (ಶೇ.೧೦ರಷ್ಟು) ಸಮುದಾಯದ ಒತ್ತಡ, ೩ ಜನರು (ಶೇ.೧೫ರಷ್ಟು) ಸದಸ್ಯರು ಶಾಲೆಗೆ ಪದೇ ಪದೇ ಭೇಟಿ, ೧೫ ಜನ ಪ್ರತಿಸ್ಪಂದಿಗಳು (ಶೇ.೭೫ರಷ್ಟು) ಈ ಮೇಲಿನ ಎಲ್ಲ ಕಾರಣಗಳಿಂದ ತೊಂದರೆಯಾಗುತ್ತದೆ ಎಂಬುದನ್ನು ಸೂಚಿಸಿದ್ದಾರೆ.

೪.೧೦.ಬ ಶಾಲೆಯಲ್ಲಿ ನಡೆಯುವ ಕಾರ್ಯಚಟುವಟಿಕೆಯ ಬಗ್ಗೆ ಸಮುದಾಯದ ಸದಸ್ಯರಿಗೆ ತಿಳವಳಿಕೆ ನೀಡಿದ್ದೀರಾ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಯ ಕಾರ್ಯಚಟುವಟಿಕೆಯ ಬಗ್ಗೆ ಎಸ್.ಡಿ.ಎಮ್.ಸಿ. ಸದಸ್ಯರಿಗೆ ತಿಳುವಳಿಕೆ ನೀಡಿದ್ದೀರಾ ಎಂಬುದನ್ನು ತಿಳಿದುಕೊಳ್ಳುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ.೧೦೦ರಷ್ಟು ಪ್ರತಿಸ್ಪಂದಿಗಳು ಶಾಲೆಯಲ್ಲಿ ನಡೆಯುವ ಕಾರ್ಯ ಚಟುವಟಿಕೆಯ ಬಗ್ಗೆ ತಿಳುವಳಿಕೆ ನೀಡಿದ್ದಾರೆ ಎಂದು ಸೂಚಿಸಿದ್ದಾರೆ.

೪.೧೧.ಬ ಶಾಲೆಯಲ್ಲಿ ನಡೆಯುವ ಕಾರ್ಯಚಟುವಟಿಕೆಯಲ್ಲಿ ಎಸ್.ಡಿ.ಎಮ್.ಸಿ. ಸದಸ್ಯರು ಭಾಗವಹಿಸುತ್ತಾರೆಯೇ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಯ ಕಾರ್ಯ ಚಟುವಟಿಕೆಯಲ್ಲಿ ಎಸ್.ಡಿ.ಎಮ್.ಸಿ. ಸದಸ್ಯರು ಭಾಗವಹಿಸುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಶಿಕ್ಷಕರು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ.೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಯಲ್ಲಿ ನಡೆಯುವ ಕಾರ್ಯಚಟುವಟಿಕೆಯಲ್ಲಿ ಎಸ್.ಡಿ.ಎಮ್.ಸಿ. ಸದಸ್ಯರು ಭಾಗವಹಿಸುತ್ತಾರೆ ಎಂದು ಸೂಚಿಸಿದ್ದಾರೆ.

೪.೧೨.ಬ ಇಲ್ಲವಾದಲ್ಲಿ, ಕಾರಣ ಕೊಡಿ.

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ದೈನಂದಿನ ಕೆಲಸ	೫	೨೫
೨.	ಅನಕ್ಷರಸ್ಥರು	೪	೨೦
೩.	ಶಾಲೆಯ ಬಗ್ಗೆ ಕೀಳರಿಮೆ	೩	೧೫
೪.	ಮೇಲಿನ ಎಲ್ಲವೂ	೮	೪೦
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಏಕೆ ಭಾಗವಹಿಸುವುದಿಲ್ಲ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳಲ್ಲಿ, ೫ ಜನ (ಶೇ.೨೫ರಷ್ಟು) ದೈನಂದಿನ ಕೆಲಸ, ೪ ಜನ (ಶೇ.೨೦ರಷ್ಟು) ಅನಕ್ಷರಸ್ಥರು, ೩ ಜನ (ಶೇ.೧೫ರಷ್ಟು) ಶಾಲೆಯ ಬಗ್ಗೆ ಕೀಳರಿಮೆ, ೮ ಜನ (ಶೇ.೪೦ರಷ್ಟು) ಮೇಲಿನ ಎಲ್ಲ ಕಾರಣಗಳಿಂದ ಸದಸ್ಯರು ಶಾಲಾ ಕಾರ್ಯಚಟುವಟಿಕೆಯಲ್ಲಿ ಭಾಗವಹಿಸುವದಿಲ್ಲ ಎಂದು ಸೂಚಿಸಿದ್ದಾರೆ.

೪.೧೩.ಬ ಶಾಲೆಯ ಚಟುವಟಿಕೆಯ ಬಗ್ಗೆ ಎಸ್.ಡಿ.ಎಮ್.ಸಿ. ಸದಸ್ಯರು ಸಲಹೆ ನೀಡುತ್ತಾರೆಯೇ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯ ಬಗ್ಗೆ ಸಲಹೆ ನೀಡುತ್ತಾರೆಯೇ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆ ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಅಂದರೆ ಶೇ.೧೦೦ರಷ್ಟು ಪ್ರತಿಸ್ಪಂದಿಗಳು ಶಾಲೆಯ ಕಾರ್ಯಚಟುವಟಿಕೆಯ ಬಗ್ಗೆ ಎಸ್.ಡಿ.ಎಮ್.ಸಿ. ಸದಸ್ಯರು ಸಲಹೆ ನೀಡುತ್ತಾರೆ ಎಂದು ಸಂಬೋಧಿಸಿದ್ದಾರೆ.

೪.೧೪.ಬ ಹೌದಾದರೆ ಸಲಹೆಗಳಾವವು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಬಿಸಿ ಊಟದ ಅನುಷ್ಠಾನ ಸರಿಯಾಗಿರಬೇಕು	–	–
೨.	ಸ್ವಚ್ಛತೆ ಕಾಪಾಡುವುದು	–	–
೩.	ಸರಕಾರದ ಸೌಲಭ್ಯದ ಮಾಹಿತಿ	–	–
೪.	ಮೇಲಿನ ಎಲ್ಲವೂ ಸರಿ	೨೦	೧೦೦
	ಒಟ್ಟು	೨೦	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸದಸ್ಯರು ಶಾಲೆಯ ಕಾರ್ಯ ಚಟುವಟಿಕೆಗಾಗಿ ಯಾವ ಸಲಹೆಗಳನ್ನು ನೀಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ, ಶೇ೧೦೦ರಷ್ಟು ಸದಸ್ಯರು ಈ ಮೇಲಿನ ಎಲ್ಲ ಸಲಹೆಗಳನ್ನು ನೀಡುತ್ತಾರೆ ಎಂದು ಸೂಚಿಸಿದ್ದಾರೆ.

೪.೧೫.ಬ ಎಸ್.ಡಿ.ಎಮ್.ಸಿ. ಸಭೆಗಳಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸುತ್ತೀರಿ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಶಾಲೆ ಬಿಟ್ಟ ಮಕ್ಕಳ ಬಗ್ಗೆ	–	–
೨.	ಅನುದಾನದ ಅನುಮೋದನೆಯ ಬಗ್ಗೆ	–	–
೩.	ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು	–	–
೪.	ಮೇಲಿನ ಎಲ್ಲವೂ ಸರಿ	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ. ಸಭೆಯಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂಧಿಗಳು ಮೇಲಿನ ಎಲ್ಲವೂ ಸರಿ ಎಂದು ಪ್ರತಿಕ್ರಿಯಿಸಿದ್ದಾರೆ. ಆದ್ದರಿಂದ ಶೇ ೧೦೦ ರಷ್ಟು ಪ್ರತಿಸ್ಪಂಧಿಗಳು ಈ ಮೇಲಿನ ಎಲ್ಲ ವಿಷಯಗಳನ್ನು ಚರ್ಚಿಸಲಾಗುತ್ತದೆ ಎಂದು ಸೂಚಿಸಿದ್ದಾರೆ.

೪.೧೬.ಬ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯ ಮೂಲಕ ರಾಜಕೀಯ ನಾಯಕರ ಅನಾವಶ್ಯಕ ಒತ್ತಡಗಳು ಹೆಚ್ಚಾಗುತ್ತಿವೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	–	–
೨.	ಇಲ್ಲ	೨೦	೧೦೦
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ.ಯ ಮೂಲಕ ರಾಜಕೀಯ ನಾಯಕರ ಅನವಶ್ಯಕ ಒತ್ತಡಗಳು ಹೆಚ್ಚಾಗುತ್ತಿವೆಯೇ? ಎಂಬುದನ್ನು ತಿಳಿದುಕೊಳ್ಳುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ.೧೦೦ ರಷ್ಟು ಪ್ರತಿಸ್ಪಂದಿಗಳು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ.ಯ ಮೂಲಕ ರಾಜಕೀಯ ನಾಯಕರು ಅನವಶ್ಯಕ ಒತ್ತಡಗಳು ಹೆಚ್ಚಾಗುತ್ತಿಲ್ಲ ಎಂದು ಸೂಚಿಸಿದ್ದಾರೆ.

೪.೧೭.ಬ ಶಾಲೆಯಲ್ಲಿ ಎಸ್.ಡಿ.ಎಮ್.ಸಿ.ಯ ಸಭೆಗಳನ್ನು ವರ್ಷದಲ್ಲಿ ಎಷ್ಟುಸಲ ನಡೆಸುತ್ತೀರಿ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	೧ ರಿಂದ ೪ ಸಲ	೪	೨೦
೨.	೫ ರಿಂದ ೮ ಸಲ	೫	೨೫
೩.	ಅವಶ್ಯಕತೆಗೆ ತಕ್ಕಂತೆ ಹೆಚ್ಚಾಗಬಹುದು.	–	–
೪.	೯ ರಿಂದ ೧೨ ಸಲ	೧೧	೫೫
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಂ.ಸಿ.ಯ ಸಭೆಗಳನ್ನು ವರ್ಷದಲ್ಲಿ ಎಷ್ಟು ಸಲ ನಡೆಸುತ್ತೀರಿ ಎಂಬುದನ್ನು ತಿಳಿಯುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂಧಿಗಳಲ್ಲಿ ೪ ಜನ (ಶೇ ೨೦ ರಷ್ಟು) ೧ ರಿಂದ ನಾಲ್ಕು ಸಲ ೫ ಜನ (ಶೇ ೨೫ ರಷ್ಟು) ೧೧ ಜನ ೯ ರಿಂದ ೧೨ ಸಲ ಸಭೆಗಳನ್ನು ನಡೆಸಲಾಗುತ್ತದೆ ಎಂದು ಸೂಚಿಸಿದ್ದಾರೆ.

೨.೧೮.ಬ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯವು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯವು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆಯೇ? ಎಂಬುದನ್ನು ತಿಳಿದುಕೊಳ್ಳುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ ೧೦೦ ರಷ್ಟು ಪ್ರತಿಸ್ಪಂಧಿಗಳು ಸಮುದಾಯವು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆ ಎಂದು ಸೂಚಿಸಿದ್ದಾರೆ.

೪.೧೯.ಬ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ಸಹಭಾಗಿತ್ವಗೊಳಿಸಲು ಎಸ್.ಡಿ.ಎಮ್.ಸಿ. ಒಂದು ಸಾಧನವಾಗಿದೆಯೇ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವಗೊಳಿಸಲು ಎಸ್.ಡಿ.ಎಮ್.ಸಿ ಒಂದು ಸಾಧನವಾಗಿದೆಯೇ? ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಮದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ ೧೦೦ ರಷ್ಟು ಪ್ರತಿಸ್ಪಂಧಿಗಳು ಎಸ್.ಡಿ.ಎಮ್.ಸಿ. ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವಗೊಳಿಸಲು ಒಂದು ಸಾಧನವಾಗಿದೆ ಎಂದು ಸೂಚಿಸಿದ್ದಾರೆ.

೪.೨೦.ಬ ಶಾಲೆಗಳಲ್ಲಿ ಸಮುದಾಯ ಸಹಭಾಗಿತ್ವ ವ್ಯವಸ್ಥೆಯು, ಮುಂದುವರಿಯಬೇಕೆ ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಹೌದು	೨೦	೧೦೦
೨.	ಇಲ್ಲ	–	–
		ಒಟ್ಟು	೧೦೦

ಈ ಮೇಲಿನ ಕೋಷ್ಟಕವು ಶಾಲೆಗಳಲ್ಲಿ ಶಾಲೆಗಳಲ್ಲಿ ಸಮುದಾಯ ಸಹಭಾಗಿತ್ವ ವ್ಯವಸ್ಥೆಯು ಮುಂದುವರಿಯಬೇಕೆಂಬುದನ್ನು ತಿಳಿಸುವದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂದಿಗಳು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ. ಇದರಿಂದ ತಿಳಿದು ಬರುವದೇನೆಂದರೆ ಶೇ. ೧೦೦ ರಷ್ಟು ಪ್ರತಿಸ್ಪಂಧಿಗಳು ಶಿಕ್ಷಕರು ಈ ವ್ಯವಸ್ಥೆ ಮುಂದುವರಿಯಬೇಕೆಂದು ಸೂಚಿಸಿದ್ದಾರೆ.

೪.೨೧.ಬ ಬೇಡವೆಂದರೆ ಶಾಲೆ ಸುಧಾರಣೆ ಹೇಗೆ ಮಾಡಬೇಕು ?

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಸ್ಪಂದಿಗಳ ಸಂಖ್ಯೆ	ಶೇಕಡಾ
೧.	ಸದಸ್ಯರಿಗೆ ತಿಳಿವಳಿಕೆ ಮಾರ್ಗದರ್ಶನ	–	–
೨.	ಚಿಕ್ಕ ವಿಷಯಗಳ ಚರ್ಚೆಗೆ ಅವಕಾಶ ಕೊಡದೇ ಇರುವುದು	–	–
೩.	ಸರ್ವರೂ ಸಮಾನರು ಎಂಬ ಕಲ್ಪನೆ ಮೂಡಿಸುವುದು	–	–
೪.	ಮೇಲಿನ ಎಲ್ಲವೂ	೨೦	೧೦೦
	ಒಟ್ಟು	**೨೦**	**೧೦೦**

ಈ ಮೇಲಿನ ಕೋಷ್ಟಕವು ಎಸ್.ಡಿ.ಎಮ್.ಸಿ ಬೇಡವೆಂದರೆ, ಶಾಲೆ ಸುಧಾರಣೆ ಹೇಗೆ ಮಾಡಬೇಕೆಂಬುದನ್ನು ತಿಳಿದುಕೊಳ್ಳುವುದಾಗಿದೆ. ಸಂಶೋಧಕನು ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡ ೨೦ ಜನ ಪ್ರತಿಸ್ಪಂಧಿಗಳಲ್ಲಿ (೨೦ ಜನ) ಶೇ. ೧೦೦ ರಷ್ಟು ಪ್ರತಿಸ್ಪಂಧಿಗಳು ಮೇಲಿನ ಎಲ್ಲವೂ ಅಂಶಗಳಿಂದ ಶಾಲೆ ಸುಧಾರಣೆ ಮಾಡಬಹುದೆಂದು ಸೂಚಿಸಿದ್ದಾರೆ.

೪.೨.ಬ ಸಂಶೋಧನೆಯಿಂದ ಕಂಡು ಬಂದ ಅಂಶಗಳು :

೧. ಚಡಚಣ ವಲಯದಲ್ಲಿ ಬರುವ ೨೦ ಶಾಲಾ ಮುಖ್ಯಗುರುಗಳನ್ನು ಸಂದರ್ಶನ ಮಾಡಿದಾಗ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಸುಧಾರಣೆಗೆ ಸಹಾಯಕಾರಿಯಾಗಿದೆ ಎಂದು ತಿಳಿದುಬರುತ್ತದೆ.

೨. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಗೆ ವಿವಿಧ ರೀತಿಯ ಸೌಲಭ್ಯ ಕಲ್ಪಿಸಲು ವಿದ್ಯಾರ್ಥಿಗಳ ಹಾಜರಾತಿಯನ್ನು ಸುಧಾರಿಸಲು ಸಹಾಯಕಾರಿಯಾಗಿದೆ ಎಂದು ತಿಳಿದುಬರುತ್ತದೆ.

೩. ಶೇ ೮೫ ಶಾಲಾ ಶಿಕ್ಷಕರು ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಕೆಲಸದ ಹೊರೆ ಹೆಚ್ಚಾಗಿದೆ ಎಂದು ತಿಳಿದು ಬಂದಿದೆ.

೪. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆ ಸುಧಾರಣೆಗೆ ಸಮುದಾಯ ಜನರ ಸಹಕಾರ ಶೇ ೧೦೦ ರಷ್ಟು ಸಿಗುತ್ತದೆ ಎಂದು ತಿಳಿದು ಬರುತ್ತದೆ.

೫. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲಾ ಮಕ್ಕಳಿಗೆ ಶೇ ೧೦೦ ರಷ್ಟು ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿಯಾಗಿದೆ ಎಂದು ತಿಳಿದು ಬರುತ್ತದೆ.

೬. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಯ ದೈನಂದಿನ ಕಾರ್ಯನಿರ್ವಹಿಸಲು ಯಾವುದೇ ರೀತಿಯ ತೊಂದರೆಯಾಗುವದಿಲ್ಲ ಎಂದು ತಿಳಿದು ಬರುತ್ತದೆ.

೭. ಶಾಲೆಗಳಲ್ಲಿ ನಡೆಯುವ ಕಾರ್ಯ ಚಟುವಟಿಕೆಯ ಬಗ್ಗೆ ಶೇ ೧೦೦ ರಷ್ಟು ಶಾಲಾ ಶಿಕ್ಷಕರು ಸಮುದಾಯದ ಸದಸ್ಯರಿಗೆ ತಿಳುವಳಿಕೆ ನೀಡಿದ್ದಾರೆ ಎಂಬುದು ತಿಳಿದು ಬರುತ್ತದೆ.

೮. ಶಾಲೆಯ ಕಾರ್ಯಚಟುವಟಿಕೆಯ ಬಗ್ಗೆ ಎಸ್.ಡಿ.ಎಮ್.ಸಿ. ಯ ಸದಸ್ಯರು ಶೇ ೧೦೦ ರಷ್ಟು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಎಂಬುದು ತಿಳಿದು ಬರುತ್ತದೆ.

೯. ಎಸ್.ಡಿ.ಎಮ್.ಸಿ. ಸಭೆಗಳಲ್ಲಿ ಶಾಲೆ ಬಿಟ್ಟ ಮಕ್ಕಳ ಬಗ್ಗೆ ಅನುದಾನದ ಅನುಮೋದನೆ, ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳನ್ನು ಚರ್ಚಿಸಲಾಗುತ್ತದೆ.

೧೦. ಎಸ್.ಡಿ.ಎಮ್.ಸಿ. ಸದಸ್ಯರು ದೈನಂದಿನ ಕೆಲಸ, ಅನಕ್ಷರಸ್ಥರು, ಶಾಲೆಯ ಬಗ್ಗೆ ಕೀಳರಿಮೆಗಳ ಕಾರಣಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಭೆಗಳಲ್ಲಿ ಗೈರಾಗಿರುತ್ತಾರೆ.

೧೧. ಎಸ್.ಡಿ.ಎಮ್.ಸಿ.ಯ ಸದಸ್ಯರು ಮಧ್ಯಾಹ್ನದ ಬಿಸಿ ಊಟದ ಅನುಷ್ಠಾನ ಸರಿಯಾಗಿರಬೇಕು, ಸ್ವಚ್ಛತೆ ಕಾಪಾಡುವದು, ಸರಕಾರದ ಸೌಲಭ್ಯಗಳ ಬಗ್ಗೆ ಸಲಹೆಗಳನ್ನು ನೀಡುತ್ತಾರೆ ಎಂಬುದು ತಿಳಿದು ಬರುತ್ತದೆ.

೧೨. ಎಸ್.ಡಿ.ಎಮ್.ಸಿ.ಯ ಮೂಲಕ ರಾಜಕೀಯ ನಾಯಕರ ಅನಾವಶ್ಯಕ ಒತ್ತಡಗಳು ಶೇ ೧೦೦ ರಷ್ಟು ಇಲ್ಲ ಎಂದು ತಿಳಿದು ಬರುತ್ತದೆ.

೧೩. ಕೆಲವು ಸಂದರ್ಭಗಳ ಅನುಸಾರವಾಗಿ, ಸ್ವಜಾತಿಯ ಅಧ್ಯಕ್ಷರ ನೇಮಕ, ಶಾಲೆಯ ಚಿಕ್ಕವಿಷಯಗಳ ಅನಾವಶ್ಯಕ ಚರ್ಚೆ, ಮುಖ್ಯ ಗುರುಗಳ ಮೇಲೆ ಹರಿಹಾಯುವುದು ಅಂತಹ ಒತ್ತಡಗಳು ರಾಜಕೀಯ ನಾಯಕರು ಹೇರುತ್ತಾರೆ ಎಂಬುದು ತಿಳಿದು ಬರುತ್ತದೆ.

೧೪. ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಸಮುದಾಯವು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆ ಎಂದು ತಿಳಿದು ಬಂದಿದೆ.

೧೫. ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವಗೊಳಿಸಲು ಎಸ್.ಡಿ.ಎಮ್.ಸಿ. ಒಂದು ಸಾಧನವಾಗಿದೆ ಎಂದು ತಿಳಿದು ಬರುತ್ತದೆ.

೧೬. ಶಾಲೆಗಳು ಅಭಿವೃದ್ಧಿಯಾಗಬೇಕಾದರೆ ಶಾಲೆಗಳಲ್ಲಿ ಸಮುದಾಯ ಸಹಭಾಗಿತ್ವ ವ್ಯವಸ್ಥೆಯು ಮುಂದುರೆಯಬೇಕೆಂದು ಶೇ ೧೦೦ ಪ್ರತಿಸ್ಪಂದಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಈ ಮೇಲಿನಂತೆ ಸಂಶೋಧನೆಯಿಂದ ಕಂಡುಬಂದ ಸತ್ಯಾಂಶಗಳಾಗಿವೆ ಎಂದು ತಿಳಿಯಲಾಗಿದೆ.

ಅಧ್ಯಾಯ ೫

ಉಪಸಂಹಾರ ಮತ್ತು ಸಲಹೆಗಳು

ಅಧ್ಯಾಯ -೫

ಉಪಸಂಹಾರ ಮತ್ತು ಸಲಹೆಗಳು

೫.೧ ಉಪಸಂಹಾರ :

ಯಾವುದೇ ಒಂದು ಅಧ್ಯಯನ ಪ್ರಾರಂಭವಾಗಬೇಕಾದರೆ, ಪ್ರಸ್ತಾವನೆ ಎಷ್ಟು ಮುಖ್ಯವೋ ಅಷ್ಟೇ ಅಧ್ಯಯನ ಸಂಪೂರ್ಣವಾಗಬೇಕಾದರೆ ಅದಕ್ಕೆ ಉಪಸಂಹಾರವು ಅಷ್ಟೇ ಅಗತ್ಯವಾದದ್ದು. ಒಂದು ವೇಳೆ ಇವು ಎರಡೂ ಇಲ್ಲದೇ ಹೋದರೆ ಅಧ್ಯಯನ ವಿಷಯ ಕಳಸವಿಲ್ಲದ ತೇರಿನಂತಾಗುತ್ತದೆ.

ಭಾರತ ದೇಶವು ೧೯೪೭ ಅಗಷ್ಟ್ ೧೫ ರಂದು ಸ್ವತಂತ್ರ ಪಡೆದುಕೊಂಡಿತು. ಅಂದಿನಿಂದ ಅದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳೆಂದರೆ, ಬಡತನ, ಆಹಾರ ಸಮಸ್ಯೆ, ಆರೋಗ್ಯ ಸಮಸ್ಯೆ, ವಸತಿ ಸಮಸ್ಯೆ, ಆರ್ಥಿಕ ಸಮಸ್ಯೆ ಮತ್ತು ಶಿಕ್ಷಣ ಸಮಸ್ಯೆಯು ಒಂದಾಗಿದೆ. ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯನ್ನು ಜ್ಞಾನವಂತನಾಗಿ ಮಾಡುತ್ತಿದೆ. ಸಂಸ್ಕೃತಿಯ ಅಭಿವೃದ್ಧಿಗೆ ಮತ್ತು ಸಂಸ್ಕೃತಿಯ ಅನಭಿವೃದ್ಧಿಗೆ ಕಾರಣವು ಆಗುತ್ತದೆ. ಭಾರತ ಸರ್ಕಾರ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು, ಶಿಕ್ಷಣದ ಸಮಸ್ಯೆಯನ್ನು ತೊಡೆದು ಹಾಕಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದೆ. ಅಂತಹ ಪ್ರಯತ್ನಗಳಲ್ಲಿ ೨೦೦೧ರಲ್ಲಿ ಕೇಂದ್ರ ಸರ್ಕಾರವು ಸರ್ವಶಿಕ್ಷಣ ಅಭಿಯಾನ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯ ಅಡಿಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ೨೮-೦೪-೨೦೦೧ ರಿಂದ ಎಸ್.ಡಿ.ಎಮ್.ಸಿ. ಪ್ರಾಥಮಿಕ ಶಾಲೆಗಳಲ್ಲಿ ಈ ಸಮಿತಿಯನ್ನು ಸ್ಥಾಪಿಸಲಾಯಿತು. ಗ್ರಾಮದ ೧೭ ಜನರಿಂದ ಕೂಡಿದ ಒಂದು ಸಮಿತಿಯಾಗಿದ್ದು ಇವರಲ್ಲಿ ೯ ಜನ ಪ್ರತಿನಿಧಿಗಳನ್ನು ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ-ತಾಯಿಯರಾಗಿರುತ್ತಾರೆ. ಇವರಲ್ಲಿ ಕನಿಷ್ಠ ೩ ಜನ ಮಹಿಳೆಯರಿರುತ್ತಾರೆ. ಎಸ್.ಸಿ ಮತ್ತು ಎಸ್.ಟಿ. ಹಾಗೂ ಅಲ್ಪಸಂಖ್ಯಾತ ಸಮುದಾಯದಿಂದ ಒಬ್ಬೊಬ್ಬ ಪ್ರತಿನಿಧಿ ಇರುತ್ತಾರೆ. ೯ ಜನರಲ್ಲಿ ಒಬ್ಬರು ಅಧ್ಯಕ್ಷರು ಮತ್ತು ಇನ್ನೊಬ್ಬರು ಉಪಾಧ್ಯಕ್ಷರಾಗಿರುತ್ತಾರೆ. ಶಾಲೆಯ ಪ್ರಧಾನ ಗುರುಗಳು ಈ ಸಮಿತಿಯ ಕಾರ್ಯದರ್ಶಿಯರಾಗಿರುತ್ತಾರೆ. ಇದು ಅಲ್ಲದೇ ೩ ಜನ ಪದನಿಮಿತ್ಯ ೩ ಜನ ನಾಮನಿರ್ದೇಶನ ಮತ್ತು ೨ ಮಕ್ಕಳು ಪ್ರತಿನಿಧಿಗಳಾಗಿರುತ್ತಾರೆ. ಈ ಪದನಿಮಿತ್ಯ ಸದಸ್ಯರಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತರು, ಅಂಗನವಾಡಿ ಶಿಕ್ಷಕಿಯರು ಇರುತ್ತಾರೆ.

ಎಸ್.ಡಿ.ಎಮ್.ಸಿ. ಸಮಿತಿಯ ಇಂದಿನ ಶಾಲೆಗಳ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಇದು ಇಡೀ ಸಮುದಾಯವನ್ನು ಶಿಕ್ಷಣದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಅದಕಾರಣ ನಾನು ಎಂ.ಫಿಲ್. ಪದವಿಯ ಅಧ್ಯಯನಕ್ಕಾಗಿ "ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ.

ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಕಿರು ಸಂಶೋಧನೆಯನ್ನು ಕೈಗೊಂಡಿದ್ದೇನೆ. ಈ ಸಂಶೋಧನೆಯನ್ನು ವಿಜಾಪುರ ಜಿಲ್ಲೆ ಇಂಡಿ ತಾಲೂಕಿನ ಚಡಚಣ ವಲಯದಲ್ಲಿ ಬರುವ ೨೦ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಂಡು. ಈ ಶಾಲೆಗಳಲ್ಲಿನ ೨೦ ಜನ ಎಸ್.ಡಿ.ಎಮ್.ಸಿಯ ಅಧ್ಯಕ್ಷರನ್ನು, ೨೦ ಜನ ಶಾಲೆಯ ಮುಖ್ಯ ಗುರುಗಳನ್ನು ಪ್ರತಿಸ್ಪಂದಿಗಳನ್ನಾಗಿ ಆಯ್ಕೆ ಮಾಡಿಕೊಂಡು. ಸಂಶೋಧನೆ ಕೈಗೊಳ್ಳಲಾಯಿತು. ಈ ಸಂಶೋಧನೆಯ ಮುಖ್ಯ ಉದ್ದೇಶ ಎಸ್.ಡಿ.ಎಮ್.ಸಿ.ಯ ಮೂಲಕ ಶಾಲಾಶಿಕ್ಷಣದಲ್ಲಿ ಸಮುದಾಯ ಯಾವ ರೀತಿಯಾಗಿ ಪಾಲ್ಗೊಳ್ಳುತ್ತಿದೆ, ಪಾಲ್ಗೊಳ್ಳುವದರಿಂದ ಶಾಲೆಗೆ ಮತ್ತು ಸಮುದಾಯಕ್ಕೆ ಆಗುತ್ತಿರುವ ಅನುಕೂಲತೆಯ ಬಗ್ಗೆ ತಿಳಿದುಕೊಳ್ಳುವದಾಗಿತ್ತು.

ಈ ಸಂಶೋಧನೆಯಲ್ಲಿ ಒಟ್ಟು ೫ ಅಧ್ಯಾಯಗಳನ್ನು ಒಳಗೊಂಡಿದ್ದು, ಆರಂಭದ ಅಧ್ಯಾಯದಲ್ಲಿ ಸಂಶೋಧನೆಯ ಗುರಿ, ಉದ್ದೇಶ ಮತ್ತು ವ್ಯಾಪ್ತಿಯ ವಿವರವಾಗಿ ಬಗ್ಗೆ ಚರ್ಚಿಸಲಾಗಿದೆ. ದ್ವಿತೀಯ ಅಧ್ಯಾಯದಲ್ಲಿ ಸಮುದಾಯ ಮತ್ತು ಶಿಕ್ಷಣದ ಅರ್ಥ, ವ್ಯಾಖ್ಯೆಗಳ ಹಾಗೂ ಸಮುದಾಯ, ಶಿಕ್ಷಣಕ್ಕೂ ಇರುವ ಸಂಬಂಧದ ಬಗ್ಗೆ ಚರ್ಚಿಸಲಾಗಿದೆ.

ತೃತೀಯ ಅಧ್ಯಾಯದಲ್ಲಿ ಎಸ್.ಡಿ.ಎಮ್.ಸಿ.ಯ ಹಿನ್ನೆಲೆ, ಅರ್ಥ, ಉದ್ದೇಶಗಳು, ರಚನೆ, ಅಧಿಕಾರ ಮತ್ತು ಕರ್ತವ್ಯಗಳು ಅದರಲ್ಲಿ ನಡೆಯುವ ಸಭೆಗಳು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಕಾರ್ಯ ಚಟುವಟಿಕೆಯ ಬಗ್ಗೆ ಮತ್ತು ಶಾಲಾ ಶಿಕ್ಷಣದಲ್ಲಿ ಸಮುದಾಯ ಯಾವ ರೀತಿಯಾಗಿ ಪಾಲ್ಗೊಳ್ಳುತ್ತದೆ ಎಂಬುದರ ಬಗ್ಗೆ ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಾಹಿತಿಯ ಸಂಗ್ರಹಣ, ವರ್ಗೀಕರಣ, ಮತ್ತು ವಿಶ್ಲೇಷಣೆ ಹಾಗೂ ಅಧ್ಯಯನದಿಂದ ಕಂಡುಬಂದ ಸತ್ಯಾಂಶಗಳ ಬಗ್ಗೆ ತಿಳಿಸಲಾಗಿದೆ. ಕೊನೆಯ ಒಂದು ಅಧ್ಯಾಯದಲ್ಲಿ ಉಪಸಂಹಾರ ಮತ್ತು ಸಲಹೆಗಳನ್ನು ತಿಳಿಸಲಾಗಿದೆ.

ಒಟ್ಟಿನಲ್ಲಿ ನಾನು ಕೈಕೊಂಡ ಕಿರು ಅಧ್ಯಯನದಲ್ಲಿ ಕಂಡುಕೊಂಡ ಸತ್ಯಾಂಶಗಳೆಂದರೆ, ಆಧುನಿಕ ಶಾಲೆಗಳು ಸಮಗ್ರವಾಗಿ ಅಭಿವೃದ್ಧಿಯಾಗಬೇಕಾದರೆ, ಸಮುದಾಯುದ ಸಹಕಾರ ಬೇಕಾಗುತ್ತದೆ. ಸಮುದಾಯ ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಸಮಾಜ ಬಿಟ್ಟು ಶಾಲೆಗಳು ಅಭಿವೃದ್ಧಿ ಆಗಲಾರವು ಆದ್ದರಿಂದ ಭಾರತ ಸರ್ಕಾರ ಬಹಳಷ್ಟು ವಿಚಾರಶೀಲವಾಗಿ ಸಮುದಾಯವನ್ನು ಶಾಲಾ ಶಿಕ್ಷಣದಲ್ಲಿ ಸಹಭಾಗಿತ್ವಗೊಳಿಸಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನ್ನು ಜಾರಿಗೆ ತರಲಾಗಿದೆ ಎಂದು ಹೇಳಬಹುದು.

ಎಸ್.ಡಿ.ಎಮ್.ಸಿ. ಸಮಿತಿಯು ಶಾಲೆಯ ಅಭಿವೃದ್ಧಿಗೆ ಬೇಕಾಗುವ ಎಲ್ಲತರದ ಭೌತಿಕ ಸೌಲಭ್ಯಗಳನ್ನು ಕಲ್ಪಿಸಿಕೊಡಲು, ಶಾಲೆಯ ಮೇಲೆ ನಿಯಂತ್ರಣವನ್ನು ವಿಧಿಸಲು, ಶಾಲಾಮಕ್ಕಳಿಗೆ ಎಲ್ಲ ತರದ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಗುಣಾತ್ಮಕ ಶಿಕ್ಷಣ ಕೊಡಿಸಲು ಇದು ಸಹಾಯಕಾರಿಯಾಗಿದೆ ಎಂದು ತಿಳಿದು ಬಂದಿದೆ.

ಅದೇ ರೀತಿಯಾಗಿ ಪ್ರತಿವಾದಿಗಳಾಗಿ ಆಯ್ಕೆಮಾಡಿಕೊಂಡ ೨೦ ಜನ ಶಾಲೆಯ ಮುಖ್ಯ ಗುರುಗಳ ಅಭಿಪ್ರಾಯವನ್ನು ಕೇಳಿದಾಗ ಶಾಲೆಯ ಅಭಿವೃದ್ಧಿಗೆ ಸಮುದಾಯದ ಸಹಕಾರ ಪಡೆಯಲು

ಎಸ್.ಡಿ.ಎಮ್.ಸಿಯು ಒಂದು ಸಾಧನವಾಗಿದೆ. ಮತ್ತು ಇದನ್ನು ಪ್ರತಿಯೊಂದು ಶಾಲೆಗಳಲ್ಲಿ ನಿರಂತರವಾಗಿ ಮುಂದುವರೆಯಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

"ಆರಂಭದಲ್ಲಿ ಹಾಕಿಕೊಂಡ ಪ್ರಾಕಲ್ಪನೆಗಳನ್ನು ಕೈಗೊಂಡ ಸಂಶೋಧನೆಯ ಫಲಿತಾಂಶಕ್ಕೆ ತುಲನೆ ಮಾಡಿ ನೋಡಿದಾಗ ಮೊದಲನೇ ಪ್ರಾಕಲ್ಪನೆಯ ಪ್ರಕಾರ ಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಗಳು ಶೇ.೧೦೦ರಷ್ಟು ಸುಧಾರಣೆಯಾಗುತ್ತಿವೆ ಎಂದು ತಿಳಿದು ಬರುತ್ತದೆ. ಅದೇ ರೀತಿ ಎರಡನೇ ಪ್ರಾಕಲ್ಪನೆಯೂ ಸಹ ಬಂದ ಫಲಿತಾಂಶಕ್ಕೆ ತುಲನೆ ಮಾಡಿ ನೋಡಿದಾಗ ಸಮುದಾಯವನ್ನು ಶಾಲಾ ಶಿಕ್ಷಣದಲ್ಲಿ ಶೇ.೧೦೦ರಷ್ಟು ಪಾಲ್ಗೊಳ್ಳಲು ಸಹಾಯಕಾರಿಯಾಗಿದೆ ಎಂದು ತಿಳಿದು ಬರುತ್ತದೆ. ಅದೇ ರೀತಿಯಾಗಿ ಮೂರನೇಯ ಪ್ರಾಕಲ್ಪನೆಯೂ ಸಹ ಸಂಶೋಧನೆಯಿಂದ ಬಂದ ಫಲಿತಾಂಶಕ್ಕೆ ಹೋಲಿಕೆ ಮಾಡಿದಾಗ, ಎಸ್.ಡಿ.ಎಮ್.ಸಿ. ಸ್ಥಾಪನೆಯಿಂದ ಶಾಲೆಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಶೇ.೧೦೦ರಷ್ಟು ಪಡೆದುಕೊಳ್ಳಬಹುದಾಗಿದೆ ಎಂದು ಹೇಳಬಹುದು. ನಾನು ಕಿರು ಸಂಶೋಧನೆಗೆಂದು ಹಾಕಿಕೊಂಡ ಪ್ರಾಕಲ್ಪನೆಯು ಸಂಶೋಧನೆಯಿಂದ ಬಂದ ಫಲಿತಾಂಶದಿಂದ ಯಶಸ್ವಿಯಾಗಿವೆ." ಈ ಮೇಲಿನಂತೆ ನಾನು ಕೈಗೊಂಡ ಸಂಶೋಧನೆ ಸಂಕ್ಷಿಪ್ತಸಾರ ಮತ್ತು ಉಪಸಂಹಾರ ಇದಾಗಿದೆ.

೫.೨ ಸಲಹೆಗಳು :

"ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ ಎಸ್.ಡಿ.ಎಮ್.ಸಿ. ಒಂದು ಅಧ್ಯಯನ" ಎಂಬ ಕಿರುಸಂಶೋಧನೆಯ ಕಿರು ಪ್ರಯತ್ನ ನನ್ನದಾಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಕಿರುದಾದ ಕೆಲವು ಸಲಹೆಗಳನ್ನು ನೀಡಲು ಪ್ರಯತ್ನಿಸಿದ್ದೇನೆ. ಅವುಗಳೆಂದರೆ,

೧. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಸಮುದಾಯದ ಜನರಿಗೆ ನೀಡಬೇಕು.

೨. ಎಸ್.ಡಿ.ಎಮ್.ಸಿ.ಯ ಸದಸ್ಯರನ್ನು ಹೆಚ್ಚು ಅಕ್ಷರಸ್ಥರಾದವರನ್ನು, ಅದರ ಬಗ್ಗೆ ಆಸಕ್ತಿಯನ್ನು ಹೊಂದಿದ ವಿದ್ಯಾರ್ಥಿಯ ಪಾಲಕರನ್ನು ನೇಮಕ ಮಾಡಬೇಕು.

೩. ಎಸ್.ಡಿ.ಎಮ್.ಸಿ.ಯ ಸದಸ್ಯರ ನೈಜವಾದ ಕಾರ್ಯಚಟುವಟಿಕೆಗಳೇನು ಹಾಗೂ ಅವರು ಏನು ಮಾಡಬೇಕು ಎಂಬುದರ ಬಗ್ಗೆ, ತಿಳುವಳಿಕೆಯನ್ನು ನೀಡಬೇಕು.

೪. ಎಸ್.ಡಿ.ಎಮ್.ಸಿ.ಯು ಒಂದು ರಾಜಕೀಯ ಕ್ಷೇತ್ರವನ್ನಾಗಿ ಮಾಡದೇ ಶಾಲಾ ಅಭಿವೃದ್ಧಿಯ ಮಹತ್ವದ ಅಸ್ತ್ರವನ್ನಾಗಿ ಮಾಡಲು ಬೇಕಾಗುವ ಸಲಹೆ, ಸಹಕಾರವನ್ನು ಸರಕಾರ ನೀಡಬೇಕು.

೫. ಈ ಸಮಿತಿಗೆ ನೀಡಿದ ಅಧಿಕಾರ ಮತ್ತು ಕರ್ತವ್ಯಗಳನ್ನು ಸಮರ್ಪಕ ರೀತಿಯಲ್ಲಿ ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು.

೬. ಶಾಲೆಯ ಮುಖ್ಯ ಶಿಕ್ಷಕರಿಗೆ ಇದರ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗಿರುವದರಿಂದ ಅವರಿಗೆ ಇದರ ಬಗ್ಗೆ ಹೆಚ್ಚಿನ ಆಸಕ್ತಿ ಬರುವಂತೆ ಪ್ರೇರೇಪಿಸಬೇಕು.

೭. ಶಾಲೆಯ ಮುಖ್ಯಗುರುಗಳು ಎಸ್.ಡಿ.ಎಮ್.ಸಿ ಸದಸ್ಯರಿಗೆ ಬೇಕಾಗುವ ಮಾಹಿತಿಯನ್ನು ಸಕಾಲದಲ್ಲಿ ಪೂರೈಕೆ ಮಾಡಬೇಕು.

೮. ಎಸ್.ಡಿ.ಎಮ್.ಸಿ.ಯ ಸದಸ್ಯರು ತರುವಂತ ಕೆಲವು ಒತ್ತಡಗಳು, ಅವರು ನೀಡುವಂತ ಸಲಹೆಗಳನ್ನು ಶಾಲಾಶಿಕ್ಷಕರು ಅವುಗಳನ್ನು ಈ ಸಮಿತಿಯ ಅಡಿಯಲ್ಲಿ ಕಾರ್ಯಗತವಾಗುವಂತೆ ನೋಡಿಕೊಳ್ಳಬೇಕು.

೯. ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸುವಾಗ ಎಸ್.ಡಿ.ಎಮ್.ಸಿ. ಸದಸ್ಯರ ಬಿಡುವಿನ ಕಾಲಾವಧಿಯನ್ನು ನೋಡಿಕೊಂಡು ಕ್ರಿಯಾಯೋಜನೆ ತಯಾರಿಸುವ ದಿನಾಂಕವನ್ನು ನಿಗದಿಪಡಿಸಬೇಕು.

೧೦. ಎಸ್.ಡಿ.ಎಮ್.ಸಿ. ಸದಸ್ಯರಿಗೆ ಮತ್ತು ಮುಖ್ಯಗುರುಗಳಿಗೆ ಇದರ ಬಗ್ಗೆ ಸಮಯಕ್ಕನುಸಾರವಾಗಿ ತರಬೇತಿಯನ್ನು ನೀಡಬೇಕು.

೧೧. ಎಸ್.ಡಿ.ಎಮ್.ಸಿಯ ಸಭೆಗಳನ್ನು ಎಲ್ಲ ಸದಸ್ಯರನ್ನು ಕೂಡಿಸಕೊಂಡು ಶಾಲೆಯ ಅಭಿವೃದ್ಧಿ ಮೇಲುಸ್ತುವಾರಿ ವಿಷಯಗಳನ್ನು ಚರ್ಚೆಮಾಡಬೇಕು.

೧೨. ಶಾಲೆಯ ಆಡಳಿತ ವ್ಯವಸ್ಥೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರು ಎಸ್.ಡಿ.ಎಮ್.ಸಿ. ಸದಸ್ಯರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

೫.೩. ಆಧಾರ ಗ್ರಂಥಗಳು

೧. ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ -> ಸ್ಪಂದನ ೨೦೦೮-೦೯

೨. ಕರ್ನಾಟಕ ರಾಜ್ಯ ವಾರ್ತಾ ಪತ್ರ ೨೦೦೬ ರಿಂದ ೨೦೦೯.

೩. ಕರ್ನಾಟಕ ಸರ್ಕಾರ – ಮಾಲಿಕೆ–೩ ಸಮಕ್ಷಮ

೪. ಚ.ನ.ಶಂಕರ್‌ರಾವ್– ಸಮಾಜಿಕ ಸಂಸ್ಥೆಗಳು ಮತ್ತು ಸಮೂಹಗಳ ಅಧ್ಯಯನ

೫. ಚ.ನ.ಶಂಕರ್‌ರಾವ್– ಭಾರತೀಯ ಸಾಮಾಜಿಕ ಸಮಸ್ಯೆಗಳು

೬. ಚ.ನ.ಶಂಕರ್‌ರಾವ್– ಸಮಕಾಲೀನ ಭಾರತೀಯ ಸಮಾಜದ ಅಧ್ಯಯನ.

೭. ಡಾ|| ಎಚ್.ಎಂ.ಮರುಳಸಿದ್ಧಯ್ಯ – ಸಮುದಾಯ ಸಂಘಟನೆ

೮. ಎನ್.ಎಂ.ಗುಡ್ಡಳ್ಳಿ – ಶೈಕ್ಷಣಿಕ ತತ್ವಗಳು

೯. ಭರತ್ಭೂಷಣ್ ಬಿ. – ಶಿಕ್ಷಣದ ತಾತ್ವಿಕ ಹಾಗೂ ಸಾಮಾಜಿಕ ಆಧಾರಗಳು.

೧೦. ಎಸ್.ಬಿ.ಯಾದವಾಡ – ಪ್ರಗತಿಶೀಲ ಭಾರತದಲ್ಲಿ ಶಿಕ್ಷಣ

೧೧. ಪ್ರೊ.ಎಚ್.ಎಂ.ರಾಜಶೇಖರ – ಭಾರತ ಸರಕಾರ ಮತ್ತು ರಾಜಕೀಯ

ಪ್ರಶ್ನಾವಳಿಗಳು

ಸಂಶೋಧಕನ ಹೆಸರು ಮತ್ತು ವಿಳಾಸ : ಸುಭಾಸ. ಆರ್. ಜಾಧವ, ಇಂಚಗೇರಿ ಎಲ್.ಟಿ. ನಂ.2 ತಾ॥ ಇಂಡಿ ಜಿ॥ ವಿಜಾಪೂರ.
ಸಂಶೋಧನಾ ಕೇಂದ್ರದ ಹೆಸರು : ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ ಹಾರುಗೇರಿ, ಜಿ॥ ಬೆಳಗಾಂವ.
ಸಂಶೋಧನಾ ವಿಷಯ : "ಶಾಲಾ ಶಿಕ್ಷಣದಲ್ಲಿ ಸಮೂದಾಯದ ಸಹ ಭಾಗಿತ್ವ ಎಸ್.ಡಿ.ಎಂ.ಸಿ. ಒಂದು ಅಧ್ಯಯನ".
(**ಸೂಚನೆ** : ತಮಗೆ ಕೇಳಿದ ಪ್ರಶ್ನಾವಳಿಗಳಿಗೆ ದಯಮಾಡಿ ಉತ್ತರ ನೀಡಿ, ನೀವು ಕೊಟ್ಟ ಮಾಹಿತಿ ಗೌಪ್ಯವಾಗಿ ಇಡಲಾಗುವುದು.)

ಎಸ್.ಡಿ.ಎಂ.ಸಿ. ಸದಸ್ಯರ ಪ್ರಶ್ನಾವಳಿ

ಪ್ರತಿ ಸ್ಪಂದಿಗಳ ಮಾಹಿತಿ

ಭಾಗ–ಅ

ಹೆಸರು : ______________________________

ಲಿಂಗ __________ **ವಯಸ್ಸು** ____________ **ಜಾತಿ** :______________________

ಶಾಲೆಯ ಹೆಸರು :______________________________

ಶೈಕ್ಷಣಿಕ ಅರ್ಹತೆ : ______________________________

ಸೇವಾ ಅವಧಿ :______________

ಭಾಗ–ಬ

ನಿರ್ದಿಷ್ಟ ಪ್ರಶ್ನಾವಳಿಗಳು

1) ಎಸ್.ಡಿ.ಎಮ್.ಸಿ. ಎಂದರೇನು, ತಮಗೆ ಗೊತ್ತೆ?

ಹೌದು / ಇಲ್ಲ

2) ಹೌದಾದರೆ ಎಸ್.ಡಿ.ಎಂ.ಸಿ. ಯಾವುದಕ್ಕೆ ಇದೆ?
   1. ಶಲಾ ಅಭಿವೃದ್ಧಿ ಹಾಗೂ ಮೇಲುಸ್ತಾವಾರಿಸಲುವಾಗಿ. ☐
   2. ಆಡಳಿತ ನಡೆಸಲು. ☐
   3. ಶಿಕ್ಷಕರ ಮೇಲೆ ನಿಯಂತ್ರಣ ತರಲು. ☐
   4. ಮಕ್ಕಳ ಶೈಕ್ಷಣಿಕ ಸುಧಾರಣೆಗೆ. ☐
   5. ಮೇಲಿನ ಯಾವುದು ಅಲ್ಲ. ☐

3) ಎಸ್.ಡಿ.ಎಂ.ಸಿ. ನಿಮ್ಮ ಗ್ರಾಮದ ಶಾಲೆಯಲ್ಲಿ ಯಾವಾಗ ಸ್ಥಾಪನೆಯಾಯಿತು?
   1. ಕಳೆದ ಒಂದುವರ್ಷ. ☐
   2. 2. ಕಳೆದ ಮೂರುವರ್ಷ. ☐
   3. 3. ಕಳೆದ ಎರಡು ವರ್ಷ. ☐
   4. 4. ಕಳೆದ ಎಂಟುವರ್ಷ. ☐

4) ಎಸ್.ಡಿ.ಎಂ.ಸಿ. ಸದಸ್ಯರಾಗಿ ಎಷ್ಟುವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದೀರಿ?
   1. ಎಂಟು ವರ್ಷಗಳಿಂದ. ☐
   2. ಮೂರುವರ್ಷಗಳಿಂದ. ☐
   3. ಒಂದು ವರ್ಷಗಳಿಂದ . ☐
   4. ಎರಡು ವರ್ಷಗಳಿಂದ. ☐

5) ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯ ಅವಶ್ಯಕತೆ ಇದೆಯೇ?

ಹೌದು / ಇಲ್ಲ

6) ಎಸ್.ಡಿ.ಎಂ.ಸಿಯು ಸಮೂದಾಯ ಜನರಿಂದ ಶಾಲೆಸುಧಾರಣೆಗೆ ಸಹಾಯಕಾರಿ ಯಾಗಿದೆಯೇ?

ಹೌದು / ಇಲ್ಲ

7) ಎಸ್.ಡಿ.ಎಂ.ಸಿ. ಸದಸ್ಯರನ್ನು ಯಾರು ನೇಮಕ ಮಾಡುತ್ತಾರೆ?
   1. ಶಾಲಾ ಶಿಕ್ಷಕರು. ☐
   2. ಗ್ರಮಪಂಚಾಯತಿಯ ಚುನಾಯಿತಿ ಪ್ರತಿನಿಧಿಗಳು. ☐
   3. ಶಾಲೆಗೆ ಬರುವ ವಿಧ್ಯರ್ಥಿಗಳ ಪಾಲಕರು. ☐
   4. ಗ್ರಾಮದ ಹಿರಿಯರು/ಪಂಚರು. ☐

8) ಎಸ್.ಡಿ.ಎಂ. ಸಿಯ ಬಗ್ಗೆ ಹೇಗೆ ಮಾಹಿತಿ ಪಡೆದುಕೊಂಡಿದ್ದೀರಿ?
   1. ಶಾಲೆಯ ಮುಖ್ಯ ಶಿಕ್ಷಕರಿಂದ. ☐
   2. ಸರಕಾರಿ ಜಾಹಿತಾರುಗಳಿಂದ. ☐
   3. ಶಾಲಾ ಸಹ ಶಿಕ್ಷಕರಿಂದ. ☐
   4. ಗ್ರಾಮ ಪಂಚಾಯತಿಯಿಂದ. ☐

9) ಶಾಲೆಯ ಸಮಸ್ಯೆಗಳನ್ನು ಎಸ್.ಡಿ.ಎಂ.ಸಿ. ಸದಸ್ಯರು ಗುರುತಿಸುತ್ತಾರೆಯೇ?
   1. ತಕ್ಕಮಟ್ಟಿಗೆ ಗುರುತಿಸುತ್ತಾರೆ. ☐
   2. ಭಾಗಶಃ ಗುರುತಿಸುತ್ತಾರೆ. ☐
   3. ಗುರುತಿಸುವುದಿಲ್ಲ. ☐
   4. ತಪ್ಪು ಕಂಡು ಹಿಡಿಯುತ್ತಾರೆ. ☐

10) ಸಮುದಾಯದ ಸದಸ್ಯರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾರೆಯೇ?

ಹೌದು / ಇಲ್ಲ

11) ಸಮುದಾಯದ ಜನರನ್ನು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಎಸ್.ಡಿ.ಎಂ.ಸಿ. ಸಹಾಯಕಾರಿ ಯಾಗಿದೆಯೇ?
   1. ಎಸ್.ಡಿ.ಎಂ.ಸಿ. ಸಭೆಯಲ್ಲಿ ಭಾಗವಹಿಸಲು ಅವಕಾಶ. ☐
   2. ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ಅವಕಾಶ. ☐
   3. ಇತರ ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶ. ☐
   4. ಮೇಲಿನ ಎಲ್ಲವು ತಪ್ಪು. ☐

12) ಶಾಲೆಯ ಸಮಸ್ಯೆಗಳನ್ನು ತೊಡೆದು ಹಾಕಲು ಸಮೂದಾಯದ ಜನರಿಗೆ ಎಸ್.ಡಿ.ಎಂ.ಸಿ. ಸಹಾಯಕಾರಿಯಾಗಿದೆಯೇ?

ಹೌದು / ಇಲ್ಲ

13) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸ್ಥಾಪನೆಯಿಂದ ಸಮೂದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಒದಗಿಸಲು ಸಹಾಯಕಾರಿಯಾಗಿದೆಯೇ?

ಹೌದು / ಇಲ್ಲ

14) ಹೌದಾದರೆ ಹೇಗೆ ಸಹಕಾರಿಯಾಗಿದೆ?
   1. ಮಕ್ಕಳ ದಾಖಲಾತಿ ಹಾಜರಾತಿ ಸುಧಾರಣೆಯಿಂದ. ☐
   2. ಶಾಲೆಗೆ ಬೋಧನೋಪಕರಣ ಖರೀದಿಸಲು ಮುಖ್ಯ ಗುರುಗಳು ಇವರಿಗೆ ಹೇಳುವುದರಿಂದ. ☐
   3. ಸಮಯಕ್ಕೆ ಸರಿಯಾಗಿ ಮಕ್ಕಳು ಹಾಜರಾಗುವುದರಿಂದ. ☐
   4. ಮೇಲಿನ ಎಲ್ಲವೂ. ☐

15) ಎಸ್.ಡಿಎಂ.ಸಿಯ ಸದಸ್ಯರಾಗಿ ಶಾಲೆಯ ವಾರ್ಷಿಕ ಕಾರ್ಯಚಟುವಟಿಕೆಯ ಯೋಜನೆ ರೂಪಿಸುವಲ್ಲಿ ನೀವು ಪಾಲ್ಗೊಳ್ಳುತ್ತೀರಾ?

ಹೌದು / ಇಲ್ಲ

16) ಹೌದಾದರೆ ಹೇಗೆ ಪಾಲ್ಗೊಳ್ಳುತ್ತಿರಿ?

1. ಎಸ್.ಡಿ.ಎಂ.ಸಿ. ಸಭೆಯಲ್ಲಿ ಭಾಗವಹಿಸಲುವುದರ ಮೂಲಕ.
2. ಸ್ಥಾನಿಕ ಬಿಡುವು ನಿರ್ಧರಿಸಲು ಮಾರ್ಗದರ್ಶನ.
3. ಶಾಲೆಗೆ ಬೇಕಾಗುವ ಭೌತಿಕ ಸೌಲಭ್ಯ ಸಲುವಾಗಿ.
4. ಮೇಲಿನ ಎಲ್ಲವು ಸರಿ.

17) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಮೂಲಕ ರಾಜಕೀಯ ನಾಯಕರು ಪ್ರವೇಶಿಸುವಂತಾಗಿದೆಯೇ?

ಹೌದು / ಇಲ್ಲ

18) ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಇದೆಯೇ?

ಹೌದು / ಇಲ್ಲ

19) ಶಾಲೆಗಳಲ್ಲಿ ರಾಜಕೀಯ ನಾಯಕರ ಅವಶ್ಯಕತೆ ಏತಕ್ಕೆ ಬೇಕು?

1. ಶಾಲೆಯ ಸುಧಾರಣೆಗೆ.
2. ಶಾಲೆಗೆ ಅನುಧಾನ ಕಲ್ಪಿಸಲು.
3. ಶಾಲೆ ಹಾಳುಮಾಡಲು.
4. ಮೇಲಿನ ಎಲ್ಲವೂ ತಪ್ಪು.

20) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಶಾಲಾ ಶಿಕ್ಷಣದಲ್ಲಿ ಸಮುದಾಯ ಸಕ್ರಿಯಾವಾಗಿ ಪಾಲ್ಗೊಳ್ಳುವಂತಾಗಿದೆಯೇ?

ಹೌದು / ಇಲ್ಲ

21) ಹೌದಾದರೆ ಹೇಗೆ ಪಾಲ್ಗೊಳ್ಳುತ್ತಾರೆ?

1. ಶಾಲಾ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಲು ಸಭೆ ಸೇರುವುದು.
2. ಶಾಲಾ ಕ್ರಿಡಾಕೂಟದ ಸಮಾರಂಭಗಳಲ್ಲಿ ಭಾಗವಹಿಸುವುದು.
3. ಶಾಲಾ ಹಂತದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು.
4. ಮೇಲಿನ ಎಲ್ಲವೂ ಸರಿ.

22) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಮುಂದುವರೆಯಬೇಕೆ?

ಹೌದು / ಇಲ್ಲ

23) ಎಸ್.ಡಿ.ಎಂ.ಸಿ. ವ್ಯವಸ್ಥೆಯ ಲೋಪ-ದೋಷಗಳೇನು?

1. ಶಿಕ್ಷಕರಿಗೆ ಮೇಲಿಂದ ಮೇಲೆ ಕೀರುಕುಳ.
2. ಕ್ಷುಲಕ ವಿಷಯದ ಸಲುವಾಗಿ ಪದೇ ಪದೇ ಶಾಲೆಗೆ ಭೇಟಿ.
3. ಧಾನಾತ್ಮಕ ಮನೋಭಾವನೆಯ ಕೊರತೆ.
4. ಮೇಲಿನ ಎಲ್ಲವೂ.

24) ಎಸ್.ಡಿ.ಎಂ.ಸಿ. ಯಲ್ಲಿರುವ ಲೋಪ-ದೋಷಗಳನ್ನು ಹೇಗೆ ತೊಡೆದು ಹಾಕಬೇಕು.

1. ಎಸ್.ಡಿ.ಎಂ.ಸಿ. ಸದಸ್ಯರಿಗೆ ಅದರ ನಿಯಮ ತಿಳಿಸುವುದು.
2. ಸಿ.ಅರ್.ಸಿ. ಹಂತದಲ್ಲಿ ಸದಸ್ಯರಿಗೆ ತರಬೇತಿ ನೀಡುವುದು.
3. ಅಗತ್ಯ ಸಂದರ್ಭದಲ್ಲಿ ಮುಖ್ಯ ಗುರುಗಳು ಇವರಿಗೆ ಮಾರ್ಗದರ್ಶನ.
4. ಮೇಲಿನ ಎಲ್ಲವೂ.

ಪ್ರಶ್ನಾವಳಿಗಳು

ಸಂಶೋಧಕನ ಹೆಸರು ಮತ್ತು ವಿಳಾಸ : ಸುಭಾಸ. ಆರ್. ಜಾಧವ, ಇಂಚಗೇರಿ ಎಲ್.ಟಿ. ನಂ.2 ತಾ॥ ಇಂಡಿ ಜಿ॥ ವಿಜಾಪೂರ.
ಸಂಶೋಧನಾ ಕೇಂದ್ರದ ಹೆಸರು : ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ ಹಾರುಗೇರಿ, ಜಿ॥ ಬೆಳಗಾಂವ.
ಸಂಶೋಧನಾ ವಿಷಯ : "ಶಾಲಾ ಶಿಕ್ಷಣದಲ್ಲಿ ಸಮೂದಾಯದ ಸಹ ಭಾಗಿತ್ವ ಎಸ್.ಡಿ.ಎಂ.ಸಿ. ಒಂದು ಅಧ್ಯಯನ".

(**ಸೂಚನೆ** : ತಮಗೆ ಕೇಳಿದ ಪ್ರಶ್ನಾವಳಿಗಳಿಗೆ ದಯಮಾಡಿ ಉತ್ತರ ನೀಡಿ, ನೀವು ಕೊಟ್ಟ ಮಾಹಿತಿ ಗೌಪ್ಯವಾಗಿ ಇಡಲಾಗುವುದು.)

ಶಾಲಾ ಶಿಕ್ಷಕರಿಗೆ ಪ್ರಶ್ನಾವಳಿ

ಪ್ರತಿ ಸ್ಪಂದಿಗಳ ಮಾಹಿತಿ

ಭಾಗ–ಅ

ಹೆಸರು : ____________________

ಲಿಂಗ ______ **ವಯಸ್ಸು** ________ **ಜಾತಿ** :____________________

ಶಾಲೆಯ ಹೆಸರು :____________________

ಶೈಕ್ಷಣಿಕ ಅರ್ಹತೆ : ____________________

ಸೇವಾ ಅವಧಿ :____________________

ಭಾಗ–ಬ

ನಿರ್ದಿಷ್ಟ ಪ್ರಶ್ನಾವಳಿಗಳು

1) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಶಾಲಾ ಸುಧಾರಣೆಗೆ ಸಹಾಯಕಾರಿ ಯಾಗಿದೆಯೇ?
ಹೌದು / ಇಲ್ಲ

2) ಹೌದಾದರೆ ಹೇಗೆ ಸಹಾಯಕವಾಗಿದೆ?
   1. ಶಾಲೆಗೆ ವಿವಿಧ ರೀತಿಯ ಸೌಲಭ್ಯ ಕೊಡಿಸಲು. ☐
   2. ಸೂಕ್ತವಾದ ರೀತಿಯಲ್ಲಿ ಶಾಲೆ ಮುಂದುವರೆಯಲು. ☐
   3. ವಿದ್ಯಾರ್ಥಿಗಳದಾಖಲಾತಿ ಹಾಜರಾತಿ ಸುಧಾರಿಸಲು. ☐
   4. ಮೇಲಿನ ಎಲ್ಲವೂ ಸರಿ. ☐

3) ಇಲ್ಲವಾದರೆ ಏಕಿಲ್ಲ?
   1. ಶಿಕ್ಷಕರಿಗೆ (ಮು.ಗು) ಕೆಲಸದ ಹೊರೆಯಾಗಿದೆ. ☐
   2. ಸಮಯದ ಅಭಾವ. ☐
   3. ಸಹ ಶಿಕ್ಷಕರಿಗೆ ಕಿರುಕುಳ. ☐
   4. ಮೇಲಿನ ಎಲ್ಲವೂ ತಪ್ಪು. ☐

4) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಸಮೂದಾಯದ ಜನರ ಸಹಕಾರ ದೊರೆಯುತ್ತಿದೆಯೇ?
ಹೌದು / ಇಲ್ಲ

5) ಶಲೆಗಳಲ್ಲಿ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಸದಸ್ಯರ ಸಹಕಾರ ಪಡೆಯಲು ಯಾವ (ಕ್ರಮಗಳಿರಬೇಕು?)
   1. ಸಭೆಗೆ ತಪ್ಪದೇ ಸಮಯಕ್ಕೆ ಸರಿಯಾಗಿ ಹಾಜರಾಗುವುದು. ☐
   2. ಸಭೆಗೆ ಹಾಜರಾಗದೇ ಇರುವುದು. ☐
   3. ಪದೇ ಪದೇ ಸದಸ್ಯರಿಗೆ ತರಬೇತಿ ನೀಡುವುದು. ☐
   4. ಮೇಲಿನ ಎಲ್ಲವೂ ತಪ್ಪು. ☐

6) ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ನಿಮ್ಮ ಶಾಲೆಯ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಹಾಯಕಾರಿ ಯಾಗಿದೆಯೇ?

ಹೌದು / ಇಲ್ಲ

7) ಹೌದಾದರೆ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ನಿಮ್ಮ ಶಾಲೆಯ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಹೇಗೆ ಸಹಾಯಕಾರಿ ಯಾಗಿದೆ.

1. ಎಸ್.ಡಿ.ಎಂ.ಸಿ. ಸಭೆಯಲ್ಲಿ ಸದಸ್ಯರ ಸಕ್ರೀಯ ಪಾಲ್ಗೊಳ್ಳುವಿಕೆಯಿಂದ. ☐
2. ದಾಖಲಾತಿ ಹಾಜರಾತಿ ಸುಧಾರಣೆಗೆ ಕ್ರಮ ತೆಗೆದುಕೊಳ್ಳುವುದರಿಂದ. ☐
3. ಶಾಲೆಗೆ ಮೇಲಿಂದ ಮೇಲೆ ಭೆಟ್ಟಿ ನೀಡುವುದರಿಂದ. ☐
4. ಮೇಲಿನ ಎಲ್ಲವೂ ಸರಿ. ☐

8) ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಶಾಲೆಯ ದೈನಂದಿನ ಕಾರ್ಯ ನಿರ್ವಹಿಸಲು ತೊಂದರೆಯಾಗುತ್ತಿದೆಯೇ?

ಹೌದು / ಇಲ್ಲ

9) ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಶಾಲಾ ದೈನಂದಿನ ಕಾರ್ಯನಿರ್ವಹಸಲು ಹೇಗೆ ತೊಂದರೆಯಾಗಿದೆ?

1. ಸಮೂದಾಯದ ಒತ್ತಡ. ☐
2. ಸದಸ್ಯರು ಪದೇ ಪದೇ ಶಾಲೆಗೆ ಭೇಟಿ ನೀಡುವುದರಿಂದ. ☐
3. ವಯಕ್ತಿಕ ಕಾರಣ ಶಾಲೆಗೆ ತಂದು ಜಗಳ ಮಾಡುವುದು. ☐
4. ಮೇಲಿನ ಎಲ್ಲವೂ ಸರಿ. ☐

10) ಶಾಲೆಯಲ್ಲಿ ನಡೆಯುವ ಕಾರ್ಯ ಚಟುವಟಿಕೆಯ ಬಗ್ಗೆ ಸಮೂದಾಯದ ಸದಸ್ಯರಿಗೆ ತಿಳುವಳಿಕೆ ನೀಡಿದ್ದೀರಾ?

ಹೌದು / ಇಲ್ಲ

11) ಶಾಲೆಯಲ್ಲಿ ನಡೆಯುವ ಕಾರ್ಯ ಚಟುವಟಿಕೆಯಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು ಭಾಗವಹಿಸುತ್ತಾರೆಯೇ?

ಹೌದು / ಇಲ್ಲ

12) ಇಲ್ಲದಾದರೆ ಕಾರಣ ಕೊಡಿ?

1. ದೈನಂದಿನ ಕೆಲಸ. ☐
2. ಅನಕ್ಷರಸ್ಥರು. ☐
3. ಶಾಲೆಯ ಬಗ್ಗೆ ಕೀಳರಿಮೇ. ☐
4. ಮೇಲಿನ ಎಲ್ಲವೂ. ☐

13) ಶಾಲೆಯ ಕಾರ್ಯಚಟುವಟಿಕೆಯ ಬಗ್ಗೆ ಎಸ್.ಡಿ.ಎಂ.ಸಿ ಯ ಸದಸ್ಯರು ಸಲಹೆ ನೀಡುತ್ತಾರೆಯೇ?

ಹೌದು / ಇಲ್ಲ

14) ಹೌದಾದರೆ ಸಲಹೆಗಳಾವವು?

1. ಬಿಸಿ ಉಟದ ಅನುಷ್ಠಾನ ಸರಿಯಾಗಿರಬೇಕು. ☐
2. ಸ್ವಚ್ಚತೆ ಕಾಪಾಡುವುದು. ☐
3. ಸರಕಾರ ಸೌಲಭ್ಯದ ಬಗ್ಗೆ ಮಾಹಿತಿ. ☐
4. ಮೇಲಿನ ಎಲ್ಲವೂ ಸರಿ. ☐

15) ಎಸ್.ಡಿ.ಎಂ.ಸಿ.ಯ ಸಭೆಗಳಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸುತ್ತೀರಿ?

1. ಶಾಲೆ ಬಿಟ್ಟ ಮಕ್ಕಳ ಬಗ್ಗೆ. ☐
2. ಅನುದಾನದ ಅನುಮೋದನೆ. ☐
3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳು. ☐

☐

4. ಮೇಲಿನ ಎಲ್ಲವೂ.

16) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ.ಯ ಮೂಲಕ ರಾಜಕೀಯ ನಾಯಕರ ಅನಾವಶ್ಯಕ ಒತ್ತಡಗಳು ಹೆಚ್ಚಾಗುತ್ತಿದೆಯೇ?

ಹೌದು / ಇಲ್ಲ

17) ಹೌದಾದರೆ ಒತ್ತಡಗಳಾವವು?

1. ಸ್ವಜಾತಿಯ ಅಧ್ಯಕ್ಷರ ನೇಮಕ. ☐
2. ಶಾಲೆಯ ಚಿಕ್ಕ ವಿಷಯಗಳ ಅನಾವಶ್ಯಕ ಚರ್ಚೆ. ☐
3. ಮು.ಗು. ರವರ ಮೇಲೆ ಹರಿಹಾಯುವುದು. ☐
4. ಮೆಲಿನ ಎಲ್ಲವೂ. ☐

18) ಅವುಗಳನ್ನು ಹೇಗೆ ತಡೆಗಟ್ಟಬೇಕು?

1. ತಿಳುವಳಿಕೆ ಮತ್ತು ಮಾರ್ಗದರ್ಶನ ನೀಡುವುದು. ☐
2. ಶಾಲೆಯ ಸೌಲಭ್ಯಗಳ ಮನವರಿಕೆ ಮಾಡುವುದು. ☐
3. ಎಸ್.ಡಿ.ಎಂ.ಸಿಯ ನಿಯಮ ತಿಳಿಸುವುದು. ☐
4. ಮೇಲಿನ ಎಲ್ಲವೂ. ☐

19) ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಸಭೆಗಳನ್ನು ವರ್ಷದಲ್ಲಿ ಎಷ್ಟು ಸಲ ನಡೆಸುತ್ತೀರಿ?

1. 1 ರಿಂದ 4 ಸಲ. ☐
2. 5 ರಿಂದ 8 ಸಲ. ☐
3. ಅವಶ್ಯಕತೆಗೆ ತಕ್ಕಂತೆ ಹೆಚ್ಚಾಗಬಹುದು. ☐
4. 9 ರಿಂದ 12 ಸಲ. ☐

20) ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಸ್ಥಾಪನೆಯಿಂದ ಸಮೂದಾಯವು ಶಾಲಾ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತಾಗಿದೆಯೇ?

ಹೌದು / ಇಲ್ಲ

21) ಶಾಲಾ ಶಿಕ್ಷಣದಲ್ಲಿ ಸಮೂದಾಯದ ಸಹಭಾಗಿತ್ವಗೊಳಿಸಲು ಎಸ್.ಡಿ.ಎಂ.ಸಿ. ಒಂದು ಸಾಧನ ವಾಗಿದೆಯೇ?

ಹೌದು / ಇಲ್ಲ

22) ಶಾಲೆಗಳಲ್ಲಿ ಸಮೂದಾಯ ಸಹಭಾಗಿತ್ವ ವ್ಯವಸ್ಥೆಯು ಮುಂದು ವರೆಯಬೇಕೆ?

ಹೌದು / ಇಲ್ಲ

23) ಬೇಡವೆಂದರೆ ಶಾಲೆಯ ಸುಧಾರಣೆ ಹೇಗೆ ಮಾಡಬೇಕು?

1. ಸದಸ್ಯರಿಗೆ ತಿಳುವಳಿಕೆ ಮಾರ್ಗದರ್ಶನ. ☐
2. ಚಿಕ್ಕ ವಿಷಯವನ್ನು ಚರ್ಚೆಗೆ ಅವಕಾಶ ಕೊಡದೆ ಇರುವುದು. ☐
3. ಸರ್ವರೂ ಸಮಾನರು ಎಂಬ ಕಲ್ಪನೆಯ ಮಾಡಿಸುವುದು. ☐
4. ಮೇಲಿನ ಎಲ್ಲವೂ. ☐